ವಾಚಕರಲ್ಲಿ ವಿನಂತಿ

ಈ ಚಿಕ್ಕ ಪುಸ್ತಕದಲ್ಲಿ ಉಲ್ಲೇಖಿಸಲಾದ ಔಷಧಿ ಯೋಗಗಳು ಅನುಭವಸಿದ್ಧವಾದವುಗಳಿವೆ. ಕಾರಣ ಅವುಗಳ ಉಪಯೋಗದಿಂದ ತಮಗೆ ಕಂಡುಬಂದ ಗುಣಾವಗುಣಗಳ ಬಗ್ಗೆ ವಾಚಕರು ತಿಳಿಸಿದಲ್ಲಿ, ಆಯೋಗಗಳಲ್ಲಿ ಮತ್ತೆ ಹೆಚ್ಚು ಕಡಿಮೆ ಮಾಡಲು ನನಗೆ ಅನುಕೂಲವಾಗುವದು. ಮತ್ತು ಪ್ರತ್ಯೇಕವಾಗಿ ತಮಗೆ ಗೊತ್ತಿದ್ದ, ಇಂಥ ಬೇರೆ ಕೆಲ ಉಪಯುಕ್ತ ಯೋಗಗಳನ್ನು ತಿಳಿಸಿದಲ್ಲಿ, ಅವುಗಳ ಯೋಗ್ಯ ವಿಮರ್ಶೆ ಮಾಡಿ, ಈ ಪುಸ್ತಕದ ಮುಂದಿನ ಆವೃತ್ತಿಯಲ್ಲಿ ಅತ್ಯಂತ ಕೃತಜ್ಞತೆಯಿಂದ ಸೇರಿಸುವೆನು.

ಬಾಗಲಕೋಟೆ } ವೈದ್ಯ ಮಧ್ವಾಚಾರ್ಯ ಬುರ್ಲಿ
ಗ್ರಂಥಕರ್ತ

॥ ಶ್ರೀ ಧನ್ವಂತರಿ ಪ್ರಸನ್ನ ॥

ಆಯುರ್ವೇದೀಯ ಪ್ರಥಮಚಿಕಿತ್ಸೆ

ಬರೆದವರು:

ವೈದ್ಯ ಶ್ರೀ. ಬಾಳಿಗ ಮಧ್ವಾಚಾರ್ಯರು

(ಸಂಸ್ಕೃತ ವೈದ್ಯ, ಸುಲಭ ಔಷಧಿ ಸಂಗ್ರಹಗಳ ಲೇಖಕರು)

(೧೦೦೦ ಪ್ರತಿಗಳು)

ಪ್ರಕಾಶಕರು:

ಶ್ರೀ. ಬಿ. ಎಸ್. ಕೌಜಲಗಿ

ವಿಜಾಪೂರ ಜಿಲ್ಲಾ ಸರ್ವೋದಯ ಸಂಚಾಲಕರು

ಬಾಗಲಕೋಟ

೧೯೫೨

ಮುದ್ರಕರು :
ಶ್ರೀ. ಹ. ರಾ. ಮೋಹರೆ
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ



ಪ್ರಕಾಶಕರು :
ಶ್ರೀ. ಟಿ. ಎಸ್. ಕೌಜಲಗಿ
ಸಂಚಾಲಕ ವಿಜಾಪೂರ ಜಿಲ್ಲಾ ಸರ್ವೋದಯ ಆಫೀಸ
ಬಾಗಲಕೋಟ



ದಿವಂಗತ ಡಾ. ರಾಮಚಂದ್ರ ವಾಮನ ಘಣಸಳಕರ

ಅರ್ಪಣೆ

ನಾನು ಇನ್ನೂ ಚಿಕ್ಕವನಿದ್ದಾಗಲೇ ತಮ್ಮ ಅನುಪಮ
ಸ್ನೇಹಸಿಂಚನೆಯಿಂದ ಮೈದುಂಬಿಕೊಂಡಿದ್ದು ನನ್ನ ಜೀವನಕ್ಕೇ
ಅರಳಿಸಿದ ಉದಾತ್ತಹೃದಯಿಗಳೂ,
ಶ್ರೇಯಸ್ಸಾಧನೆಗಾಗಿ ಹಲವು ಮನೆಗಳನ್ನು ಬಿಟ್ಟು ಕಾಶಿಯ,
ಥಿಆಸಾಫಿಕಲ್ ಸೊಸಾಯಿಟಿಯಲ್ಲಿ ನೆಲೆಸಿದ
ಮಹಾ ತ್ಯಾಗಿಗಳೂ, ಸ್ವಮತಿಗಳೂ ಆದ
ನಿಸ್ಸಂಗರ ಡಾಕ್ಟರ

ಶ್ರೀ. ರಾಮಚಂದ್ರ ವಾಮನ ಫಣಸಳಕರ

[illegible]

ಅವರಿಗೆ ಪ್ರೀತಿಯಿಂದಲೂ ಕೃತಜ್ಞತೆಯಿಂದಲೂ
ಈ ಕಾಣಿಕೆಯನ್ನು ಅರ್ಪಿಸಿದೆನು.

—ಬಾಳೆ ಮಧ್ವಾಚಾರ್ಯ

[illegible]
[illegible]

॥ ಶ್ರೀ ಧನ್ವಂತರಯೇ ನಮಃ ॥

ಪ್ರಸ್ತಾವನೆ

ವೈದ್ಯಶಾಸ್ತ್ರೀ ಮಧ್ವಾಚಾರ್ಯ ಜೋಶಿ ಅವರು ಈ ಮೊದಲು ಹಳ್ಳಿಯ ವೈದ್ಯ ಮತ್ತು ಸುಲಭ ಔಷಧಿ ಸಂಗ್ರಹ ಎಂಬ ಎರಡು ಪುಸ್ತಕಗಳನ್ನು ಬರೆದು ಕನ್ನಡಿಗರಾದ ನಮ್ಮ ಮುಂದೆ ಇಟ್ಟಿರುವರು. ಆ ಪುಸ್ತಕಗಳು ಈಗಾಗಲೇ ಎರಡನೇ ಮೂರನೇ ಆವೃತ್ತಿಯನ್ನು ಪಡೆದಿರುವದರಿಂದ ಅವುಗಳ ಉಪಯುಕ್ತತೆಯ ಬಗ್ಗೆ ನನಗೆ ಹೆಚ್ಚಿಗೆ ಹೇಳುವ ಕಾರಣ ಉಳಿದಿಲ್ಲ. ಹಳ್ಳಿಯ ವೈದ್ಯ ಪುಸ್ತಕದ ತೆಲುಗು ಆವೃತ್ತಿಯು ಸಹ ಸ್ವಲ್ಪ ದಿನಗಳಲ್ಲಿ ಪ್ರಸಿದ್ಧವಾಗುವದಿದೆ.

ಇದೀಗ ಅವರ "ಆಯುರ್ವೇದೀಯ ಪ್ರಥಮಚಿಕಿತ್ಸೆ" ಎಂಬ ಹೊಸ ಪುಸ್ತಕವು ಹೊರಬಿದ್ದಿದೆ. ಇದು ಮುದ್ರಣ ಕಂಡ ಪೂರ್ವದಲ್ಲಿಯೇ ನಾನು ಇದರ ಹಸ್ತಲಿಖಿತ ಪ್ರತಿಯನ್ನು ನೋಡಿರುವೆನು. ಮೊದಲಿನ ಎರಡು ಪುಸ್ತಕಗಳು ಹಳ್ಳಿಯ ಜನರಿಗಾಗಿ ಬರೆಯಲ್ಪಟ್ಟಿದ್ದರೂ, ವಸ್ತುತಃ ಅವು ಶಹರ ನಿವಾಸಿಗಳಿಗೂ ಕೂಡ ಪ್ರಯೋಜನಕಾರಿಯಾಗಿರುತ್ತವೆ. ಈ ಚಿಕ್ಕ ಪುಸ್ತಕವು ಸಾಮಾನ್ಯವಾಗಿ ಹಳ್ಳಿ-ಪಟ್ಟಣಗಳಲ್ಲಿ ವಾಸಿಸುವ ಎಲ್ಲ ಜನರಿಗೆ ಲಾಭವಾಗುವದೆಂದು ನಾನು ತಿಳಿದಿರುವೆನು.

ಅನಿರೀಕ್ಷಿತ ಬೇನೆಗಳು, ಅಪಘಾತಗಳು ಯಾರಿಗಾದರೂ ಎಲ್ಲಿಯೂ ಬರಬಹುದು. ಇಂಥ ಲೇಖನಗಳು ಈವರೆಗೆ ಪ್ರಸಿದ್ಧವಾಗಿರುವದಿಲ್ಲವೆಂತಲ್ಲ. ಆದರೆ ಈ ಪುಸ್ತಕವನ್ನು ಓದಿದನಂತರ ಇದಕ್ಕೆ ಪ್ರಥಮಚಿಕಿತ್ಸೆ ಎಂಬ ಹೆಸರು ಕೊಟ್ಟದ್ದು ಯಥಾರ್ಥವಿದೆಯೆಂದು ಯಾರಿಗಾದರೂ ತಿಳಿಯಬಹುದು. ಯಾವದೇ ರೋಗವಿರಲಿ ಅಥವಾ ಅಪಘಾತ ಸಂಭವಿಸಲಿ, ಆ ಪ್ರಸಂಗದಲ್ಲಿ ವೈದ್ಯರು ಅಥವಾ ಡಾಕ್ಟರರು ಬರುವವರೆಗೆ ಅದರ ಉಪಶಮನದ ಬಗ್ಗೆ ತಾತ್ಕಾಲಿಕ ಉಪಾಯಗಳನ್ನು ಸೂಚಿಸುವದೇ ಈ ಪುಸ್ತಕದ ಧ್ಯೇಯವು.

ಇದರಲ್ಲಿ ಹುಣ್ಣುಗಳು, ಗಾಯಗಳಿಗೆ ಸಂಬಂಧ ಪಟ್ಟ ರೋಗಗಳ ಚಿಕಿತ್ಸೆಯು ಇದೆ. ಹಾಗೂ [illegible], [illegible]ಗಳಿಗೆ ಸಂಬಂಧ [illegible]ಗಳೂ ಸೇರಿಸಲ್ಪಟ್ಟಿವೆ.

ಲೇಖಕರು ಪುಸ್ತಕದಲ್ಲಿ ಮೂರು ಭಾಗಗಳನ್ನು ಮಾಡಿದ್ದಾರೆ. ಮೊದಲನೇ ದರಲ್ಲಿ ಸಾರ್ವತ್ರಿಕವಾಗಿ ಸಂಭವಿಸುವ ಚಿಕ್ಕ ದೊಡ್ಡ ರೋಗಗಳ ಚಿಕಿತ್ಸೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಆಯುರ್ವೇದಗಳ ಚಿಕಿತ್ಸಾಪದ್ಧತಿಯು ಇದೆ. ಎರಡನೇ ಭಾಗದಲ್ಲಿ ಆಕಸ್ಮಿಕವಾಗಿ ಸಂಭವಿಸುವ ಅಪಘಾತ. ಅಪಘಾತ ದಿಂದಾದ ಘಟನೆಗಳಲ್ಲಿ ಮಾಡತಕ್ಕ ತಾತ್ಕಾಲಿಕ ಉಪಾಯಗಳನ್ನು ಸೂಚಿಸಿದ್ದಾರೆ. ಮೂರನೇದರಲ್ಲಿ ಪಶುಚಿಕಿತ್ಸೆಯನ್ನು ಬರೆದಿದ್ದಾರೆ. ಹೀಗೆ ನಿತ್ಯಜೀವನದಲ್ಲಿ ರೋಗಬಂದಾಗ ಇಲ್ಲವೆ ಅಪಘಾತ ಸಂಭವಿಸಿದಾಗ, ಬೇಗನೆ ಉಪಾಯವನ್ನು ತಿಳಿದುಕೊಳ್ಳಲು ಉಪಯೋಗವಾಗಲೆಂದು, [illegible] ಈ ಪುಸ್ತಕವು ರಚಿಸಲ್ಪಟ್ಟಿದೆ. [illegible] [illegible] [illegible]ಗಳನ್ನು [illegible] [illegible]. [illegible] [illegible] [illegible] [illegible] [illegible] ಚಿಕಿತ್ಸೆಯನ್ನು [illegible]. [illegible] [illegible] [illegible] [illegible] [illegible]ಗಳನ್ನು [illegible]. ಅದರೂ [illegible] ರೋಗಗಳ [illegible] [illegible] [illegible] [illegible] ಅಥವಾ [illegible] [illegible] ತಿಳಿದುಕೊಳ್ಳಬೇಕು [illegible]. [illegible] ಕೊಟ್ಟಿದ್ದಾರೆ. [illegible] [illegible] [illegible] ಸೂಚಿಸುತ್ತದೆ.

ಈ ಪ್ರಕಾರ ಪುಸ್ತಕವು [illegible], [illegible] [illegible] [illegible]. ಆದರೆ ಈ [illegible] [illegible] [illegible]. [illegible] ಜನಗಳೂ [illegible] [illegible] [illegible] ಹೋಗುತ್ತದೆ. ಪುಸ್ತಕದಲ್ಲಿ ಸೂಚಿಸಲ್ಪಟ್ಟ ಔಷಧಿಗಳನ್ನು [illegible]ಗಳಾದರೂ ಸಂಗ್ರಹಿಸಿ ಉಪಯೋಗಿಸುವ ಹಾಗೆ [illegible] [illegible]. ಲೇಖಕರು [illegible]ದಲ್ಲಿ ಇದನ್ನು ಬರೆದಿರುವುದರಿಂದ ಯಾರಾದರೂ ಇದರ [illegible]

ಪಡೆಯಬಹುದಾಗಿದೆ. ಗ್ರಾಮಾಧಿಕಾರಿಗಳು ಕೂಡ ಪ್ರಯತ್ನಕೈಕೊಂಡು ತಮ್ಮ ತಮ್ಮ ಸ್ಥಳಗಳಲ್ಲಿ ಸಿಗಬಹುದಾದ ಗಿಡಮೂಲಿಕೆಗಳನ್ನು ದೊರಕಿಸಿ ಸಂಗ್ರಹಿಸಿಟ್ಟರೆ ಚಿಕ್ಕಪುಟ್ಟ ರೋಗಗಳ ಉಪಚಾರವು ಬಹಳ ಸುಲಭವಾಗಬಹುದು. ಅಲ್ಲಲ್ಲಿಯ ಶಾಲೆಗಳ ಶಿಕ್ಷಕರು ಮನಸ್ಸುಮಾಡಿದರೆ ಅವರಿಗೆ ಸ್ವಾರ್ಥ ಪರಮಾರ್ಥಗಳೆರಡೂ ಸಾಧಿಸುವವು. ಸ್ವಾರ್ಥವೆಂದರೆ ಕೇವಲ ಧನಲೋಭವಲ್ಲ. ಭೂತದಯೆಯೊಂದಿದ್ದರೆ ಏನುಬೇಕಾದ್ದನ್ನು ಪಡೆಯಬಹುದು. ಆತ್ಮವಾನ್ ಪುರುಷನಿಗೆ ಸ್ವಾರ್ಥಪರಮಾರ್ಥಗಳೆರಡೂ ಒಂದೇ. ಆತನು ಭೇದಭಾವವನ್ನು ಅರಿತವನಲ್ಲ. ನಮ್ಮಲ್ಲಿಯ ಶಿಕ್ಷಕರು ಉದಾರಭಾವದಿಂದ ವೈದ್ಯ [illegible] ಬರೆದ ಪುಸ್ತಕಗಳ ಲಾಭವನ್ನು ಗತಿಹೀನರಾದ ಜನರಿಗೆ ಒದಗಿಸಿಕೊಟ್ಟರೆ ಅವರು ಮಾಡಬಹುದಾದ ಉಪಕಾರಕ್ಕೆ ಬೆಲೆಯೇ ಇಲ್ಲ. नहि जीवितदानाद्धिदानमन्यद्विशिष्यते ।

ಕರ್ನಾಟಕ ಪ್ರಾಂತದ ಹಳ್ಳಿಗಳಲ್ಲಿ ಸಾಕ್ಷರತೆ ಕಡಿಮೆ ಪ್ರಮಾಣದಲ್ಲಿದೆ. ಇಲ್ಲಿಯ ಜನಗಳಿಗೆ ಔಷಧೋಪಚಾರದ ಸಂದರ್ಭದಲ್ಲಿ ಸ್ವಾವಲಂಬನೆಯ ಮಾರ್ಗವೂ ಗೊತ್ತಿಲ್ಲ. ರೋಗಪರಿಹಾರಕ್ಕಿಂತ ರೋಗಪ್ರತಿಬಂಧವೇ ಲೇಸೆಂಬ ಭಾವನೆ ಅವರಲ್ಲಿ ಮೂಡಿಲ್ಲ. ಇದಕ್ಕೂ ಮೇಲಾಗಿ ಪಟ್ಟಣಗಳ ಆಕರ್ಷಣವು ಅವರನ್ನು ಬಿಟ್ಟಿಲ್ಲ. ಇತ್ತೀಚೆಗೆ ಗ್ರಾಮಸುಧಾರಣೆಯ ಬಗ್ಗೆ ಅಲ್ಲಲ್ಲಿ ಸಂಘಗಳಾಗಿವೆ. ಕಾರ್ಯಕರ್ತರ ಪ್ರಯೋಗಗಳು ನಡೆದಿವೆ. ಕೆಲಕೆಲವು ಕಡೆಯಲ್ಲಿ ಈ ಸಂಘಗಳು ಮುಂದುವರಿದು ಆರೋಗ್ಯ ರಕ್ಷಣದ ವಿಷಯದಲ್ಲಿ ಏರ್ಪಾಟು ಮಾಡಿರುತ್ತವೆ. ಇದು ನಿಜವಾಗಿ ಅಭಿನಂದನೀಯವಾದುದು.

ಈ ಚಿಕ್ಕ ಪುಸ್ತಕವು ಪ್ರಕಾಶನ ಹೊಂದಿದ್ದು ವಿಜಾಪುರ ಜಿಲ್ಲೆಯ ಸರ್ವೋದಯ ಸಂಸ್ಥೆಯ ಪ್ರೋತ್ಸಾಹನದಿಂದಲೇನೇ ಆಗಿದೆ. ಈ ಸರ್ವೋದಯದ ಸಂಚಾಲಕರು ಶ್ರೀಮಾನ್ ತಿರುಮಲರಾವ ಕೌಜಲಗಿ ಅವರು, ಇಂಥ ಉಪಯುಕ್ತ ಪುಸ್ತಕಗಳ ಆವಶ್ಯಕತೆಯನ್ನು ಪುರಸ್ಕರಿಸಿದವರಲ್ಲಿ ಇವರೇ ಮೊದಲಿಗರು. ಜನತೆಯ ಆರೋಗ್ಯ ರಕ್ಷಣದ ಸಲುವಾಗಿ ಇಂಥ ಚಿಕ್ಕ ಪುಸ್ತಕವನ್ನು ಬೆಳಕಿಗೆ ತಂದದ್ದು, ಸರ್ವೋದಯದ ಸಂಚಾಲಕರಾದ ಶ್ರೀ. ಕೌಜಲಗಿ ಅವರಿಗೆ ಭೂಷಣವು.

ತಮಗೆ ತಿಳಿದಿರುವಂತಹ ಕ್ಷೇತ್ರದಲ್ಲಿ, ಹೆಚ್ಚಿಗೆಯಾಗಿ ದುಡಿಯುವ, ವೈದ್ಯ ಬಂಧು ಅವರಿಗೆ ದೇವರು ಚಿರಾಯುಷ್ಯವನ್ನು ಕೊಟ್ಟು ಇದೇ ರೀತಿ ಜನಸೇವೆಯನ್ನು ಕೈಕೊಳ್ಳಲು ಸಾಮರ್ಥ್ಯವನ್ನು ಸಾಹಸ್ಯವನ್ನು ಕೊಡ ಲೆಂದು ದಯಾಳುವಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಬೆಳಗಾವಿ
೨೧-೯-೧೯೪೧

ಡಾ. ಹಣಮಂತ ವೆಂಕಟೇಶ ನವಲೂರ,
ಎಲ್. ಎಮ್. ಆ್ಯಂಡ್ ಎಸ್.

ಪ್ರಕಾಶಕರ ಎರಡು ಮಾತುಗಳು

ಹುಕ್ಕೇರಿಯ ಆರೋಗ್ಯಧಾಮದಲ್ಲಿ ಇದ್ದಾಗಿನಿಂದ ಅಂದರೆ ಕಳೆದ ಹದಿನೈದು ವರ್ಷಗಳಿಂದ ಬಹುವಿಧವಾಗಿ ಹಳ್ಳಿಗರ ಸಂಬಂಧ ನನಗೆ ಬಂದಿದೆ. ಅವರ ಕಷ್ಟನಷ್ಟಗಳ, ಸುಖದುಃಖಗಳ ವಿಚಾರ ಅನುಭವಕ್ಕೆ ತಾಕಿದೆ. ಶಿಕ್ಷಣ, ಸ್ವಚ್ಛತೆ, ಆರೋಗ್ಯಗಳ ಸರಿಯಾದ ಕಲ್ಪನೆಗಳ ಅಭಾವದಿಂದಾಗಿ, ಬೇನೆ ಬೇಸರಿಕೆಗಳಿಂದ ಸದಾ ಬಳಲುತ್ತಿರುವ, ಹಳ್ಳಿಗರನೇಕರನ್ನು ಕಂಡು ಮರುಗಿದ್ದೇನೆ. ಅಜ್ಞಾನದಿಂದ ಇಂತು ಗೋಳಿಡುವ ಹಳ್ಳಿಗರಿಗೆ, ವೈದ್ಯಕೀಯ ಸಹಾಯವು ಸಾಕಷ್ಟು ಸಿಗದೆ ಇರುವದು, ಅತ್ಯಂತ ವಿಷಾದದ ಸಂಗತಿಯಾಗಿದೆ. ಸರಕಾರದವರು ಅನೇಕ ಯೋಜನೆಗಳ ಮೂಲಕ ಔಷಧೋಪಚಾರ ಉಚಿತ ಸಲಹೆಗಳನ್ನು ಕೊಟ್ಟು, ಈ ಸಮಸ್ಯೆಯನ್ನು ನಿವಾರಿಸಲೆತ್ನಿಸಿದರೂ ಅವರ ಈ ಪ್ರಾಯೋಗಿಕ ಕ್ಷೇತ್ರವನ್ನು ಚಿಕ್ಕದಾಗಿ ಎಲ್ಲ ಹಳ್ಳಿಗರಿಗೆ, ಲಾಭ ದೊರೆಯುವಂತಿಲ್ಲ. ಅಲ್ಲದೆ ಪರದೇಶೀಯ ಔಷಧಗಳ ಬೆಲೆ ವಿಪರೀತವಾಗಿ ಪರಿಣಮಿಸಿ, ಆ ಔಷಧೋಪಚಾರ, ಅವರ ಕೈಗೆ ನಿಲುಕದಾಗಿದೆ. ಇನ್ನು ಪಟ್ಟಣಗಳಲ್ಲಿ ವಾಸಿಸುತ್ತಿರುವ, ಡಾಕ್ಟರ ಅಥವಾ ವೈದ್ಯರ ಕಡೆಗೆ ಬಂದು, ಉಪಚಾರ ಮಾಡಿಕೊಳ್ಳುವಷ್ಟು, ಒಳ್ಳೆಯ ಆರ್ಥಿಕ ಸ್ಥಿತಿಯು ಹಳ್ಳಿಗರನೇಕರಲ್ಲಿ ಇಲ್ಲ. ಕಾರಣ ಈ ಸಮಸ್ಯೆಯ ಪರಿಹಾರದಲ್ಲಿ ಏನು ಕೆಲಸ ಮಾಡಬಹುದೆಂದು, ನನ್ನ ಆಪ್ತಮಿತ್ರರೂ, ಈ ಮೊದಲೇ " ಹಳ್ಳಿಯ ವೈದ್ಯ " ಬರೆದು, ಕನ್ನಡನಾಡಿನ ಹಳ್ಳಿಗರನ್ನು ಋಣಿಗಳನ್ನಾಗಿಸಿದ ಶ್ರೀ. ವೈದ್ಯ ಮಧ್ವಾಚಾರ್ಯ ಬುರ್ಲಿ ಅವರನ್ನು ಕೇಳಿದೆ. ಕೇಂದ್ರ ಸರಕಾರದ ಸುದ್ದಿ ಹಾಗು ಬಾನುಲಿ ಮಂತ್ರಿಗಳಾದ ಮಾನ್ಯಶ್ರೀ. ದಿವಾಕರ ರಂಗರಾಯರು ಬರೆದ ಹಳ್ಳಿಗರ ಕೈಪಿಡಿಯಲ್ಲಿಯೂ, ಶ್ರೀ. ಬುರ್ಲಿಯವರು, ತೀರ ಸ್ವಲ್ಪದಲ್ಲಿ ರೋಗ ಮತ್ತು ಔಷಧಗಳನ್ನು ಬರೆದುದು ನನ್ನ ನೆನಪಿನಲ್ಲಿತ್ತು.

ನನ್ನ ಓದಿನ ಸೌಲಭ್ಯಗಳನ್ನಿತ್ತರು. ಶ್ರೀ ಬಿ.ಕೆ. ಅವರು ಈ ಪುಸ್ತಕ
ಕಟ್ಟಡದ ಪ್ರಥಮ ಚಿಕಿತ್ಸೆಯನ್ನು ಒದಗಿಸಿದ್ದಾರೆ. ಈ ಪುಸ್ತಕ ಪ್ರಕಟಣೆ
ಒದಗಿ ಬರಲು ಪ್ರತಿಯೊಬ್ಬ ಮಕ್ಕಳಿಗೆ ಕೂಡಾ ಕಾರಣರಾದವರೆಲ್ಲರಿಗೂ
ನನ್ನ ಕೃತಜ್ಞತೆ.

ಇದೇ ಕಾರಣದಿಂದ ಮಕ್ಕಳ ಅಭ್ಯಾಸ, ಸಾರ್ವಜನಿಕ ಆರೋಗ್ಯ, ರಕ್ಷಣೆಯ ಕಾರ್ಯಗಳಲ್ಲಿ ಸದಾ ನಿರತರು. ಸಹೃದಯರಾದ ಶ್ರೀ ... ನನ್ನಾಗಿಟ್ಟುಕೊಂಡ. ಸಮಿತಿ, ಸರ್ವೋದಯ ಸಂಘದ ... ಇದನ್ನು ಪ್ರಕಟಿಸಲು ಸಂತೋಷವಾಗುತ್ತದೆ. ಇದನ್ನು ಒದಗಿಕೊಟ್ಟ ಶ್ರೀ. ವೈದ್ಯ ಬಿ.ಕೆ. ಅವರಿಗೂ ಪ್ರಸ್ತಾವನೆಯನ್ನು ಒರೆದು ಕೊಟ್ಟ ಶ್ರೀ. ಡಾ. ಹನುಮಂತರಾವ ನವಲಗುಂದ ಅವರಿಗೂ ನಾನು ಕೃತಜ್ಞನಾಗಿರುವೆನು.

ಬಾಗಲಕೋಟೆ
ಸರ್ವೋದಯ ಕಚೇರಿ
೩೬-೧-೧೯೫೩

ತಿರುಮಲರಾವ ಕೌಜಲಗಿ
ಸಂಚಾಲಕ,
ವಿಜಾಪುರ ಜಿಲ್ಲಾ ಸರ್ವೋದಯ

ಲೇಖಕನ ಅರಿಕೆ

೧೯೩೭ರಲ್ಲಿ 'ಹಳ್ಳಿಯ ವೈದ್ಯ,' ೧೯೪೪ರಲ್ಲಿ 'ಸುಲಭ ಔಷಧ ಸಂಗ್ರಹ'ಗಳು ಪ್ರಕಟವಾದವು. ಹಳ್ಳಿಯ ವೈದ್ಯದಲ್ಲಿ ಒಪ್ಪಿದಂತೆ ನಾನೇನೂ ಅಭಿಜ್ಞನಾದ ಲೇಖಕನಲ್ಲ. ಕನ್ನಡನಾಡಿನ ಸೇವೆ ಮಾಡಬೇಕೆಂಬ ಬಯಕೆಯು ಈ ರೀತಿಯಾಗಿ ನನ್ನಿಂದ ಅಲ್ಪಸೇವೆ ಮಾಡಿಸುತ್ತಿದೆ. ಕನ್ನಡಿಗರು ಸುಮತಿಯಿಂದ ನನ್ನ ಈ ಕೃತಿಗಳನ್ನು ಆದರಮನ್ನಣೆಗಳಿಂದ ಸ್ವಾಗತಿಸುತ್ತಿದ್ದು ನನ್ನ ಮನಸ್ಸಿಗೆ ಸಮಾಧಾನವನ್ನುಂಟು ಮಾಡಿದೆ.

'ಹಳ್ಳಿಯ ವೈದ್ಯ'ದ ಮೂರನೇ ಆವೃತ್ತಿಯು ಸ್ವಲ್ಪ ದಿವಸಗಳಲ್ಲಿ ಹೊರ ಬೀಳುವದು. ಇದು ಹಳ್ಳಿಗರಿಗೆ ಉಪಯುಕ್ತ ಪುಸ್ತಕವಾದರೂ ಪುಸ್ತಕವು ದೊಡ್ಡದಾಗಿ ಅಭ್ಯಾಸಮಾಡಿ ತಿಳಿದುಕೊಳ್ಳಲು ಯೋಗ್ಯವಾಗಿದೆ. ಕಾರಣ ತಾತ್ಕಾಲಿಕ ಸಹಾಯಕ್ಕಲ್ಲಿ ಸಹ, ಚಿಕ್ಕದಾದರೂ ಚೊಕ್ಕ ಪುಸ್ತಕವೊಂದನ್ನು ಜನತೆಯ ಸೇವೆಗೆ ಮುಡಿಪಾಗಿಡಬೇಕೆಂಬ ಆಶೆ ಆಶೆಯಾಗಿಯೇ ನಿಂತಿತ್ತು. ಬರೆಯುವ ಮನಸ್ಸು ಸಂಪೂರ್ಣವಿದ್ದರೂ ಒದಗಿಸುವ ಹೊರಶಕ್ತಿ ಇನ್ನೂ ಉದಯಿಸಿರಲಿಲ್ಲ. ಆದರೆ ಕೆಲವು ದಿನಗಳ ಹಿಂದೆ ವಿಜಾಪೂರ ಜಿಲ್ಲೆಯ ಸರ್ವೋದಯ ಸಂಸ್ಥೆಯ ಸಂಚಾಲಕರೂ ನನ್ನ ಆಪ್ತಮಿತ್ರರೂ ಆದ ಶ್ರೀ. ಟಿ. ಎಸ್. ಕೌಜಲಗಿ ಅವರು ಆ ದಿಶೆಯಲ್ಲಿ ಮುನ್ನಡೆಯಲು ಪ್ರೋತ್ಸಾಹಿಸಿದರ ಫಲವಾಗಿ ಈ ಚಿಕ್ಕ ಪುಸ್ತಕ ಇಂದು ಕನ್ನಡಿಗರೆದುರು ನಿಂತಿದೆ. ಈ ನನ್ನ ಕೃತಿಯು ಕನ್ನಡಿಗರಿಗೆ ಹೇಗೆ ಕಾಣಬಹುದೆಂಬದನ್ನು ನಾನು ಹೇಳಲಾರೆ. ಹಿರಿಯರಾದ ಡಾ. ಹಣಮಂತರಾವ ಸವಣೂರರು ಮತ್ತು ನನ್ನ ಗೆಳೆಯರಾದ ಶ್ರೀ: ಜೋರಾಪೂರ ಗುರುರಾಯರು ಎಂದಿನಂತೆ ನನಗೆ ಈ ಪುಸ್ತಕದ ಬಗ್ಗೆ ವಿಶ್ವಾಸ ಹುಟ್ಟಿಸಿದರು.

[illegible] ಗಳನ್ನು ಬರೆಯುವಲ್ಲಿ ಡಾ. [illegible] ಗ್ರಂಥಗಳ [illegible] ಆ ಆ ಗ್ರಂಥಕರ್ತರಿಗೆ ಕೃತಜ್ಞನಾಗಿದ್ದೇನೆ. [illegible] ಸಹೃದಯರು [illegible] ನನ್ನ [illegible] ತಿದ್ದಿಕೊಳ್ಳುವೆನು.

ಈ ಪುಸ್ತಕವನ್ನು ಬರೆಯುವಾಗ [illegible] ಡಾ. [illegible] M.B., B.S. [illegible] ನನ್ನ ಕೃತಜ್ಞತಾಪೂರ್ವಕ ಅಭಿನಂದನೆಗಳು. [illegible] ಡಾ. [illegible] ನನ್ನ ಕೃತಜ್ಞತಾಪೂರ್ವಕ ಅಭಿನಂದನೆಗಳು.

ಬಾಗಲಕೋಟೆ
[illegible]
[illegible]
[illegible]

[illegible]
ಬಿಂ? ಮಧ್ವಾಚಾರ್ಯ ವೈದ್ಯ

ಆಯುರ್ವೇದೀಯ ಪ್ರಥಮಚಿಕಿತ್ಸೆ

ಅನುಕ್ರಮಣಿಕೆ

ಪ್ರಥಮಖಂಡ

ಕಾಯಚಿಕಿತ್ಸೆ

೧. ಜ್ವರಗಳು (ಪುಟಗಳು ೧-೧೧)

೨. ಪಚನಸಂಸ್ಥೆ ರೋಗಗಳು (ಪುಟಗಳು ೧೧-೨೪)

ಮಧ್ಯಮ ಖಂಡ

ಶಲ್ಯ ಚಿಕಿತ್ಸೆ

ಅನುಕ್ರಮಣಿಕೆ

ತೃತೀಯ ಖಂಡ

ವಿಷಯಪಟ್ಟಿ

(ಪುಟಗಳು ೯೭ ೧೭೪)

ತಿದ್ದುಪಡಿ

ಪುಟ	ಸಾಲು	ತಪ್ಪು	ಒಪ್ಪು
೨	೧೦	[illegible]	[illegible]
೨	೧೫	[illegible]	[illegible]

॥ ಶ್ರೀ ॥

ಆಯುರ್ವೇದೀಯ

ಪ್ರಥಮ ಚಿಕಿತ್ಸೆ

ಪ್ರಥಮ ಖಂಡ

೧ ಜ್ವರಗಳು

ಕಾಯಚಿಕಿತ್ಸೆಯಲ್ಲಿ ಜ್ವರಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ದೋಷವಿಶೇಷಗಳನ್ನನುಲಕ್ಷಿಸಿ ಜ್ವರಚಿಕಿತ್ಸೆ ನಡೆಸುವದು ಜಾಣತನದ ಮಾತಾಗಿದೆ. ಎಷ್ಟಿನದಂಥ ಔಷಧ ಕೊಟ್ಟು, ಕೂಡಲೇ ಜ್ವರ ಕಡಿಮೆ ಮಾಡುವದು, ಜ್ವರದ ಪ್ರಾರಂಭಾವಸ್ಥೆಯಲ್ಲಿ ವಿರೇಚನ ಕೊಡುವದು ಆಯುರ್ವೇದಕ್ಕೆ ಒಪ್ಪಿತವಾದುದಲ್ಲ. ಜ್ವರದ ಪ್ರಾರಂಭಾವಸ್ಥೆಯಲ್ಲಿ ಲಂಘನವು ಬಹಳ ಯೋಗ್ಯವಾದುದು. ಲಂಘನದಿಂದ ಪ್ರಕುಪಿತ ದೋಷಗಳು ದಾರಿಗೆ ಬರುವವು. ಕಾರಣ ಸಾಮಾನ್ಯವಾಗಿ, ಜ್ವರಕ್ಕೆ ಲಂಘನವು ಹಿತಕಾರಿಯಾದುದಾಗಿದೆ. ದೂಷಿತ ಜಠರಾಗ್ನಿಯು ಜ್ವರಕ್ಕೆ ಮುಖ್ಯ ಕಾರಣ. ಜ್ವರದಲ್ಲಿ ಅನೇಕಾನೇಕ ಪ್ರಕಾರಗಳಿವೆ. ಆದರೂ ಪ್ರಥಮ ಚಿಕಿತ್ಸೆಗಾಗಿ ಕೆಳಗೆ ಬರೆದವುಗಳನ್ನಷ್ಟೇ ಆಯ್ದುಕೊಂಡಿರುವೆವು.

ಚಳಿಜ್ವರಕ್ಕೆ

೧. ಪಾರಿಜಾತದ ತೊಪ್ಪಲದ ರಸ ೨ ಚಮಚೆ. ಮೆಣಸಿನ ಪುಡಿ ನಾಲ್ಕು ಗುಂಜಿ ಜೇನುತುಪ್ಪದಲ್ಲಿ ಕೂಡಿಸಿ ದಿನಕ್ಕೆ ೨-೩ ಸಲ ತೆಗೆದು ಕೊಳ್ಳುವದು.

೨. ಮಹಾಸುದರ್ಶನ ಚೂರ್ಣ ೪-೮ ಗುಂಜಿ ಬಿಸಿನೀರು ಅಥವಾ ಜೇನುತುಪ್ಪದಗೂಡ ದಿನಕ್ಕೆ ೨-೩ ಸಲ.

೩. ಘಟಕದ ಅರಳು ೪ ಗುಂಜಿ,ಮೆಣಸಿನಪುಡಿ ೪ ಗುಂಜಿ, ಭತ್ತಾಸದ ಗೂಡ ತಿನ್ನುವದು. ದಿನಕ್ಕೆ ೨-೩ ಸಲ.

೪. ಅಜವಾನ, ಇಂದ್ರಜವಿ, ಸಪ್ತಪರ್ಣಿ, ಕಟುಪಥ್ಯವಲ, ಬೇವಿನ ಒಳ ದೊಗಟೆಗಳ ಕಷಾಯವನ್ನು ದಿನಕ್ಕೆ ಎರಡು ಸಲ ಕೊಡುವದು.

೫. ಶುಂಠಿ, ಗವತಿಚಹಾ, ತುಲಸೀ ಎಲೆಗಳ ಕಷಾಯವನ್ನು ಮಾಡಿ ದಿನಕ್ಕೆ ಎರಡು ಸಲ ಕೊಡುವದು. ಇದರಿಂದ ಜಿವರು ಬಿಟ್ಟು ಮೈಗೆ ಹಗುರೆನಿಸುತ್ತದೆ.

೬. ಕಾಲಾದಾನಾ ೮ ಗುಂಜಿ, ಕರೀಮೆಣಸು ೩ ಗುಂಜಿ, ತಿತಿಪಸ ೪ ಗುಂಜಿ, ಚಿರಾಯಿತ ೪ ಗುಂಜಿ.

ಇವುಗಳ ಪ್ರತ್ತೇಕ ಚೂರ್ಣಗಳನ್ನು ಈ ಪ್ರಮಾಣದಿಂದ ಚೆನ್ನಾಗಿ ಕೂಡಿಸಿ, ಎರಡು ಭಾಗ ಮಾಡಿ ಬೆಳಿಗ್ಗೆ ಒಂದು ಮತ್ತು ರಾತ್ರಿ ಮಲಗು ವಾಗ ಒಂದು ಭಾಗವನ್ನು ಜೇನುತುಪ್ಪದಲ್ಲಿ ತೆಗೆದುಕೊಳ್ಳುವದು.

೭. ಚಿರಾಯಿತ, ಗಂಟೆರಿಪಣ, ಕಟುಕರೋಣಿ, ಸಪ್ತಪರ್ಣ, ಅಗಡಿ ಬೇರು, ಅಳಲೇಕಾಯಿ, ತಾರೀಕಾಯಿ, ನೆಲ್ಲೀಚಟ್ಟು, ಶುಂಠಿ, ಅಮೃತಬಳ್ಳಿ, ರಕ್ತರೋಹಿಡಾ, ಸೋನಾಮುಖಿ, ಧಾತಕೀಪುಷ್ಪ ಇವುಗಳ ಕಷಾಯದಲ್ಲಿ ಜೇನುತುಪ್ಪ ಹಾಕಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳಬೇಕು.

೮. ಕ್ವಿನಾಯಿನ ಪುಡಿ ೨ ರಿಂದ ೪ ಗುಂಜಿ ಲಿಂಬೀರಸದಲ್ಲಿ ಕೂಡಿಸಿ ದಿನಕ್ಕೆ ಎರಡು ಸಲ ಕೊಡುವದು.

ಚಳಿಜ್ವರಗಳಿಗಾಗಿ ಮೇಲೆ ಬರೆದ ಯಾವತ್ತು ಔಷಧಗಳು ಉತ್ತಮ ಗುಣಕಾರಿಯಾದವುಗಳಿವೆ. ಇವೇ ಔಷಧಗಳು ಮಲೇರಿಯಾಕ್ಕೆ, ಗುಣ ಕೊಡುವವು. ಇದರಲ್ಲಿ ಸ್ವಲ್ಪವೂ ಕೂಡ ಸಂಶಯ ತೆಗೆದುಕೊಳ್ಳಬಾರದು. ಜನರಿಗೆ ಯಾವುದು ಸಿಕ್ಕುತ್ತದೆಯೋ ಅದನ್ನು ತೆಗೆದುಕೊಳ್ಳಲಿ, ಎಂದು ೭-೮ ಔಷಧಗಳನ್ನು ಬರೆದು ಆಗಿದೆ. ಔಷಧಗಳನ್ನು ೧-೨ ದಿವಸ ತೆಗೆದು ಕೊಂಡು ಗುಣಬರಲಿಲ್ಲವೆಂದು ದೂಷಿಸದೆ, ೧-೨ ಸಪ್ತಕ ಔಷಧ ಸೇವನೆ

ಮಾಡಬೇಕು. ಪಥ್ಯ ಮಾಡಲೇಬೇಕು. ಬಿಸಿನೀರು ಅಥವಾ ಕಾಸಿ ಆರಿಸಿದ ನೀರು ಕುಡಿಯಬೇಕು. ಅರಳಿಟ್ಟಿನ ಗಂಜಿ, ಹುರಿಹಿಟ್ಟು, ಅಕ್ಕಿಗಂಜಿ, ಮೋಸಂಬಿರಸ ತೆಗೆದುಕೊಳ್ಳಬೇಕು. ಜಡ ಆಹಾರ, ಸ್ನಾನ, ಶ್ರಮದ ಕೆಲಸಗಳನ್ನು ಬಿಟ್ಟುಬಿಡಬೇಕು. ಕೇವಲ ಚಳಿಜ್ವರಕ್ಕೇ ಅಲ್ಲ, ಸಾಮಾನ್ಯವಾಗಿ ಜ್ವರ ಎಂದ ಕೂಡಲೇ ಮೇಲೆ ಬರೆದ ಪಥ್ಯ ಅವಶ್ಯವಾದುದೆಂದು ತಿಳಿಯಬೇಕು.

ಚಳಿಜ್ವರದ ಮುಖ್ಯಲಕ್ಷಣವೆಂದರೆ, ಚಳಿಚಳಿ ಎನಿಸಿ ನಡುಗುವುದು, ಕೆಲಹೊತ್ತಿನ ನಂತರ ಬೆವರುಬಿಟ್ಟು ಜ್ವರ ಇಳಿಯುವುದು. ಸಾಧಾರಣ ವಾಗಿ ಇದಕ್ಕೇನೇ ಮಲೇರಿಯಾ ಎಂದೆನ್ನುತ್ತಾರೆ.

ವಾತಜ್ವರ

ಜ್ವರಬಂದವರ ಬಾಯಿ ಸವಳು ಆದಷ್ಟೆ ಸಾಧಾರಣವಾಗಿ ವಾತಜ್ವರ ವೆಂದು ತಿಳಿಯಬೇಕು. ಈ ಜ್ವರಕ್ಕೆ ಒಂದೆಲೆಹೊನ್ನೆ, ದೊಡ್ಡಪತ್ರೆ, ನೆಲಗುಳ್ಳ, ಅಮೃತಬಳ್ಳಿ, ಚಿರಾಯಿತ ಇವುಗಳ ಅಷ್ಟಮಾಂಶ ಕಷಾಯ ದಲ್ಲಿ ಜೇನುತುಪ್ಪ ಕೂಡಿಸಿ ದಿನಕ್ಕೆ ಎರಡು ಸಲ ಕೊಡುವುದು. ಈ ಕಷಾಯದೊಡನೆ ಮಹಾಮೃತ್ಯುಂಜಯ, ಜ್ವರಾಂಕುಶ, ಸಮೀರಪನ್ನಗ ಗಳಲ್ಲಿ ಯಾವುದಾದರೊಂದನ್ನು ಅರ್ಧದಿಂದ ಒಂದು ಗುಂಜ ತುಲಸೀರಸ, ಅಥವಾ ಅಲ್ಲದರಸ, ಜೇನುತುಪ್ಪಗಳೊಡನೆ ದಿನಕ್ಕೆ ಎರಡು ಸಲ ಕೊಡ ಬಹುದು.

ಕಷಾಯಗಳ ಬಗ್ಗೆ ಸೂಚನೆ:— ಒಬ್ಬ ಪ್ರೌಢ ಮನುಷ್ಯನಿಗೆ ಒಂದು ದಿನಕ್ಕೆ ಎರಡೂ ವೇಳೆ ಕೂಡಿ ಐದು ತೊಲೆ ಸಿದ್ಧ ಕಷಾಯಬೇಕು. ಅಂದರೆ ಪ್ರತಿಯೊಂದು ಸಲ ಎರಡೂವರೆ ತೊಲೆ ಕಷಾಯ ತೆಗೆದುಕೊಳ್ಳ ಬೇಕು. ಈ ಪುಸ್ತಕದಲ್ಲಿ ಬರೆದಿರುವ ಕಷಾಯ ಜಿನಸುಗಳನ್ನು ಎಷ್ಟೆಷ್ಟು ಪ್ರಮಾಣದಿಂದ ತೆಗೆದುಕೊಳ್ಳಬೇಕೆಂಬುದನ್ನು ಬರೆಯದೆ, ಸಾಮಾನ್ಯವಾಗಿ ಆ ಆ ಪದಾರ್ಥಗಳ ಹೆಸರುಗಳನ್ನಷ್ಟೇ ಬರೆದು ಆಗಿದೆ. ಸಾಧಾರಣವಾಗಿ ಪ್ರತಿಯೊಂದು ಜಿನಸು ಒಂದು ದುಡ್ಡಿನ ತೂಕ ಈ ಪ್ರಮಾಣದಿಂದ ತೆಗೆದುಕೊಂಡು ಆ ಎಲ್ಲ ಪದಾರ್ಥಗಳ ತೂಕದ ೧೬ ಪಾಲು ನೀರು ಹಾಕಿ ಅಷ್ಟಮಾಂಶ ಕಷಾಯ ಇಳಿಸಿ ಸೋಸಿ ಜೇನುತುಪ್ಪ ಹಾಕಿ ತೆಗೆದು

ಕೊಳ್ಳುವದು. ಕಷಾಯ ಜೀನಸುಗಳು ಹಳೆಯವಿರಬಾರದು. ಹುಳ ಹತ್ತಿದ್ದು ಇರಬಾರದು.

ಪಿತ್ತಜ್ವರ

ಬಾಯಿ ಕಹಿ ಆದಲ್ಲಿ ಪಿತ್ತಜ್ವರವೆಂದು ತಿಳಿಯಬೇಕು. ಪಿತ್ತಜ್ವರದಲ್ಲಿ ಬೆವರು ಬರುತ್ತದೆ ಮತ್ತು ಜ್ವರದಲ್ಲಿ ಒಮ್ಮೊಮ್ಮೆ ಬಡಬಡಿಸುವರು.

ಕಲ್ಲಸಬ್ಬಸಗಿ, ಅಡುಸಾಲ, ಕಟುಕರೋಣಿ ಚಿರಾಯಿತ, ಹವೀಜ ಇವುಗಳ ಅಷ್ಟಮಾಂಶ ಕಷಾಯವನ್ನು ದಿನಕ್ಕೆ ಎರಡುಸಲ ತೆಗೆದುಕೊಳ್ಳುವದು. ಕಷಾಯ ತೆಗೆದುಕೊಳ್ಳುವಾಗ ಅದರಲ್ಲಿ ಸಕ್ಕರೆ ಕೂಡಿಸಬೇಕು.

ಕೇವಲ ಕಲ್ಲಸಬ್ಬಸಗಿ ಕಷಾಯದಲ್ಲಿ ಸಕ್ಕರೆ ಹಾಕಿ ತೆಗೆದುಕೊಳ್ಳುವದರಿಂದಲೂ ಪಿತ್ತಜ್ವರ ಕಡಿಮೆಯಾಗುವದು.

ಈ ಕಷಾಯ ತೆಗೆದುಕೊಳ್ಳುತ್ತಿರುವಾಗ, ಚಂದ್ರಕಲಾ ಅರ್ಧಗುಂಜಿ, ಮೌಕ್ತಿಕ ಅರ್ಧಗುಂಜಿ, ಪ್ರವಾಳ ಚಂದ್ರಪುಟ ೧ ಗುಂಜಿ, ಅಮೃತಸತ್ವ ೨ ಗುಂಜಿ ಕೂಡಿಸಿ ನೆಲ್ಲೀಕಾಯಿ ಪಾಕಿನಲ್ಲಿ ಬೆಳಿಗ್ಗೆ ಒಂದುಸಲ ತೆಗೆದುಕೊಳ್ಳಬಹುದು.

ಕಫಜ್ವರ

ಬಾಯಿ ಉಪ್ಪುಪ್ಪು ಅಥವಾ ಸಿಹಿಸಿಹಿ ಆಗಿ, ಜಿಗುಟು ಆದಲ್ಲಿ ಕಫಜ್ವರವೆಂದು ತಿಳಿಯಬೇಕು. ಇದಕ್ಕೆ ಚಿರಾಯಿತ, ಶುಂಠಿ, ಬೇವಿನಕಡ್ಡಿ, ಹಿಪ್ಪಲಿ, ಶತಾವರಿ, ಅಮೃತಬಳ್ಳಿ, ನೆಲಗುಳ್ಳ, ಅಡುಸಾಲ ಇವುಗಳ ಅಷ್ಟಮಾಂಶ ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ದಿನಕ್ಕೆ ಎರಡುಸಲ ತೆಗೆದುಕೊಳ್ಳುವದು.

ಈ ಕಷಾಯದೊಡನೆ ರಸಸಿಂದೂರ, ಸಮೀರಪನ್ನಗ, ಮಹಾಮೃತ್ಯುಂಜಯ, ತ್ರಿಭುವನಕೀರ್ತಿಗಳನ್ನು ಅರ್ಧದಿಂದ ೧ ಗುಂಜಿ, ಅಲ್ಲದರಸ ಜೇನುತುಪ್ಪದಲ್ಲಿ ಕೊಡಬಹುದು.

ಅಮೃತಬಳ್ಳಿ, ಹವೀಜ, ಬೇವಿನಕಡ್ಡಿ, ರಕ್ತಚಂದನ, ಪದ್ಮಕಾಷ್ಠ ಇವುಗಳ ಅಷ್ಟಮಾಂಶ ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ದಿನಕ್ಕೆ ಎರಡುಸಲ ಕೊಡುವದು.

ತ್ರಿಭುವನಕೀರ್ತಿ, ಜ್ವರಾಂಕುಶ, ಮೃತ್ಯುಂಜಯ ಈ ಔಷಧಗಳಲ್ಲಿ ಯಾವದಾದರೊಂದನ್ನು ೧-೨ ಗುಂಜಿ ಅಲ್ಲದ ರಸ ಜೇನುತುಪ್ಪಗಳೊಡನೆ ದಿನಕ್ಕೆ ಎರಡುಸಲ ಕೊಡುವದು.

ಸನ್ನಿಪಾತಜ್ವರ

ಜ್ವರದ ಉಷ್ಣತೆ ಹೆಚ್ಚು, ಕಣ್ಣು ಕೆಂಪಗೆ, ಪ್ರಜ್ಞೆತಪ್ಪುವದು, ಬಡಬಡಿಸುವದು ಮುಂತಾದ ಅನೇಕ ಲಕ್ಷಣಗಳಿರುತ್ತವೆ. ಏಳು, ಹದಿನಾಲ್ಕು, ಇಪ್ಪತ್ತೊಂದು ದಿವಸಗಳಿಗೆ ಜ್ವರ ಬಿಡುತ್ತದೆ. ಒಮ್ಮೊಮ್ಮೆ ಅವಧಿಯನ್ನು ಮುಂದೆ ಹೋಗುತ್ತದೆ. ಸನ್ನಿಪಾತ ಜ್ವರ ಬಹಳ ಭಯಾನಕ. ಸುವೈದ್ಯರ ಸಲಹೆಯಿಂದ ಚಿಕಿತ್ಸೆ ನಡೆಸಬೇಕು. ಅವರು ಬರುವ ಪೂರ್ವದಲ್ಲಿ ಪಿಪ್ಪಲಿ, ಮೋಡಿಕಡ್ಡಿ, ಚವಕ, ಚಿತ್ರಮೂಲ, ಇಂದ್ರಜವ, ಕೋಷ್ಟ, ಬಜೆ, ಅತಿವಿಷ, ಪರಿಪಾಷ್ಟಕ, ಚಿರಾಯತ, ಕಟುಕರೋಹಿಣಿ, ಮೆಣಸು, ವಾಯುವಿಡಂಗ, ಬಿಳೇ ಎಕ್ಕೇಬೇರು, ನೆಲಗುಳ್ಳ, ಧಮಾಸಾ, ಅಜವಾನ ಇವುಗಳ ಅಷ್ಟಮಾಂಶ ಕಷಾಯ ಇಳಿಸಿ ಸೋಸಿ ಜೇನುತುಪ್ಪ ಹಾಕಿ ದಿನಕ್ಕೆ ಎರಡು ಸಲ ಕೊಡುವದು.

ಜೊತೆಗೆ ೧ ಗುಂಜಿ ಹೇಮಗರ್ಭವನ್ನು ತುಳಸೀರಸ ಜೇನುತುಪ್ಪದಲ್ಲಿ ಕೊಡುತ್ತಿರಬೇಕು.

ಜ್ವರದ ಉಷ್ಣತೆ ಬಹಳ ಎನಿಸಿದಲ್ಲಿ ಹಣೆಗೆ ತಣ್ಣೀರಿನ, ಅಥವಾ ಗುಲಾಬಿ ಜಲದ ಪಟ್ಟಿಯನ್ನು ಸ್ವಲ್ಪ ಹೊತ್ತು ಇಡಬೇಕು. ಪಟ್ಟಿ ಒಣಗದಂತೆ ಅದರ ಮೇಲೆ ಚಮಚೆಯಿಂದ ನೀರು ಹಾಕುತ್ತಿರಬೇಕು. ರೋಗಿಯನ್ನು ಎಬ್ಬಿಸಿ ಕೂಡ್ರಿಸಬಾರದು. ಮಲಮೂತ್ರಗಳನ್ನು ಮಲಗಿದಲ್ಲಿಯೇ ಹಾಸಿಗೆಯು ಹೊಲಸಾಗದಂತೆ, ಯುಕ್ತಿಯಿಂದ ಮಾಡಿಸಬೇಕು. ಹುರಳೀ ಕಟ್ಟು, ಕಾಫಿ, ಮೋಸಂಬೀರಸಗಳನ್ನು ಕಳಲ ನಳಿಗೆಯನ್ನು ಮಲಗಿದಲ್ಲಿಯೇ ಕೊಡಬೇಕು. ಬಿಸಿನೀರಿನಿಂದ ಮೈ ಒರಸಬೇಕು. ಹಲ್ಲು, ಬಾಯಿಗಳನ್ನು ಸ್ವಚ್ಛ ತೊಳೆಯಲು ಮರೆಯಬಾರದು. ಕುಡಿಯಲಿಕ್ಕೆ ಕಾಸಿ ಆರಿಸಿದ ನೀರು ಕೊಡಬೇಕು. ನೀರು ಕಾಯುವ ಪಾತ್ರೆಯಲ್ಲಿ ನೀರು ಕಾಯುವಾಗ, ಬಂಗಾರದ ಚೂರು ಒಗೆದರೆ ಬಹಳ ನೆಟ್ಟಗೆ. ಶೌಚಕ್ಕೆ ಆಗಿದ್ದಿಲ್ಲವೆಂದರೆ ಗ್ಲಿಸರೀನದ ಬತ್ತಿಯನ್ನು ಕೊಡಬೇಕು. ಸವಿನಾರವನ್ನಗ,

ಸನ್ನಿಪಾತ ಭೈರವಗಳಂಥ ಔಷಧಗಳನ್ನು ವೈದ್ಯರ ಸಲಹೆಯಿಂದ ಉಪಯೋಗಿಸಬೇಕು.

ವಿಷಮಜ್ವರ

ಸಾಧಾರಣ ಬಿಟ್ಟೂಬಿಡದಲೆ, ಒಂದೇ ಸವನೆ ಆರವೆ ಬರುವ ಜ್ವರಕ್ಕೆ ವಿಷಮಜ್ವರವೆಂದು ಎನ್ನುವ ರೂಢಿ ಜನರಲ್ಲಿ ಇದೆ. ಶಾಸ್ತ್ರದಲ್ಲಿ ಇದಕ್ಕೆ ಸಂತತ ಜ್ವರವೆಂದು ಎನ್ನುತ್ತಾರೆ. ಈ ಜ್ವರದಲ್ಲಿ ಕೂಡ ಸನ್ನಿಪಾತ ಜ್ವರದಂತೆ, ರೋಗಿಯುನ್ನು ಬಹಳ ಎಚ್ಚರಿಕೆಯಿಂದ ಕಾಯುತ್ತಿರಬೇಕು. ಪಥ್ಯ ಕೂಡ ಸನ್ನಿಪಾತ ಜ್ವರದಂತೆ.

ತ್ರಿಫಳಾ, ನೆಲಬೇವು, ನೆಲಗುಳ್ಳದ ಬೇರು, ಗಂಟುಭಾರಂಗಿ ಇವುಗಳ ಕಷಾಯವನ್ನು ದಿನಕ್ಕೆ ಎರಡು ಸಲ ಜೇನತುಪ್ಪ ಹಾಕಿ ಕೊಡಬೇಕು.

ತ್ರಿಭುವನ ಕೀರ್ತಿ ೧-೨ ಗುಂಜಿ, ತುಲಸೀರಸ ಜೇನುತುಪ್ಪದಲ್ಲಿ ಕೊಡಬೇಕು.

ಇನ್‌ಫ್ಲುಯಂಝಾ

ಇದಕ್ಕೆ ಆಗಂತುಕ, ವಾತ, ಕಫ ಜ್ವರವೆಂದೆನ್ನಬಹುದು. ವಿಲಕ್ಷಣ ಮೈ-ಕೈ ನೋವು, ಕೆಮ್ಮು, ಜ್ವರ ಇವು ಸರ್ವಸಾಮಾನ್ಯ ಲಕ್ಷಣಗಳು. ಜಡ ಆಹಾರ ಕೊಡಬಾರದು. ಹುರಳೀಕಟ್ಟು, ಅರಳಿಟ್ಟಿನ ಕಷಾಯ, ಮೋಸಂಬೀರಸಗಳನ್ನು ಕೊಡಬೇಕು. ಎದೆ, ಬೆನ್ನುಗಳನ್ನು, ಅಗಸೀ ಪೋಟೀಸಿನಿಂದ ಕಾಸಬೇಕು. ನೀಲಗಿರಿ ಎಣ್ಣೆ, ಕೊಬ್ಬರಿ ಎಣ್ಣೆಗಳನ್ನು ಕೂಡಿಸಿ, ಎದೆ ಬೆನ್ನುಗಳಿಗೆ ಹಚ್ಚಬೇಕು. ಅಥವಾ ತರ್ಪಣ ತೈಲ ಕೊಬ್ಬರೀಎಣ್ಣೆ ಕೂಡಿಸಿ ಹಚ್ಚಬೇಕು. ದಿನಕ್ಕೆ ೨-೩ ಸಲ ಕಾಸಬೇಕು.

ಕಟ್‌ಫಲಾದಿ ಕಷಾಯ:— ಕಾಯಫಲ, ಗಂಟುಭಾರಂಗಿ, ಜೇಕಿನ ಗಡ್ಡೆ, ಹವೀಜ, ಬಜೆ, ಅಳಲೇಕಾಯಿ, ಕಾಕಡಶಿಂಗಿ, ಪರಿಪಾಠ್ಯಕ, ಶುಂಠಿ, ದೇವದ್ಪಾರ ಇವುಗಳ ಕಷಾಯವನ್ನು ಅಷ್ಟಮಾಂಶ ಇಳಿಸಿ ದಿನಕ್ಕೆ ೩ ಸಲ ಕೊಡುವದು. ಇದನ್ನು ಕೊಡುವದರಿಂದ, ಜ್ವರ, ಕೆಮ್ಮು, ಮೈ-ಕೈ ನೋವು ಕಡಿಮೆಯಾಗುತ್ತಿದೆ. ಇದರ ಜೊತೆಗೆ ತ್ರಿಭುವನಕೀರ್ತಿ, ಮಹಾ ಜ್ವರಾಂಕುಶ, ಕಲ್ಪತರು ರಸಾಯನ ಇವುಗಳಲ್ಲಿ ಯಾವುದಾದರೊಂದನ್ನು

ಅಲ್ಲದರಸ, ಜೇನುತುಪ್ಪದಲ್ಲಿ ಅರ್ಧದಿಂದ ೧ ಗುಂಜಿ ಕೊಡಬೇಕು. ಬೆಳಿಗ್ಗೆ, ಮತ್ತು ಸಾಯಂಕಾಲ.

ಶೌಚಕ್ಕೆ ಆಗದಿದ್ದರೆ, ಆರಗ್ವಧಾದಿ ಕಷಾಯವನ್ನು ಕೊಡಬೇಕು. ಕಕ್ಕೇಕಾಯಿ ತಿರುಳು, ಮೋಡಿಕೆಮ್ಮಿ, ಕಟುಕರೋಣೀ, ಜೇಕಿನಗೆಡ್ಡೆ, ಅಳಲೇಕಾಯಿ ಇವುಗಳ ಕಷಾಯಕ್ಕೆ ಆರಗ್ವಧಾದಿ ಕಷಾಯವೆನ್ನುತ್ತಾರೆ.

ಎದೆ ಹಗುರಾಗಲಿಕ್ಕೆ:-- ಮೃಗಶೃಂಗಭಸ್ಮ ೧ ಗುಂ. ಪ್ರವಾಳ ಅಗ್ನಿ ಪುಟ ೧ ಗುಂ. ಸಿತೋಪಲಾದಿ ಚೂರ್ಣ ೧ ಮಾಷಿ ಈ ಪ್ರಮಾಣದಿಂದ ಕೂಡಿಸಿ, ೩ ಭಾಗ ಮಾಡಿ ದಿನಕ್ಕೆ ೩ ಸಲ ಜೇನುತುಪ್ಪದಲ್ಲಿ ಕೊಡುವದು.

ರಸಸಿಂದೂರ ೧ - ೧॥ ಗುಂಜಿ ಅಲ್ಲದರಸ, ಜೇನುತುಪ್ಪದಲ್ಲಿ ಕೊಡುವದು.

ನಾಡೀಗತಿಯು ಮಂದವಾಗುವ ಲಕ್ಷಣ ಕಂಡರೆ-- ಮಹಾಲಕ್ಷ್ಮೀ ವಿಲಾಸ ಅಥವಾ ಹೇಮಗರ್ಭವನ್ನು ೪ ಗುಂಜಿಯಷ್ಟು ಅಲ್ಲದರಸ, ಜೇನು ತುಪ್ಪದಲ್ಲಿ ಕೊಡಬೇಕು.

ವಾತದೋಷವು ಹೆಚ್ಚಾದಲ್ಲಿ— ಮಹಾವಾತವಿಧ್ವಂಸ, ಪ್ರತಾಪ ಲಂಕೇಶ್ವರ ಇವುಗಳಲ್ಲಿ ಯಾವುದಾದರೊಂದನ್ನು ಸೂಕ್ಷ್ಮ ಪ್ರಮಾಣದಿಂದ ಕೊಡುವದು. ಅನುಪಾನ, ಅಲ್ಲದರಸ, ಜೇನುತುಪ್ಪ.

ಪಿತ್ತದೋಷವು ಹೆಚ್ಚಾದಲ್ಲಿ— ಸುವರ್ಣಯುಕ್ತ ಸೂತಶೇಖರವನ್ನು ಅಲ್ಲದರಸ, ಕಲ್ಲುಸಕ್ಕರೆಯಲ್ಲಿ ಕೊಡುವದು.

ಕಫದೋಷವು ಹೆಚ್ಚಾದಲ್ಲಿ - ಪಂಚಸೂತ, ಮಲ್ಲಸಿಂದೂರಗಳನ್ನು ಸೂಕ್ಷ್ಮ ಪ್ರಮಾಣದಿಂದ ಕೊಡುವದು. ದಿನಕ್ಕೆ ೨-೩ ಸಲ. ಒಣ ಕೆಮ್ಮಿಗೆ-ಜೇಷ್ಠಮಧು, ತಾರೀಕಾಯಿ, ಅಡುಸಾಲದ ಎಲೆ, ಜಾರೀ ಒಳದೊಗಟೆ, ಕಲ್ಲುಸಕ್ಕರೆಗಳ ಕಷಾಯವನ್ನು ದಿನಕ್ಕೆ ೨-೩ ಸಲ ಕೊಡಬೇಕು.

ರೋಗಿಗೆ ಶೀತಬಾಧೆಯಾಗದಂತೆ ಎಚ್ಚರಿಯುವದು ಅವಶ್ಯವಿದೆ. ಈ ಜ್ವರದಲ್ಲಿ ಲಂಘನವು ಹಿತಕಾರಿಯಾಗಿದೆ. ಪಿತ್ತಾಧಿಕ್ಯವಿದ್ದಲ್ಲಿ ಭತ್ತರಳಿನ ಗಂಜಿಯನ್ನು ಕೊಡಬೇಕು. ಕಫಾಧಿಕ್ಯವಿದ್ದಲ್ಲಿ ಮೋಸಂಬಿ ಕೊಡಬಾರದು.

ವಾತಪ್ರಾಧಾನ್ಯವಿದ್ದಲ್ಲಿ ಮುರಳೀಕಟ್ಟು, ತುಸು ಸ್ನಿಗ್ಧಫಲವನ್ನು ಹಾಕಿ ಕೊಡಬೇಕು. ಬೆಳಗುಮುಂಜಾನೆ ಹಾಲುಸಕ್ಕರೆ ತೀರ ಕಡಿಮೆ ಹಾಕಿ ತೀಕ್ಷ್ಣ ಕಾಫಿಯನ್ನು ಕೊಡಬೇಕು.

ಟಾಯಿಫಾಯಿಡ್

ಇದಕ್ಕೆ ವಾತಪಿತ್ತೋಲ್ಬಣ ಸನ್ನಿಪಾತಜ್ವರವೆಂದೆನ್ನಬಹುದು. ಸಾಧಾರಣವಾಗಿ ಈ ಜ್ವರವು ಕೂಡ ೨೧ ದಿನಸಗಳವರೆಗೆ ಇದ್ದೇ ಇರುತ್ತದೆ. ಸನ್ನಿಪಾತದಂತೆ ಇದು ಕೂಡ ಭಯಾನಕವಾಗಿದೆ. ಮೊದಲನೇ ವಾರದಲ್ಲಿ ೯೯ ರಿಂದ ೧೦೪ ರ ವರೆಗೆ ಏರಬಹುದು. ಟಾಯಿಫಾಯಿಡ್ ಜ್ವರದಲ್ಲಿ ವಾತಪಿತ್ತ ಲಕ್ಷಣಗಳೇ ಬಹಳ. ಕರುಳಿನಲ್ಲಿ ಆಗಂತುಕ ದೋಷಗಳಿಂದ ಬಾವು ಬರುತ್ತದೆ. ಅಲ್ಲಿ ಧಾತು ವೈಷಮ್ಯವನ್ನು ಹುಟ್ಟಿಸಿ ಬೇನೆಗೆ ಕಾರಣಗಳಾಗುತ್ತವೆ. ಅದರಿಂದ ಜ್ವರವೂ, ದಾಹವೂ, ಅರುಚಿಯೂ, ಅಗ್ನಿದೌರ್ಬಲ್ಯವೂ, ಮಲಪ್ರವೃತ್ತಿಯೂ, ಅಪ್ರವೃತ್ತಿಯೂ, ತಲೆಶೂಲಿಯೂ ಉಂಟಾಗುತ್ತವೆ.

ಎರಡನೇ ವಾರದ ಪ್ರಾರಂಭಕ್ಕೆ ಜ್ವರದ ತೀವ್ರತೆ ಹೆಚ್ಚಿ ಸನ್ನಿಪಾತವಾಗಿ ರೋಗಿಯು ಬಡಬಡಿಸಬಹುದು. ಇಂಥ ಸಮಯದಲ್ಲಿ ವೈದ್ಯರು ಬಹಳ ಜಾಣತನದಿಂದ ಚಿಕಿತ್ಸೆ ಮಾಡಬೇಕು. ಈ ಸಮಯದಲ್ಲಿ ಮರಣ ಸಂಭವಿಸಬಹುದಾಗಿದೆ. ರೋಗಿಯನ್ನು ಎಬ್ಬಿಸಿ ಕೂಡ್ರಿಸಬಾರದು. ಶೌಚ ಮೂತ್ರಗಳನ್ನು ಮಲಗಿದಲ್ಲಿಯೇ ಮಾಡಿಸಬೇಕು. ಕಾಫಿ, ಮೋಸಂಬೀ ರಸ, ಅರಳಿಟ್ಟಿನ ಕಷಾಯ, ಭತ್ತರಳಿನ ಗಂಜಿ, ಮುರಳೀಕಟ್ಟುಗಳಲ್ಲಿ ಯಾವುದು ಯೋಗ್ಯವೋ ಅದನ್ನು ಕೊಡಬೇಕು. ಪಿತ್ತ ದೋಷವು ಪ್ರಬಲವಿದ್ದರೆ ಆಕಳ ಹಾಲುಕೊಡಲು ಅಡ್ಡಿ ಇಲ್ಲ. ವಾತ ಕಫ ದೋಷಗಳು ಪ್ರಬಲವಿದ್ದಾಗ ಹಾಲು ಕೊಡಬಾರದು.

ಶೌಚಕ್ಕೆ ಆಗದೆ ಇದ್ದರೆ, ಗ್ಲಿಸರೀನದ ಬಸ್ತಿಯನ್ನು ಕೊಡಬೇಕು.

ಜ್ವರ ಪ್ರಾರಂಭವಾದಕೂಡಲೇ, (೧) ಶುಂಠ್ಯಾದಿಪಾಚನ,—ಶುಂಠಿ, ಹವೀಜ, ದೇವದ್ವಾರ, ನೆಲಗುಳ್ಳ, ಹೆಗ್ಗುಳ್ಳಗಳ ಅಷ್ಟಮಾಂಶ ಕಷಾಯವನ್ನು, ಅಥವಾ (೨) ಪಂಚಭದ್ರ ಕಷಾಯ—ಅಮೃತಬಳ್ಳಿ, ಜೇಕಿನಗಡ್ಡೆ, ಕಲ್ಲುಸಬ್ಬಸಿಗೆ, ಚಿರಾಯಿತ, ಶುಂಠಿ ಇವುಗಳ ಅಷ್ಟಮಾಂಶ ಕಷಾಯವನ್ನು

ಜೇನುತುಪ್ಪ ಹಾಕಿ ದಿವಸಕ್ಕೆ ಎರಡುಸಲ ಕೊಡಬೇಕು. ಜ್ವರ ಕಡಿಮೆಯಾಗುವವರೆಗ ಕೊಡುತ್ತ ಹೋಗಬೇಕು. ಬರೋ ವೈದ್ಯರು ಬಂದರೆ ಅವರ ಸಲಹೆಯಂತೆ ನಡೆದುಕೊಳ್ಳಬೇಕು.

ಪ್ರಕೃತಿಯಲ್ಲಿ **ವಾತದೋಷವು** ಪ್ರಬಲ ಕಂಡರೆ, ಮಹಾವಾತ ವಿಧ್ವಂಸ ೧ ಗುಂಜ ಕಾಡಿಗ್ಗರಗಿನ ರಸ ½ ತೊಲಿ ತುಲಸೀರಸ ½ ತೊಲಿ ನೆಲ್ಲೀಕಾಳಿನ ತೊಲಿ ಇವೆಲ್ಲವುಗಳನ್ನು ಒಂದು ಬಟ್ಟಲದಲ್ಲಿ ಕಲಿಸಿ ಇಟ್ಟು ಆಗಾಗ ನಾಲಿಗೆಗೆ ಹಚ್ಚುತ್ತಿರಬೇಕು.

ಪಿತ್ತದೋಷವು ಪ್ರಬಲ ಕಂಡರೆ, ಮುಕ್ತಾಭಸ್ಮ ೧ ಗುಂಜ, ಪ್ರವಾಳ ಚಂದ್ರಪುಟ ೨ ಗುಂ. ಅಮೃತಸತ್ವ ೩ ಗುಂ. ಇವುಗಳನ್ನು ನೆಲ್ಲೀಕಾಳದಲ್ಲಿ ಕೂಡಿಸಿ, ಆಗಾಗ ನೆಕ್ಕಿಸುವದು. ನಾಡೀ ಗತಿಯು ಕಡಿಮೆ ಎನಿಸಿದರೆ, ಲಕ್ಷ್ಮೀವಿಲಾಸ, ಹೇಮಗರ್ಭಗಳಲ್ಲಿ ಯಾವುದಾದರೊಂದನ್ನು ಜೇನುತುಪ್ಪದಲ್ಲಿ ಕೊಡಬೇಕು.

ಕಫದೋಷವು ಪ್ರಬಲವಿದ್ದರೆ, ಲಕ್ಷ್ಮೀನಾರಾಯಣರಸ ½ ಗುಂಜ ಸಿತೋಪಲಾದಿಚೂರ್ಣ ೪ ಗುಂಜ, ಮೃಗಶೃಂಗ ೧ ಗುಂಜ ಜ್ಯೇಷ್ಠಮಧು ಚೂರ್ಣ ೪ ಗುಂಜ ಇವೆಲ್ಲವುಗಳನ್ನು ಕೂಡಿಸಿ, ಅದರಲ್ಲಿ ನಾಲ್ಕು ಭಾಗ ಮಾಡಿ, ೩-೩ ತಾಸಿಗೊಮ್ಮೆ ಒಂದು ಭಾಗವನ್ನು ಜೇನುತುಪ್ಪದಲ್ಲಿ ಕೊಡುತ್ತ ಹೋಗಬೇಕು.

ಗುದದ್ವಾರದಿಂದ ರಕ್ತಸ್ರಾವವಾದರೆ, ೧-೨ ಗುಂಜ ಚಂದ್ರಕಲಾ ದಾಳಿಂಬಹಣ್ಣಿನಲ್ಲಿ ಕೊಡಬೇಕು. ರೋಗಿಯು ಹಲ್ಲು ಬಾಯಿಗಳನ್ನು ಪ್ರತಿದಿನ ಸ್ವಚ್ಛ ಮಾಡುತ್ತಿರುವದು. ಬಿಸಿನೀರಿನ ಬಟ್ಟೆಯಿಂದ ಮೈ ಒರೆಸುತ್ತಿರಬೇಕು. ಜ್ವರ ಕಡಿಮೆಯಾದ ನಂತರ, ರೋಗಿಗೆ ಹಸಿವೆ ಬಹಳ ಅನಿಸುತ್ತದೆ. ಆಗ ಬಹಳ ಜಾಗರೂಕತೆಯಿಂದ, ಲಘು ಆಹಾರವನ್ನು ಕೊಡಬೇಕು.

ನ್ಯುಮೋನಿಯಾ

ಇದಕ್ಕೆ ಕಫಪ್ರಧಾನ ಸನ್ನಿಪಾತವೆಂದೆನ್ನಬಹುದು. ಹೆಗಲದುಃಖ ತೀವ್ರ ಜ್ವರ, ಎದೆ ಬಿಗಿಯುವದು, ಕೆಮ್ಮು ಇವು ನ್ಯುಮೋನಿಯಾದ ಸರ್ವಸಾಧಾರಣ ಲಕ್ಷಣಗಳು. ಈ ಬೇನೆ ಬಂದವರನು ಕೂಡ ಎಷ್ಟು ಕೊಡ್ಡದ

ಬಾರದು. ಮೊದಲು ಒಂದೆರಡು ದಿವಸ ಲಂಘನವೇ ಒಳ್ಳೆಯದು. ಅನಂತರ ಕಾಫಿ, ಅರಳಿಟ್ಟಿನ ಕಷಾಯ, ಹುರಳೀಕಟ್ಟುಗಳಲ್ಲಿ ಯಾವುದಾದರೊಂದನ್ನು ಕೊಡಬೇಕು. ರೋಗದ ಪ್ರಾರಂಭಾವಸ್ಥೆಯಲ್ಲಿ— ತುಳಸೀ ಎಲೆ ೨೦, ಬಿಲಪತ್ರಿ ಎಲೆ ೧೦, ದಾಲಚಿನ್ನಿ ೧॥ ಮಾಸಿ ಇವುಗಳ ಕಷಾಯದಲ್ಲಿ ತ್ರಿಭುವನಕೀರ್ತಿಯನ್ನಾಗಲೀ, ಮಹಾಮೃತ್ಯುಂಜಯವನ್ನಾಗಲೀ ದಿನಕ್ಕೆ ಎರಡುಸಲ ಕೊಡುವದು.

ಕಫವು ನೀರಾಗಿ ಹೊರಗೆ ಬರಲಿಕ್ಕೆ-- ರಸಸಿಂದೂರ ½ ಗುಂಜಿ, ಜೇಷ್ಠಮಧು ಚೂರ್ಣ ೨ ಗುಂಜಿ, ಸೀತೋಪಲಾದಿ ಚೂರ್ಣ ೪ ಗುಂಜಿ, ಕೋಷ್ಟ ಚೂರ್ಣ ೧ ಗುಂಜಿ, ಮೃಗಶೃಂಗ ಭಸ್ಮ ೧ ಗುಂಜಿ ಈ ಪ್ರಮಾಣ ದಿಂದ ಕೂಡಿಸಿ, ೩ ತಾಸಿಗೊಮ್ಮೆ ಜೇನುತುಪ್ಪದಲ್ಲಿ ಕೊಡಬೇಕು ಮತ್ತು ಕೆಮ್ಮು ಕಡಿಮೆಯಾಗುವದಕ್ಕಾಗಿ ಜೇಷ್ಠಮಧು, ತಾಲೀಸಾಪು, ಕೋಷ್ಟ, ಅಡುಸಾಲ, ತುಲಸೀ ಎಲೆ ಮತ್ತು ಕಲ್ಲುಸಕ್ಕರೆಗಳ ಕಷಾಯವನ್ನು ಕೊಡುತ್ತಿರಬೇಕು.

ನಾಡಿಯ ಗತಿಯು ಮಂದವಾದಲ್ಲಿ ಲಕ್ಷ್ಮೀವಿಲಾಸ, ಹೇಮಗರ್ಭಗಳಂಥ ಔಷಧಗಳನ್ನು ½ ದಿಂದ ¾ ಗುಂಜಿಯ ವರೆಗೆ ಜೇನುತುಪ್ಪದಲ್ಲಿ ಕೊಡಬೇಕು.

ಜ್ವರ ಹೆಚ್ಚಾಗಿ ದಾಹವಾಗಹತ್ತಿದರೆ ಕಮಲ, ಚಂದನ, ಬಾಳದಬೇರು, ಜೇಷ್ಠಮಧು, ಜೇಕಿನಗಡ್ಡೆಗಳ ಕಷಾಯದಲ್ಲಿ ಸಕ್ಕರೆ ಕೂಡಿಸಿ ಕೊಡಬೇಕು.

ಶೌಚಕ್ಕೆ ಆಗದಿದ್ದರೆ ಗ್ಲೀಸರೀನದ ಬತ್ತಿಯನ್ನು ಕೊಡುವದು. ಎದೆ ಬೆನ್ನುಗಳಿಗೆ ತರ್ಪಣತೈಲ, ಕೊಬ್ಬರೀ ಎಣ್ಣೆ ಕೂಡಿಸಿ ಹಚ್ಚಿ ಅಗಸೀ ಪೋಟೀಸಿನಿಂದ ಕಾಸಬೇಕು. ದಿನಕ್ಕೆ ೨-೩ ಸಲ ಕಾಸಬೇಕು.

ಜ್ವರ ಕಡಿಮೆಯಾದನಂತರ, ತಿಳಿ ಅಕ್ಕಿಗಂಜಿಯನ್ನು ಕೊಡಬೇಕು.

ಪ್ಲೇಗು

ಒಮ್ಮೆಲೇ ತೀವ್ರಜ್ವರ, ಕಣ್ಣು ಕೆಂಪಾಗುವದು, ಗೆಜ್ಜ ಅಥವಾ ಬಗಲಲ್ಲಿ ಅಥವಾ ಕುತ್ತಿಗೆಯ ಸಂದಿನಲ್ಲಿ ಗಂಟು ಏಳುವದು ಇವು ಸರ್ವಸಾಧಾರಣ ವಾಗಿ ಪ್ಲೇಗಿನ ಲಕ್ಷಣಗಳೆಂದು ಹೇಳಬಹುದು.

ಈ ರೋಗಿಗೂ ಕೂಡ ಸನ್ನಿಪಾತ ಜ್ವರದಂತೆ ಪಥ್ಯ, ಉಪಚಾರಗಳನ್ನು ಮಾಡಬೇಕು. ಶೌಚಕ್ಕೆ ಆಗದಿದ್ದರೆ ಗ್ಲಿಸರೀನದ ಬತ್ತಿಯನ್ನು ಕೊಡುವದು. ನಾಡಿ ಮಂದವಾದರೆ ಹೇಮಗರ್ಭವನ್ನು ಅಲ್ಲದರಸ ಜೇನು-ತುಪ್ಪದಲ್ಲಿ ಪ್ರಕೃತಿಗನುಸರಿಸಿ ೧-೨ ಸಲ ಕೊಡುವದು.

ಕಷಾಯ-ಹಿಪ್ಪಲಿ, ಮೋದೀಕಟ್ಟಿ, ಚವಕ, ಚಿತ್ರಮೂಲ, ಇಂದ್ರಜವ, ಶುಂಠಿ, ಬಜೆ, ಅತಿವಿಷ, ಪಂಚಾಕ್ಷರ, ಚಿರಾಯತ, ಕಟುಕರೋಗಿ, ಮೆಣಸು, ವಾಯುವಿಡಂಗ, ಬಿಳೀ ಎಕ್ಕೆಬೇರು, ನೆಲಗುಳ್ಳ, ಧಮಾಸಾ, ಅಜವಾನ ಇವುಗಳ ಅಷ್ಟಮಾಂಶ ಕಷಾಯದಲ್ಲಿ ಜೇನುತುಪ್ಪ ಹಾಕಿ ದಿನಕ್ಕೆ ಎರಡುಸಲ ಕೊಡುವದು.

ಸಮೀರಪನ್ನಗ, ಮಹಾಮೃತ್ಯುಂಜಯಗಳಲ್ಲಿ ಯಾವುದಾದರೊಂದನ್ನು ಅರ್ಧದಿಂದ ಒಂದು ಗುಂಜಿ ಅಲ್ಲದರಸ ಜೇನುತುಪ್ಪದಲ್ಲಿ ಕೊಡಬೇಕು.

ಶ್ಲೇಗಿನ ಗಂಟಿಗೆ ರೇವಚಿನ್ನಿ ಅರ್ಕ ತೆಯ್ದು ಹಚ್ಚಬೇಕು.

---

೨ ಪಚನಸಂಸ್ಥ ರೋಗಗಳು

ಹೊಟ್ಟೆ, ಯಕೃತ್, ಗ್ರಹಣಿ ಮತ್ತು ಕರಳು ಇವು ಪಚನೇಂದ್ರಿಯುಗಳು. ಈ ಇಂದ್ರಿಯುಗಳಲ್ಲಿ ದೋಷವಿಕೃತಿಯಾದರೆ ಅಲ್ಲಿ ರೋಗಗಳು ಹುಟ್ಟುವವು. ಕೆಳಗೆ ಬರೆದವುಗಳು ಪಚನಸಂಸ್ಥ ರೋಗಗಳು.

ಅಜೀರ್ಣ

ವೇಳೆ ಅವೇಳೆಯಲ್ಲಿ ಸಿಕ್ಕಸಿಕ್ಕಂತೆ ತಿನ್ನುವದರಿಂದ ಅಜೀರ್ಣವಾಗುತ್ತದೆ. ಅಜೀರ್ಣಕ್ಕೆ ಲಂಘನವು ಉತ್ತಮ ಔಷಧ. ಚೆನ್ನಾಗಿ ಹಸಿವೆ ಎನಿಸುವವರೆಗೆ ಏನನ್ನೂ ತಿನ್ನಬಾರದು. ಹೊಟ್ಟೆನೋವು ಇದ್ದರೆ ಸ್ವಲ್ಪ ಕಾಸಬೇಕು.

ಹಿಂಗಾಷ್ಟಕ, ಭಾಸ್ಕರಲವಣಗಳನ್ನು ತೆಗೆದುಕೊಳ್ಳುವದು. ಲಿಂಬೀರಸ ೧-೨ ಚಮಚಿ, ಅಷ್ಟೇ ಅಲ್ಲದರಸ ಕೂಡಿಸಿ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

ಅಲ್ಲದರಸ, ಕಾಡಿಗ್ಗರಗಿನರಸ ೨-೨ ಚಮಚಿ ಕೂಡಿಸಿ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

ಅಜೀರ್ಣವಾದಾಗ ವಿರೇಚನ ತೆಗೆದುಕೊಳ್ಳಬಾರದು. ಬಿಸಿನೀರು ಕುಡಿಯಬೇಕು.

ಹೊಟ್ಟೆ ಉಬ್ಬುವದು

ತರ್ಪಣತೈಲವನ್ನು ಹಚ್ಚಿ ಹೊಟ್ಟೆಯನ್ನು ಕಾಸುವದು. ಶುಂಠಿ, ಇಂಗು, ಸೈಂಧಲವಣ ಕೂಡಿಸಿ ಪುಡಿ ಮಾಡಿ ಸ್ವಲ್ಪ ಸ್ವಲ್ಪ ಬಾಯಿಯಲ್ಲಿ ಹಾಕಿಕೊಂಡು ಮೇಲೆ ಬಿಸಿನೀರು ಕುಡಿಯಬೇಕು ಅಥವಾ ಅಲ್ಲದರಸ, ಲಿಂಬೀರಸ ಕೂಡಿಸಿ ತೆಗೆದುಕೊಳ್ಳುವದು. ಇಂಗು, ಉಪ್ಪು ಹಾಕಿದ ನೀರಮಜ್ಜಿಗೆ ತೆಗೆದುಕೊಳ್ಳುವದು. ಹೊಟ್ಟೆ ಉಬ್ಬಿದ್ದು ಇಳಿದು ಹಸಿವೆ ಎನಿಸುವತನಕ ಊಟ ಮಾಡಬಾರದು.

ಕರಿಬೇವು, ಅಜವಾನಗಳ ಕಷಾಯ ಕುಡಿಯಬೇಕು.

ಹೊಟ್ಟೆಶೂಲಿ

ಅಜವಾನ, ಉಪ್ಪು ತಿಂದು ಬಿಸಿನೀರು ಕುಡಿಯುವದು. ಶುಂಠಿ, ಇಂಗು, ಉಪ್ಪು ಕೂಡಿಸಿ ಪುಡಿ ಮಾಡಿ ೪-೮ ಗುಂಜಿ ತೆಗೆದುಕೊಂಡು ಮೇಲೆ ಬಿಸಿನೀರು ಕುಡಿಯುವದು. ಶುಂಠಿ, ಬೆಲ್ಲ ಕುಟ್ಟಿ ತಿಂದರೂ ಹೊಟ್ಟೆಶೂಲಿ ಕಡಿಮೆಯಾಗುತ್ತದೆ.

ಅಳಲೀಕಾಯಿ, ಶುಂಠಿ, ಇಂಗು, ಪಾದೇಲವಣ, ಬಜಿ, ಇಂದ್ರಜವ ಇವುಗಳನ್ನು ಸಮಭಾಗ ತೆಗೆದು ಚೂರ್ಣ ಮಾಡಿ ೪-೮ ಗುಂಜಿ ಬಿಸಿನೀರಿನೊಡನೆ ದಿನಕ್ಕೆ ೨-೩ ಸಲ ತೆಗೆದುಕೊಳ್ಳಬೇಕು.

ಇಂಗು ೧ ಗುಂಜಿ, ಕರಿಮೆಣಸು ೧ ಗುಂಜಿ, ಶುಂಠಿ ೧ ಗುಂಜಿ, ಪಾದೇಲವಣ ೨ ಗುಂಜಿ, ಅಜವಾನ ೩ ಗುಂಜಿ ಇವೆಲ್ಲವುಗಳನ್ನು ಚೂರ್ಣ

ಮಾಡಿ ಬಿಸಿನೀರಿನೊಡನೆ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

ಶಂಖಭಸ್ಮ, ಶಂಖವಟಿಗಳಿಂದಲೂ ಗುಣಬರುತ್ತದೆ.

ಮಲಬದ್ಧತೆ

ಈಗಿನ ಕಾಲದಲ್ಲಿ ಈ ವಿಕಾರವಿದ್ದವರು ಬಹಳ ಜನರಿರುವರು. ಇದಕ್ಕೆ ಬೇರೆ ಏನೂ ಕಾರಣವಿರದೆ ಅನಿಯಮಿತ ಆಹಾರ-ವಿಹಾರ, ಅವ್ಯಾಯಾಮ ಇವೇ ಮುಖ್ಯ ಕಾರಣಗಳು. ಆಹಾರ-ವಿಹಾರಗಳಲ್ಲಿ ಬದಲು ಮಾಡಿಕೊಂಡು ಅದನ್ನು ಸರಿಪಡಿಸಿಕೊಳ್ಳುವದು ಒಳ್ಳೆಯ ಮಾರ್ಗ. ಕೆಳಗೆ ಬರೆದ ಚೂರ್ಣದ ಸೇವನೆಯಿಂದ ಸ್ವಲ್ಪ ದಿವಸಗಳಲ್ಲಿ ಸರಿಯಾಗುವದು.

ಮೃದುಸಾರಕ ಚೂರ್ಣ:— ಸುಂಠಿ ೪ ತೊಲಿ, ಬಡೇಸೋಪು ೪ ತೊಲಿ, ಅಳಲೇಕಾಯಿ ೪ ತೊಲಿ, ಸಾದೇಲವಣ ೪ ತೊಲಿ, ವಾಯುವಿಡಂಗ ೪ ತೊಲಿ, ಗುಲಾಬಿಮೊಗ್ಗಿ ೪ ತೊಲೆ, ಸೋನಾಮುಖಿ ೨೦ ತೊಲಿ ಪ್ರತ್ಯೇಕ ಕುಟ್ಟಿ ಅರಿವೆಯಲ್ಲಿ ಸೋಸಿ, ಎಲ್ಲವುಗಳನ್ನು ಚನ್ನಾಗಿ ಕೂಡಿಸಿ, ರಾತ್ರಿ ಮಲಗುವಾಗ ೧-೨ ಮಾಸಿ ತೆಗೆದು ಬೆಚ್ಚಗಿನ ನೀರು ಕುಡಿಯಬೇಕು.

ಅತಿಸಾರ

ಅತಿಸಾರವೆಂದರೆ ಹೊಟ್ಟೆ ಝಾಡಿಸುವದು. ಹೊಟ್ಟೆ ನುಲಿಯುತ್ತ ಭೇದಿಗಳಾಗುತ್ತಿದ್ದರೆ ಲಂಘನ ಮಾಡಿ ಲಾಜ್ಯಾಗ್ನಿರಸ, ಅಗ್ನಿವರ್ಧಕ, ಲಂಬೇ ರಸಗಳನ್ನು ಕೂಡಿಸಿ ೨ ೩ ಚಮಚೆ ದಿನಕ್ಕೆ ೨-೩ ಸಲ ತೆಗೆದುಕೊಳ್ಳಬೇಕು.

ಹೊಟ್ಟೆನುಲಿದು ಭೇದಿಯಾಗುತ್ತಿದ್ದರೆ, ಮೊದಲು ಸುಂಠೀಕಷಾಯ ದಲ್ಲಿ ಔಡಲ ಎಣ್ಣೆಯನ್ನು ೨-೩ ತೊಲೆಯಷ್ಟು ತೆಗೆದುಕೊಳ್ಳಬೇಕು. ಆ ದಿವಸ ಕಾಫಿ, ಪಕ್ವಗಳನ್ನು ತೆಗೆದುಕೊಳ್ಳದೇ ಇರಬೇಕು. ಮರುದಿವಸ (೧) ಬಾಲಬಿಲ್ವ, ಕುಟಜ, ಜೀರಿಗೆ, ಅಗಳಸುಂಠಿ, ಸುಂಠಿ ಇವುಗಳ ಕಷಾಯವನ್ನು ದಿನಕ್ಕೆ ೨ ಸಲ ತೆಗೆದುಕೊಳ್ಳುವದು. (೨) ಕೇವಲ ಬೇಲಪತ್ರಿಕಾಯಿ ಕಷಾಯದಿಂದಲೂ ಅತಿಸಾರವು ಗುಣವಾಗುತ್ತದೆ. (೩) ಮಾದಳಕಾಯಿ ಚೂರ್ಣ ೮ ಗುಂಜಿ, ದಾಲಚಿನ್ನಿ ಚೂರ್ಣ ೪ ಗುಂಜಿ, ಅಫು ಅರ್ಧ ಗುಂಜಿ ಈ ಪ್ರಮಾಣದಲ್ಲಿ ಕೂಡಿಸಿ ಸಕ್ಕರೆಯೊಡನೆ

ದಿನಕ್ಕೆ ೨–೩ ಸಲ ತೆಗೆದುಕೊಳ್ಳುವದು. ಕಾಫಿ, ಮಜ್ಜಿಗೆ, ಅಕ್ಕೀಗಂಜಿಗಳನ್ನು ತೆಗೆದುಕೊಳ್ಳಬೇಕು. ಬಿಸಿನೀರು ಕುಡಿಯಬೇಕು. ಜಡ ಆಹಾರ ತೆಗೆದುಕೊಳ್ಳಬಾರದು. ತರ್ಪಣತೈಲ ಹಚ್ಚಿ ಹೊಟ್ಟೆಯನ್ನು ಕಾಸಬೇಕು.

ಆಮಾತಿಸಾರ

ಕೆಂಪು ನಾಗಕೇಶರ, ಶುಂಠಿ, ಗಜಗದ ಬೀಜ (ಹುರಿದದ್ದು), ಜಾಜೀಕಾಯಿ, ಮಾಪಳಕಾಯಿ ಇವುಗಳನ್ನು ಸಮಭಾಗ ತೆಗೆದು ಚೂರ್ಣ ಮಾಡುವದು. ಇದರೊಳಗಿಂದ ಅರ್ಧ ಪುಡಿಯನ್ನು ಹುಸು ತುಪ್ಪ ಹಾಕಿ ಹುರಿಯುವದು. ನಂತರ ಎರಡೂ ಪುಡಿ ಕೂಡಿಸಿ, ಅದರಷ್ಟೇ ತೂಕ ಸಕ್ಕರೆ ಕೂಡಿಸಿ ಇಡುವದು. ¼ ದಿಂದ ½ ತೊಲಿ ಚೂರ್ಣವನ್ನು ಬಿಸಿನೀರಿನಸಗೂಡ ದಿನಕ್ಕೆ ೨–೩ ಸಲ ತೆಗೆದುಕೊಳ್ಳುವದು.

ಒಂದು ಶುಂಠೀಬೇರು, ¼ ಜಾಜೀಕಾಯಿ ಇವುಗಳನ್ನು ಹಾಲಿನಲ್ಲಿ ತೆಯ್ದು ಹುಸು ಸಕ್ಕರೆ ಕೂಡಿಸಬೇಕು. ತೀರ ಸ್ವಲ್ಪ ತುಪ್ಪವನ್ನು ಅದರಲ್ಲಿ ಹಾಕಿ ಕೆಂಡದ ಮೇಲೆ ಕುದಿಸಬೇಕು. ಆರಿದನಂತರ ಅದರೊಳಗೆ ೩ ಭಾಗ ಮಾಡಿ ದಿನದಲ್ಲಿ ೩ ಸಲ ತೆಗೆದುಕೊಳ್ಳುವದು.

೨-೩ ತೊಲೆ ಹಾಲಿನಲ್ಲಿ ಕರಗಿಸಿದ ೧–೨ ಚಮಚೆ ಸೋಲಮೇಣ ಹಾಕಿದಿನಕ್ಕೆರಡು ಸಲ ತೆಗೆದುಕೊಳ್ಳುವದು.

ರಕ್ತ ಆಮಾಂಶ

ದಾಳಿಂಬ ತೊಗಟೆಯ ಕಷಾಯವನ್ನು ದಿನಕ್ಕೆ ೨–೩ ಸಲ ತೆಗೆದುಕೊಳ್ಳುವದು.

ಮಾವಿನಕೋವಿ, ಶುಂಠಿ, ಕೊಡಸಿಗೆ, ದಾಳಿಂಬತೊಗಟೆಗಳ ಕಷಾಯವನ್ನು ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

ರಸಾಂಜನವನ್ನು ತೆಗೆದುಕೊಳ್ಳುವದರಿಂದಲೂ ರಕ್ತ ಆಮಾಂಶವು ಗುಣವಾಗುತ್ತದೆ.

ರಕ್ತ ಆಮಾಂಶಕ್ಕೆ ಮಜ್ಜಿಗೆ ಪಥ್ಯಕರವಾಗಿದೆ.

ಕುಂಕುಮಾದಿವಟಿ— ಕೇಶರ ೧ ಗುಂಜಿ, ಅಫು ·||· ಗುಂಜಿ, ಜಾಜೀಕಾಯಿ ·||· ಗುಂಜಿ ಅಲ್ಲದ ರಸದಲ್ಲಿ ದಿನಕ್ಕೆ ಎರಡು ಸಲ ತೆಗೆದು

ಆಮಾಂಶ ಮತ್ತು ಅತಿಸಾರರೋಗಗಳು, ಪಥ್ಯವನ್ನು ಒಳ್ಳೇ ಕಟ್ಟುನಿಟ್ಟಿನಿಂದ ಮಾಡಬೇಕು. ಲಂಘನ ಮಾಡಬೇಕು. ಬಿಸಿನೀರು ಕುಡಿಯಬೇಕು.

ಸಂಗ್ರಹಣಿ

ಪ್ರಾರಂಭವಾದ ಕೂಡಲೇ ಯೋಗ್ಯ ಚಿಕಿತ್ಸೆಯನ್ನು ಪ್ರಾರಂಭಿಸಿ ಗುಣಪಡಿಸಿಕೊಳ್ಳಬೇಕು. ಬೇರೆ ಆಹಾರವನ್ನು ಬಿಟ್ಟು, ಕೇವಲ ಹಾಲು ಮಜ್ಜಿಗೆಗಳ ಮೇಲೆಯೇ ಇರಬೇಕು. ನೀರು ಕಡಿಮೆ ಕುಡಿಯಬೇಕು.

೧. ಸುವರ್ಣಪರ್ಪಟಿ, ಪಂಚಾಮೃತಪರ್ಪಟಿ ಇವು ಗುಣಕಾರಿಯಾದ ಔಷಧಗಳು.

೨. ಶಂಖಭಸ್ಮ ೪ ಗುಂಜಿ, ಸೈಂಧಲವಣ ೪–೮ ಗುಂಜಿ ಜೇನುತುಪ್ಪದಲ್ಲಿ ದಿನಕ್ಕೆ ೨ ಸಲ ಕೊಡುವದು.

೩. ಕೊಡಸಿಗೆ ಬೇರಿನ ಚೂರ್ಣ ೧-೨ ಮಾಸಿ ಮಜ್ಜಿಗೆಯಲ್ಲಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

೪. ಶುಂಠಿ, ಜೇಕಿನಗಡ್ಡೆ, ವಾಯುವಿಡಂಗ, ಸೈಂಧಲವಣ, ಇಂಗು ಸಮಭಾಗ ತೆಗೆದು, ವಸ್ತ್ರಗಾಲಿತ ಚೂರ್ಣ ಮಾಡಿ ಬೆಳಿಗ್ಗೆ ಮತ್ತು ರಾತ್ರಿ ೧-೨ ಮಾಸಿ ಮಜ್ಜಿಗೆಯೊಡನೆ ತೆಗೆದುಕೊಳ್ಳಬೇಕು.

೫. ಬಾಳದ ಬೇರು, ಅತಿವಿಷ, ಬಿಲಪತ್ರಿ, ಜೇಕಿನಗಡ್ಡೆ, ಹವೀಜ, ಇಂದ್ರಜವ, ಮುಟ್ಟಲಮುರಕ, ಧಾತಕಿ, ಲೋಧ್ರ, ಶುಂಠಿ ಇವುಗಳ ಕಷಾಯವನ್ನು ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು. ಇದಕ್ಕೆ ಹ್ರೀಬೇರಾದಿ ಕಷಾಯವೆನ್ನುತ್ತಾರೆ.

೬. ಕುಟಜಾರಿಷ್ಟವನ್ನು ಬಿಟ್ಟುಬಿಡದೆ ಗುಣವಾಗುವ ವರೆಗೆ ತೆಗೆದುಕೊಳ್ಳುವದು.

ನಿದಾಘ ಅತಿಸಾರ

ಬಿಸಿಲುಗಾಲದಲ್ಲಿ ಒಮ್ಮಿಂದೊಮ್ಮೆಲೇ ಹೊಟ್ಟೆ ಕ್ಷುಬ್ಧಿಸುವದು ಆಗುವದುಂಟು. ಇದರಿಂದ ಮನುಷ್ಯನು ನಿತ್ರಾಣನಾಗುತ್ತಾನೆ.

೧. ಮಾವಿನಗೊಟ್ಟದೊಳಗಿನ ಬೀಜ ಮತ್ತು ಎಳೇ ಬೇಲಪತ್ರಿ ಕಾಯಿಗಳ ಕಷಾಯವನ್ನು ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

೨. ಹಿಂದೆ ಹೇಳಿದ ಕುಂಕುಮಾದಿ ವಟಿ ತೆಗೆದುಕೊಳ್ಳುವದು.

೩. ಹಣ್ಣು ಬೇಲಪತ್ರಿಯ ಸರಬತ್ತು ಮಾಡಿ ತೆಗೆದುಕೊಳ್ಳುವದು. ಊಟ ಮಾಡಬಾರದು. ಮಜ್ಜಿಗೆ, ಕಾಫಿ ತೆಗೆದುಕೊಳ್ಳಬೇಕು.

ವಿಷೂಚಿಕಾ (ಕಾಲರಾ)

ವಾಂತಿ ಮತ್ತು ಭೇದಿ ಒಂದೇಸವನೆ ಆಗಹತ್ತುವವು. ಕೈಕಾಲುಗಳಿಗೆ ಒರಟಿ ಬರುವದು, ಮೂತ್ರ ಆಗದಿರುವದು, ಕಣ್ಣು ಒಳಸೇರುವದು. ಇವು ಸಾಮಾನ್ಯವಾಗಿ ಕಾಲರಾದ ಲಕ್ಷಣಗಳು, ಇದಕ್ಕೆ ತಡಮಾಡದೆ ಕೂಡಲೇ ಔಷಧೋಪಚಾರ ಮಾಡಬೇಕು.

೧. ಅಲ್ಲದರಸ, ಉಳ್ಳಾಗಡ್ಡಿರಸ ಸಮಭಾಗದಿಂದ ಕೂಡಿಸಿ ಪ್ರತಿ ಅರ್ಧಗಂಟೆಗೆ ೨-೩ ಚಮಚ ಕೊಡುವದು.

೨. ಚಿಕ್ರಾಣಿ ಬೇರನ್ನು ಲಿಂಬೇರಸ ಅಥವಾ ಅಕ್ಕೀಕಟ್ಟಿನಲ್ಲಿ ತೇಯ್ದು ಪ್ರತಿ ಅರ್ಧತಾಸಿಗೊಮ್ಮೆ ಕೊಡಬೇಕು.

೩. ಹಳೇ ಹುಣಸಿಹಣ್ಣು, ಬಳ್ಳೊಳ್ಳಿ, ಕೇರು ಸಮ ಪ್ರಮಾಣದಿಂದ ತೆಗೆದುಕೊಂಡು ಕುಟ್ಟಿ ಕಡಲೇಕಾಳಿನಷ್ಟು ಗುಳಿಗೆ ಮಾಡಿ ಪ್ರತಿ ೧೫ ಮಿನಿಟಿಗೊಮ್ಮೆ ಉಳ್ಳಾಗಡ್ಡಿಯ ರಸದಲ್ಲಿ ಕೊಡಬೇಕು.

೪. ಶುಂಠಿ ೨ ಗುಂಜಿ, ಮೆಣಸಿನಕಾಯಿ ಪುಡಿ ೧/೪ ಗುಂಜಿ, ಇಂಗು ೧/೪ ಗುಂಜಿ, ಅಫು ೧/೨ ಗುಂಜಿ, ಕರ್ಪೂರ ೧/೪ ಗುಂಜಿ ಈ ಪ್ರಮಾಣದಿಂದ ಕೂಡಿಸಿ ಅಲ್ಲದರಸದಲ್ಲಿ ಗುಳಿಗೆ ಮಾಡಿ ಅಥವಾ ಅಲ್ಲದರಸದಲ್ಲಿ ಪುಡಿಯನ್ನು ಹಾಕಿ ತೆಗೆದುಕೊಳ್ಳಬೇಕು. ಪ್ರತಿ ಒಂದು ಗಂಟೆಗೆ ಕೊಡುತ್ತ ಹೋಗಬೇಕು.

೫. ಸುಂಠೀ ಕಷಾಯದಲ್ಲಿ ಅಥವಾ ತ್ರಿಫಲದಕಷಾಯದಲ್ಲಿ ಸಂಜೀವನಿ ಗುಳಿಗೆಗಳನ್ನು ೧-೩ ಕೊಡುವದು. ಪ್ರತಿ ಅರ್ಧ ತಾಸಿಗೊಮ್ಮೆ ಕೊಡುವದು.

೬. ಶಂಖವಮಾದಿವಟಿಯಿಂದಲೂ ಗುಣಬರುವದುಂಟು. ದಾಹ ವೆನಿಸಿದರೆ, ಬಾಳದಬೇರಿನ ನೀರು ಕಾಸಿ ಆರಿಸಿದ್ದು ಕೊಡಬೇಕು. ಇದ ರಿಂದ ವಾಂತಿಯಾದರೂ ಕಡಿಮೆಯಾಗುತ್ತದೆ. ಮೂತ್ರ ಬಾರದಿದ್ದರೆ ತೆಂಗಿನ ನೀರು ಕುಡಿಸಬೇಕು. ನಾಡಿ ದುರ್ಬಲವಾದರೆ, ಹೇಮಗರ್ಭ ವನ್ನು ¼ ಗುಂಜಿ ಅಲ್ಲದರಸ, ಜೇನುತುಪ್ಪದಲ್ಲಿ ಕೊಡಬೇಕು.

ಕೈಕಾಲುಗಳ ಒರಟೆ ಕಡಿಮೆಯಾಗುವದಕ್ಕೆ ಸುವರ್ಣಯುಕ್ತ ಸೂತಶೇಖರವನ್ನು ½ ದಿಂದ ೧ ಗುಂಜಿ ಅಲ್ಲದರಸ, ಜೇನುತುಪ್ಪದಲ್ಲಿ ಕೊಡಬೇಕು.

ಪ್ರವಾಳ್ಯ ಹರಸೂಂಗಸೇಟಿನ ೧-೨ ಕಣಗಳನ್ನು ಹಾಕಿದ ಕಾಸಿ ಆರಿಸಿದ ನೀರು ಕುಡಿಯಲಿಕ್ಕೆ ಕೊಡುವದು.

ಕಾಸಿ ಆರಿಸಿದ ಸ್ವಚ್ಛ ನೀರಿನಿಂದ ಮಾಡಿದ ಸೋಡಾವಾಟರ ಕೊಡಲು ಅಡ್ಡಿಯಿಲ್ಲ.

ಬರ್ಫದ ಚೂರುಗಳನ್ನು ಬಾಯಿಯಲ್ಲಿ ಹಿಡಿಯಲು ಕೊಡಬೇಕು. ವಾಂತಿ, ಭೇದಿ ಕಡಿಮೆಯಾದನಂತರ ಹಾಲು, ಸಕ್ಕರೆ ಇಲ್ಲದ ತೀಕ್ಷ್ಣ ಕಾಫಿ ಕೊಡಬೇಕು.

ಕೈಕಾಲುಗಳನ್ನು ಬಿಸಿನೀರಿನ ಚೀಲದಿಂದ ಕಾಸಬೇಕು. ಬಿಸಿಹುಡಿ ಹಚ್ಚಿ ತಿಕ್ಕಬೇಕು.

ಕೃಮಿ (ಜಂತುಗಳು)

ಹೊಟ್ಟೆಯಲ್ಲಿ ಜಂತುಗಳಿದ್ದಾಗ ಬೇರೆ ರೋಗಗಳಿಗಾಗಿ ಕೊಟ್ಟ ಔಷಧ ಗಳ ಉಪಯೋಗವಾಗುವದಿಲ್ಲ. ಅದ್ದರಿಂದ ಜಂತುಗಳಿಗಾಗಿ ಮೊದಲು ಔಷಧ ಕೊಡಬೇಕು. ಕೆಳಗೆ ಬರೆದ ಔಷಧಗಳಲ್ಲಿ ಯಾವುದಾದರೊಂದನ್ನು ಒಂದು ಸಪ್ತಾಹ ತೆಗೆದುಕೊಳ್ಳಬೇಕು. ಒಂದೇ ಒಂದು ದಿನ ತೆಗೆದುಕೊಳ್ಳುವದರಿಂದ ಗುಣ ಕಾಣುವದಿಲ್ಲ.

೧. ಹುರಿದ ಇಂಗು ೨ ಗುಂಜಿ, ಚಿರಾಯಿತ ಚೂರ್ಣ ೪ ಗುಂಜಿ ಕೂಡಿಸಿ ರಾತ್ರಿ ಮಲಗುವಾಗ ತೆಗೆದುಕೊಂಡು ಬಿಸಿನೀರು ಕುಡಿಯಬೇಕು.

೨. ಅರಬೇವಿನ ಒಳದೊಗಟೆಯ ಅಷ್ಟಮಾಂಶ ಕಷಾಯವನ್ನು ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

೩. ವಾಯುವಿಡಂಗದ ಕಷಾಯದಲ್ಲಿ ತುಸು ಸೈಂಧಲವಣ ಹಾಕಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

೪. ತ್ರಿಫಳಾ, ದೇವದ್ಯಾರ, ಜೇಕಿನಗಡ್ಡೆ, ಇಲಿಕಿವಿಸೊಪ್ಪು, ನುಗ್ಗೀ ಒಳದೊಗಟೆ ಇವುಗಳ ಕಷಾಯದಲ್ಲಿ ಹಿಪ್ಪಲಿ ಮತ್ತು ವಾಯುವಿಡಂಗದ ಮೂರು ಮೂರು ಗುಂಜಿ ಚೂರ್ಣ ಕೂಡಿಸಿ ಕೊಡುವದರಿಂದ ಜಂತುಗಳು ಕಡಿಮೆಯಾಗುತ್ತವೆ.

೫. ಕಪಿಲಾಚೂರ್ಣವನ್ನು ಕೊಡುವದರಿಂದ ಜಂತುಗಳು ಬೀಳುತ್ತವೆ.

ಮೂಲವ್ಯಾಧಿ

ಇದು ತಾಪದಾಯಕ ಬೇನೆ. ಮಲದ್ವಾರದ ಹೊರಗೂ, ಒಳಗೂ ಮುಳ್ಳುಗಳಿರುತ್ತವೆ. ಶಸ್ತ್ರಕ್ರಿಯೆಯಿಂದ ಗುಣಪಡಿಸಿಕೊಳ್ಳುವದು ಉತ್ತಮ ಮಾರ್ಗವಾಗಿದೆ. ಕೆಳಗೆ ಬರೆದ ಔಷಧಗಳು ಒಳ್ಳೇ ಗುಣಕಾರಿ ಎಂದು ಅನುಭವಕ್ಕೆ ಬಂದವುಗಳು.

೧. ಅಭಯಾರಿಷ್ಟ ೨ ಚಮಚೆ, ದ್ರಾಕ್ಷಾರಿಷ್ಟ ೨ ಚಮಚೆ, ೪ ಚಮಚೆ ನೀರು ಈ ಪ್ರಕಾರ ಕೂಡಿಸಿ ಪ್ರತಿ ಊಟದನಂತರ ಕೂಡಲೇ ತೆಗೆದುಕೊಳ್ಳುವದು.

೨. ಚಂದ್ರಕಲಾ ೧ ಗುಂಜಿ, ಪ್ರವಾಳ ಚಂ. ಪು. ೧॥ ಗುಂಜಿ, ಅಮೃತ ಸತ್ವ ೩ ಗುಂಜಿ ಈ ಪ್ರಕಾರ ಕೂಡಿಸಿ, ಬೆಳಿಗ್ಗೆ ಮತ್ತು ಸಾಯಂಕಾಲ ಬೆಣ್ಣೆ, ಕಲ್ಲುಸಕ್ಕರೆ ಅಥವಾ ನೆಲ್ಲೀಕಾಯಿ ಪಾಕಿನಲ್ಲಿ ಅಥವಾ ಹಾಲು ಸಕ್ಕರೆಯಲ್ಲಿ ತೆಗೆದುಕೊಳ್ಳುವದು.

೩. ಮೂಲಂಗೀರಸ ೨-೩ ತೊಲೆ ಇದರಲ್ಲಿ ತುಸು ತುಪ್ಪ ಕೂಡಿಸಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

೪. ಕಾಲಾಪಾನಾ ೬ ಗುಂಜಿ, ಶುದ್ಧ ಗಂಧಕ ೮ ಗುಂಜಿ, ಜೀರಿಗಿ ೧೨ ಗುಂಜಿ ಈ ಪ್ರಕಾರ ಕೂಡಿಸಿ ಬೆಣ್ಣೆ ಮತ್ತು ಕಲ್ಲುಸಕ್ಕರೆಯಲ್ಲಿ ತೆಗೆದು ಕೊಳ್ಳುವದು.

೫. ಮೊಗಲೀಪೇದಾಣದ ಚೂರ್ಣ ೧-೩ ಮಾಸಿ ತುಪ್ಪ ಸಕ್ಕರೆಯಲ್ಲಿ ದಿನಕ್ಕೆ ಎರಡುಸಲ ತೆಗೆದುಕೊಳ್ಳುವದು.

ಮೂಲವ್ಯಾಧಿಯ ಮೊಳಕೆಗಳಿಗೆ ಮೇಲೆ ಹಚ್ಚುಲಿಕ್ಕೆ — ಅಫು ೧ ಮಾಸಿ, ಮಾಯಫಲಚೂರ್ಣ ೩ ಮಾಸಿ, ಹಳೇತುಪ್ಪ ೨ ತೋಲೆ ಇವುಗಳು ಸಣ್ಣ ಕಲಬತ್ತಿನಲ್ಲಿ ಚನ್ನಾಗಿ ಅರೆದು ಕೂಡಿಸಬೇಕು. ಆ ಮೇಲೆ ಮುಚ್ಚಳವುಳ್ಳ ಒಂದು ಡಬ್ಬಿಯಲ್ಲಿ ಹಾಕಿ ಇಟ್ಟು ಬೆಳಿಗ್ಗೆ ಮತ್ತು ರಾತ್ರಿ ಮಲಗುವಾಗ ಮೊಳಕೆಗಳಿಗೆ ಹಚ್ಚಬೇಕು. ಅಥವಾ ಶತಧೌತ ಘೃತದಲ್ಲಿ ಕಾಚಿನಪುಡಿ, ಸೊನ್ನಿಕ್ಯಾವಿ ಕೂಡಿಸಿ ಅದನ್ನು ಮೂಲವ್ಯಾಧಿಯ ಮೊಳಕೆ ಗಳಿಗೆ ಹಚ್ಚಬೇಕು.

ಮೂಲವ್ಯಾಧಿ ಇದ್ದವರಿಗೆ ಕೋಠಕ್ಕೆ ಸಾಫ ಆಗುತ್ತಿರುವದಿಲ್ಲ. ಅದಕ್ಕಾಗಿ ಅವರು, ಮಲಬದ್ಧತೆಗೆ ಹೇಳಿದ ಮೃದುವಿರೇಚಕಚೂರ್ಣವನ್ನು ಪ್ರತಿದಿನ ಮಲಗುವಾಗ ತೆಗೆದುಕೊಳ್ಳಬೇಕು.

ಎಣ್ಣೆ, ಖಾರ, ಕಠಿನ ಪದಾರ್ಥಗಳು, ಹೂರಣಗಳನ್ನು ತಿನ್ನ ಬಾರದು. ಮಜ್ಜಿಗೆ, ಬೆಣ್ಣೆ, ಹಾಲು, ತುಪ್ಪಗಳನ್ನು ಹೆಚ್ಚಾಗಿ ತೆಗೆದು ಕೊಳ್ಳುತ್ತಿರಬೇಕು. ಬಿಸಿನೀರಿನಲ್ಲಿ ಲಿಂಬೀರಸದ ಸರಬತ್ತು ಗುಣಕಾರಿ ಯಾಗಿದೆ. ಸುವರ್ಣಗಡ್ಡೆಯ ಪಲ್ಲೆ ಮಾಡಿ ತಿನ್ನಬೇಕು.

ಕಾಮಿಲಾ (ಕಾಮಣಿ)

ಕಾಮಣಿಯು ಸರ್ವಸಾಮಾನ್ಯವಾಗಿ ಯಕೃತದೋಷದಿಂದ ಆಗುತ್ತದೆ. ಇದರಿಂದ ಕಣ್ಣುಗಳು ಹಳದಿಯಾಗುತ್ತವೆ. ಶರೀರದ ಸಂಪೂರ್ಣ ತ್ವಚೆ ಉಗುರುಗಳು ಹಳದಿಯಾಗುತ್ತವೆ. ಮೂತ್ರದ ಬಣ್ಣವು ಹಳದಿಯಾಗುವದು. ಮಲವು ಕೂಡ ಹಾಗೆಯೇ ಆಗುವದು.

೧. ಕಷಾಯ— ಬಳೇಗಣಜಲಿ, ಕಾಡಿಗ್ಗರಗು, ಕಹಿಪಡವಲ, ಬುಂತಿ, ಕಟುಕರೋಹಿಣಿ, ಅಮೃತಬಳ್ಳಿ, ದೇವದ್ವಾರ, ಬಾಲಹಿರಡಾ ಇವುಗಳ ಅಷ್ಟ.

ಮಾಂಶ ಕಷಾಯದಲ್ಲಿ ೪-೬ ಗುಂಜಿ ನವಸಾಗರ ಮತ್ತು ಜೇನುತುಪ್ಪ ಕೂಡಿಸಿ ಬೆಳಿಗ್ಗೆ ಮತ್ತು ಸಾಯಂಕಾಲ ತೆಗೆದುಕೊಳ್ಳುವದು.

೨. ಕಾಮಣಿ ಕಡಿಮೆಯಾದ ನಂತರ, ಆರೋಗ್ಯವರ್ಧಿನಿ ೧-೨ ಗುಂಜಿ ಅಲ್ಲದರಸ ಜೇನುತುಪ್ಪದಲ್ಲಿ ತೆಗೆದುಕೊಳ್ಳುವದು.

೩. ಒಂದು ತೊಲಿ ತಾಳೀಸಾದಿ ಚೂರ್ಣದಲ್ಲಿ ೨ ಗುಂಜಿ ಕ್ಯಾಲೋಮೇಲ ಕೂಡಿಸಿ ಚನ್ನಾಗಿ ಕಲಬತ್ತಿನಲ್ಲಿ ಅರೆವು. ಅದರೊಳಗೆ ೧೬ ಪುಡಿ ಮಾಡಿ ಇಡಬೇಕು. ಮಲಗುವಾಗ ಒಂದು ಪುಡಿ ಬಾಯಿಯಲ್ಲಿ ಹಾಕಿಕೊಂಡು ಮೇಲೆ ಬಿಸಿನೀರು ಕುಡಿಯಬೇಕು.

ಕಾಮಣಿಯು ಕಡಿಮೆಯಾಗುವತನಕ ಹೀಗೆ ಮಾಡುವದು.

೪. ಔಡಲ ಎಲೆಯ ರಸ ೨-೩ ತೊಲಿ ಅದರೊಳಗೆ ಮಂಡೂರಭಸ್ಮ ೪-೬ ಗುಂಜಿ ತುಸು ಜೇನುತುಪ್ಪ ಕೂಡಿಸಿ ಬೆಳಿಗ್ಗೆ ತೆಗೆದುಕೊಳ್ಳುವದು. ಹೀಗೆ ಮೂರು ದಿವಸ ಮಾಡುವದು. ಪಥ್ಯ ಸಪ್ಪಗಿನ ತೊಪ್ಪು ಭಕ್ಕರಿ ಬೇರೆ ಏನನ್ನೂ ತಿನ್ನಬಾರದು.

೫. ಇಂಗಳಮೋಣವನ್ನು ೨-೪ ಗುಂಜಿ ಬೆಲ್ಲದಲ್ಲಿ ಬೆಳಿಗ್ಗೆ ಒಂದು ಸಲ ಕೊಡುವದು. ಈ ಪ್ರಕಾರ ೩ ದಿವಸ ಕೊಡುವದು. ಪಥ್ಯ ಸಪ್ಪಗಿನ ತೊಪ್ಪು ಭಕ್ಕರಿ.

ಕಾಮಣಿಯಾದವರು ತುಪ್ಪ, ಬೆಣ್ಣೆಗಳನ್ನು ತಿನ್ನಬಾರದು. ಜಡ ಆಹಾರ ತೆಗೆದುಕೊಳ್ಳಬಾರದು. ಕಾಫಿ, ಮಜ್ಜಿಗೆ, ಲಿಂಬೀರಸದ ಪಾನಕಗಳನ್ನು ತೆಗೆದುಕೊಂಡು ಇರಬೇಕು. ಲಿಂಬೀಹಣ್ಣು ಹೆಚ್ಚಾಗಿ ತೆಗೆದುಕೊಳ್ಳಬೇಕು. ಅಲ್ಲದ ಚಟ್ನಿ, ಕಂಬೇವು ಉಪಯೋಗಿಸಬೇಕು. ಹಾಲೊಳಗೆ ಮಾಡಿದ ರೊಟ್ಟಿಯನ್ನು ತಿನ್ನಬೇಕು. ಅರಳುಹಿಟ್ಟು ತಿನ್ನಬೇಕು.

ಆಮ್ಲಪಿತ್ತ

ಹುಳಿತೇಗು ಬರುವದು, ತಿಂದ ಆಹಾರ ಹುಳಿಯಾಗಿ ವಾಂತಿಯಾಗುವದು, ಎದೆಯಲ್ಲಿ ಉರಿಯುವದು ಇವು ಅಮ್ಲಪಿತ್ತದ ಲಕ್ಷಣಗಳು.

೧. ಕಷಾಯ—ಅಡಸಾಲ, ಅಮೃತಬಳ್ಳಿ, ಕಲ್ಲಸಬ್ಬಸಗಿ, ಬೇವು, ನೆಲಬೇವು, ಕಾಡಿಗ್ಗರಗು, ತ್ರಿಫಲಾ, ಕಟುಪಡವಲ್ಲಿ ಇವುಗಳ ಅಷ್ಟಮಾಂಶ

ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ಬೆಳಗ್ಗೆ ಮತ್ತು ಸಾಯಂಕಾಲ ತೆಗೆದುಕೊಳ್ಳುವದು.

೨. ಸುವರ್ಣಯುಕ್ತ ಸೂತಶೇಖರ ೧ ಗುಂಜಿ ಪ್ರವಾಳ ಪಿ. ಸ್ವ. ೧ ಗುಂಜಿ ಕೂಡಿಸಿ ನೆಲ್ಲೀಕಾಯಿ ಪಾಕಿನಲ್ಲಿ ಅಥವಾ ದಾಡಿಮಾವಲೇಹದ. ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

೩. ಮಾದಾಳದ ಹಣ್ಣಿನ ಪಾಕು ತೆಗೆದುಕೊಳ್ಳುವದು.

೪. ಲೋಕನಾಥ ರಸವನ್ನು ಅರ್ಧದಿಂದ ಒಂದು ಗುಂಜಿ ನೆಲ್ಲೀ ಪಾಕಿನಲ್ಲಿ ತೆಗೆದುಕೊಳ್ಳುವದು.

ಪಥ್ಯ: ಹುಳಿ, ಎಣ್ಣೆ, ಖಾರ, ಬೇಳೆ, ಕಡ್ಲಿಬೇಳೆ, ಕರಿದಪದಾರ್ಥಗಳನ್ನು ತಿನ್ನಬಾರದು. ಹಾಲಿನ ಮೇಲೆ ಪಥ್ಯಾಗಿ ಇರಬೇಕು.

ಉದರ ರೋಗ

ಇದು ಅತ್ಯಂತ ಕಠಿಣ ರೋಗವು. ಇದಕ್ಕೆ ಸ್ಥಾನವು ಯಕೃತ್, ಪ್ಲೀಹ, ಮೂತ್ರಪಿಂಡ, ಇವುಗಳಲ್ಲಿ ಯಾವುದಾದರೊಂದು ಅಥವಾ ಪಂ ಇಂದ್ರಿಯಗಳೂ ವಿಕಾರವಹೊಂದಿ ಉದರ ರೋಗವನ್ನು ಹುಟ್ಟಿಸುತ್ತವೆ.

ಕಷಾಯ:–ಕಾಡು ಮೆಣಸು, ಚಿತ್ರಮೂಲ, ಶುಂಠಿ, ಇವುಗಳ ಕಷಾಯದಲ್ಲಿ, ತಿಗಡೀ ಚೂರ್ಣ ೧ ಮಾಸಿ, ಗೋಮೂತ್ರ ೨-೩ ತೊಲಿ ಕೂಡಿಸಿ ಹುಸು ಜೇನುತುಪ್ಪ ಕೂಡಿಸಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

ಉದರ ರೋಗಕ್ಕೆ ನಾರಾಯಣ ಚೂರ್ಣ, ಬೃಹತ್ ಕಂಚನವಟಿ. ಮಹಾ ಲೋಕನಾಥ, ಕುಮಾರೀ ಆಸವ, ಪುನರ್ನವಾಸವ, ಇಚ್ಛಾಭೇದಿ ಇವು ಒಳ್ಳೇ ಔಷಧಗಳು.

ಪಥ್ಯ: ಉಪ್ಪು ತಿನ್ನಲೇಬಾರದು. ನೀರು ಕುಡಿಯಬಾರದು. ಹಾಲು ಮಜ್ಜಿಗೆಗಳನ್ನು ತೆಗೆದುಕೊಂಡು ಇರಬೇಕು.

ಹೊಟ್ಟೆಯಲ್ಲಿ ನೀರು ಬಹಳ ತುಂಬಿದರೆ ಡಾಕ್ಟರರ ಕಡಿಂದ ನೀರು ತೆಗೆಯಿಸಬೇಕು. ಆದರೆ ನೀರು ಪುನಃ ತುಂಬುವವು.

ಬಿಕ್ಕು

ಬಿಕ್ಕು ಇದು ತೀರ ಸಾಮಾನ್ಯವಾಗಿ ಕಂಡರೂ ಒಮ್ಮೊಮ್ಮೆ ಮನುಷ್ಯನನ್ನು ತೀರ ಹಣ್ಣು ಮಾಡಿಬಿಡುತ್ತದೆ. ಅದನ್ನು ತೀವ್ರ ಉಪಚಾರಮಾಡಿ ಅದನ್ನು ನಿಲ್ಲಿಸುವದು ಒಳ್ಳೆಯದು.

(೧) ಪಿತ್ತದೋಷದಿಂದ ಇದ್ದಲ್ಲಿ, ನೆಲ್ಲೀಪಟ್ಟು ೨ ಗುಂಜಿ. ಹಿಪ್ಪಲಿ ೧ ಗುಂಜಿ, ಜೇನುತುಪ್ಪದಲ್ಲಿ ಕೊಡಬೇಕು. (೨) ಪ್ರ.ಭ. ಪ್ರವಾಳ ೧ ಗುಂಜಿ ಸುವರ್ಣಯುಕ್ತ ಸೂತಶೇಖರ ೨ ಗುಂಜಿ ನೆಲ್ಲೀಪಾಕದಲ್ಲಿ ಕೊಡಬೇಕು. (೩) ದ್ರಾಕ್ಷಾರಿಷ್ಟವನ್ನು ಕೊಡಬೇಕು. (೪) ಅಳ್ಳದ ರಸ, ಕಲ್ಲುಸಕ್ಕರೆ ಕೂಡಿಸಿ ಕೊಡಬೇಕು. (೫) ಶಂಖಭಸ್ಮ ಪ್ರವಾಳ ಕೂಡಿಸಿ ಲಿಂಬೀರಸ ಸಕ್ಕರೆಯಲ್ಲಿ ಕೊಡುವದು.

ವಾತದೋಷದಿಂದ ಬಿಕ್ಕು ಇದ್ದಲ್ಲಿ ಸೊಂಠಿ. ಬಿಡೇಲವಣ, ಇಂಗು, ಸೈಂಧಲವಣ, ಇವುಗಳನ್ನು ಸಮಭಾಗ ತೆಗೆದುಕೊಂಡು ಚೂರ್ಣ ಮಾಡಿ ಅರ್ಧದಿಂದ ೧ ಮಾಸಿ ಬಿಸಿ ನೀರಿನ ಕೂಡ ತೆಗೆದುಕೊಳ್ಳುವದು.

ಅಳವೆಯನ್ನು ನೀರಿನಲ್ಲಿ ನೆನೆ ಇಟ್ಟು ನಂತರ ಸೋಸಿ ಆ ನೀರು ಸಕ್ಕರೆ ಕೂಡಿಸಿ ಕುಡಿಯುವದು. ಕಂಬುವನ್ನು ನೀರಿನಲ್ಲಿ ತೇಯ್ದು ಕೊಡುವದು. ನವಿಲಗರಿಯನ್ನು ಸುಟ್ಟು ಜೇನುತುಪ್ಪದಲ್ಲಿ ಕೊಡುವದು. ನೀರು ಕುಡಿಯಬೇಕು. ಲಿಂಬೀಹಣ್ಣಿನ ರಸದ ಪಾನಕ ಮಾಡಿ ಕುಡಿಯುವದು. ದ್ರಾಕ್ಷಾಸವ ತೆಗೆದುಕೊಳ್ಳುವದು.

ಯಕೃತ ವಿಕಾರ

ಯಕೃತ ಇದು ಅತಿ ಮಹತ್ವದ ಇಂದ್ರಿಯವು. ಇದರ ವಿಕೃತಿಯಿಂದ ಮನುಷ್ಯನು ದುರ್ಬಲನಾಗುವನು. ಅನ್ನವು ಜೀರ್ಣವಾಗುವದಿಲ್ಲ. ರಕ್ತವೃದ್ಧಿ ನಿಂತು, ರಕ್ತ ಕ್ಷೀಣತೆಯಾಗುತ್ತದೆ. ಉತ್ತಮ ವೈದ್ಯರಿಗೆ ತೋರಿಸಿ ಚಿಕಿತ್ಸೆಮಾಡಿಸಬೇಕು.

ಕಷಾಯ—ಅಳಲೇಕಾಯಿ, ರೋಹಿತಕ, ಹಿಪ್ಪಲಿ, ಇವುಗಳ ಕಷಾಯದಲ್ಲಿ ಯವಕ್ಷಾರ ಕೂಡಿಸಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು.

ಪಂಜುಪಟೆ, ಬ್ರೆಡ್ ರವೆಯ ಪಟೆ, ಮಾಂಸಾಹಾರಗಳು ಈ ವಿಷಯಗಳನ್ನು ವೈದ್ಯರ ಸಲಹೆಯಿಂದ ತೆಗೆದುಕೊಳ್ಳಬೇಕು.

ರೋಗಿ ಮಿತಾಹಾರಿಷ್ಟ, ಕುದಿಸಿದ ಅನ್ನಗಳನ್ನು ತೆಗೆದುಕೊಳ್ಳಬೇಕು. ಲಿಂಬೆ ಹಣ್ಣನ್ನು ಹೆಚ್ಚಾಗಿ ಉಪಯೋಗಿಸುವದು. ಗೋಧೂಮಾತ್ರ ಕುಡಿಯುವದು. ಮಜ್ಜಿಗೆ ಹೆಚ್ಚು ತೆಗೆದುಕೊಂಡು ಲಘು ಆಹಾರ ತೆಗೆದುಕೊಳ್ಳಬೇಕು.

ಹುಗುಳು

ಹುಗುಳು, ನೆಗಡಿ ಈ ಎರಡೂ ಬೇನೆಗಳು ರೂಢಿಯಲ್ಲಿ ಒಂದೇ ಎಂದು ಎಣಿಸಲ್ಪಟ್ಟರೂ ಅವು ಬೇರೆ ಬೇರೆ ವ್ಯಾಧಿಗಳಾಗಿರುವವು.

ಹುಗುಳಿಗೆ ಅಪಥ್ಯವೂ ಅಜೀರ್ಣವೂ ಕಾರಣಗಳು. ನೆಗಡಿಗೆ ಚಳಿಯೂ ಅತಿ ಶೀತ ಪದಾರ್ಥದ ಸೇವನವೂ ಕಾರಣಗಳು.

ಹುಗುಳು ಒಮ್ಮೊಮ್ಮೆ ಸ್ವತಂತ್ರವಾಗಿ ಬರಬಹುದು. ಆಗ ಅತಿ ಜ್ವರ, ದಣಿವು ಕಾರಣಗಳು. ಆದರೆ ಒಮ್ಮೊಮ್ಮೆ ನೆಗಡಿ ಬಂದಾಗ ಅಪಥ್ಯವನ್ನು ಮಾಡಿದರೂ ಹುಗುಳು ತಲೆದೋರುವದು.

ನೆಗಡಿಯು ಸ್ವತಂತ್ರವಾದ ಬೇನೆ. ಅದು ಬಂದಾಗ ಮೂಗಿನಲ್ಲಿಯ ಅಂತಸ್ತ್ವಚೆಯು ದಾಹವೂ, ಸ್ರಾವವೂ ಆಗುವದುಂಟು. ಹುಗುಳು ಒಡೆದಾಗ, ಬಾಯಿಯಲ್ಲಿಯೂ, ನಾಲಿಗೆಯ ತುದಿಗೂ, ಮಗ್ಗಲಿಗೂ, ಮತ್ತು ಒಳದುಟಿಗೂ ಸಣ್ಣ ಸಣ್ಣ ಸಾಸಿವೆ ಕಾಳಿನಷ್ಟು ಗಾಯಗಳಾಗುವವು.

ಹುಗುಳು ಒಡೆದಾಗ ಮೈ ನೋಯಿಸುವದುಂಟು.

ನೆಗಡಿಯ ಮುಖ್ಯ ಲಕ್ಷಣವೆಂದರೆ, ಮೂಗು ಸೋರುವದು, ಶೀನು ಬರುವದು ಹಾಗು ಕಣ್ಣಿನಲ್ಲಿ ನೀರು ಬರುವದು.

ಅಲಕ್ಷಮಾಡಿದರೆ ನೆಗಡಿಯು ಬೆಳೆದು ಗಂಟಲಬಾವು, ಪುಪ್ಪುಸಗಳ ವ್ಯಾಧಿಯು ಉದ್ಭವಿಸುವದು, ಜ್ವರ ಕೆಲಕಾಲ ಬರುವದು.

ಹುಗುಳಿನ ಸಂದರ್ಭದಲ್ಲಿಯೂ ಅಲಕ್ಷ ಮಾಡಿದರೆ ಜ್ವರ ಬರುವ ಸಂಭವವಿದೆ.

ಚಿಕಿತ್ಸೆ

ಹುಗುಳಿಗೆ ಮೊದಲು ರೇಚಕ ಔಷಧವನ್ನು ಕೊಡುವದು. ನಿದ್ರೆಗೆ ಮತ್ತು ವಿಶ್ರಾಂತಿ ಹಾಗು ಲಘು ಆಹಾರ ಅವಶ್ಯವಾಗಿರುತ್ತವೆ. ನೆಗಡಿ ಮತ್ತು ಹುಗುಳುಗಳಿಗೆ ಖಾರಗೆಣಸು, ಗವತೀಚಹ, ಪಿಪ್ಪಲಿ, ಸಬ್ಬಸಗಿ, ಕಟುಕರೋಹಿಣಿ, ಅಂಷಿಣಜೀರು ಇವುಗಳ ಕಷಾಯವನ್ನು ದಿನಕ್ಕೆ ಎರಡು ಸಲ ಕೊಡಬೇಕು.

ಬಿಸಿಬಿಸಿ ಹಾಲೊಳಗೆ ಮೆಣಸಿನಪುಡಿ ೨ ಗುಂಜಿ ಅಥವಾ ಅರಿಸಿಣಪುಡಿ ೨ ಗುಂಜಿ ಕೂಡಿಸಿ, ತೆಗೆದುಕೊಳ್ಳುವದು. ನೆಗಡಿಗೆ ತುಳಸೀರಸ ಜೇನು ತುಪ್ಪಗಳಲ್ಲಿ ತ್ರಿಭುವನಕೀರ್ತಿಯ ೧-೨ ಗುಳಿಗೆಗಳನ್ನು ದಿನಕ್ಕೆ ಎರಡು ಸಲ ತೆಗೆದುಕೊಳ್ಳಬೇಕು. ಚಿಕ್ಕಮಕ್ಕಳ ನೆಗಡಿಗೆ ಕಸ್ತೂರಿಗುಳಿಗೆ ಅಥವಾ ಶೃಂಗ್ಯಾದಿಚೂರ್ಣವನ್ನು ಜೇನುತುಪ್ಪದಲ್ಲಿ ಕೊಡಬೇಕು. ಹುಗುಳಿಗೆ ಒಂದು ಚಮಚೆ ಜೇನುತುಪ್ಪದಲ್ಲಿ ಅರಳು ಮಾಡಿದ ಟಂಕಣಖಾರ ೧-೨ ಗುಂಜಿ ಕೂಡಿಸಿ ಬಾಯಿಯಲ್ಲಿ ಹಚ್ಚಿಕೊಳ್ಳಬೇಕು. ಹುಗುಳು, ನೆಗಡಿ ಆದಾಗ ಬಿಸಿನೀರು ಕುಡಿಯಬೇಕು. ವಿಶ್ರಾಂತಿ ಲಘು ಆಹಾರ ಅವಶ್ಯವಾದವುಗಳು.

---

೩ ರಕ್ತಗತ ರೋಗಗಳು

ಪಾಂಡುರೋಗ

ಇದರಲ್ಲಿ ರಕ್ತದ ಅಭಾವವು ಮುಖ್ಯವಾಗಿ ಕಂಡುಬರುತ್ತದೆ. ಕಣ್ಣು, ನಾಲಿಗೆ, ಉಗುರು, ತ್ವಚೆ ಇವುಗಳೆಲ್ಲ ಬೆಳ್ಳಗೆ ಕಾಣುವವು.

(೧) ಬಿಳೀಗಣಜಲಿ, ಅಳಲೇಕಾಯಿ, ಬೇವಿನ ಒಳತೊಗಟೆ, ಪುನರ್ನವಾ, ಕಟುಕರೋಹಿಣಿ, ಕಹಿಪಡವಲ, ಅಮೃತಬಳ್ಳಿ, ಶುಂಠಿ ಇವುಗಳ ಕಷಾಯದಲ್ಲಿ ಗೋಮೂತ್ರ ಕೂಡಿಸಿ ಕೊಡುವದು. ದಿನಕ್ಕೆ ಎರಡು ಸಲ.

(೨) ನವಾಯಸಚೂರ್ಣವನ್ನು ೪-೫ ಗುಂಜಿ ಬೆಳಿಗ್ಗೆ ಮತ್ತು ರಾತ್ರಿ ಜೇನುತುಪ್ಪದ ಜೊತೆ ಕೊಡಬಹುದು.

(೩) ಪುನರ್ನವಾಮಂಡೂರ ಅಥವಾ ಮಂಡೂರವಜ್ರವಟಕ, ಒಂದು ಗುಂಜಿ ತ್ರಿಫಲಾಚೂರ್ಣ ೧ ಮಾಷ ಕೂಡಿಸಿ ಜೇನುತುಪ್ಪದೊಡನೆ ದಿನಕ್ಕೆ ಎರಡು ಸಲ ತೆಗೆದುಕೊಳ್ಳಬಹುದು.

(೪) ಊಟದ ನಂತರ ದ್ರಾಕ್ಷಾಸವ ಲೋಹಾಸವ ಕೂಡಿಸಿ ಸೇರಿಸಿ-ತೆಗೆದುಕೊಳ್ಳಬಹುದು.

(೫) ನೆಲ್ಲಿಚೆಟ್ಟು, ಲೋಹಭಸ್ಮ, ಶುಂಠಿ, ಮೆಣಸು, ಹಿಪ್ಪಲಿ, ಅರಿಶಿನ, ಕಲ್ಲುಸಕ್ಕರೆಗಳ ಸಮಭಾಗ ಚೂರ್ಣವನ್ನು ೩-೪ ಗುಂಜಿ ಜೇನುತುಪ್ಪದಲ್ಲಿ ದಿನಕ್ಕೆ ೨ ಬಾರಿ ತೆಗೆದುಕೊಳ್ಳಬಹುದು.

(೬) ತಾಪ್ಯಾದಿಲೋಹವನ್ನು ದಿನಕ್ಕೆ ೧-೨ ಗುಂಜಿ ಜೇನುತುಪ್ಪದಲ್ಲಿ ೨ ಸಲ.

ಮೃದ್ಭಕ್ಷಣಪಾಂಡು

ಕೆಲವು ಚಿಕ್ಕಮಕ್ಕಳು ಮಣ್ಣು ತಿನ್ನುವರು. ಅಂಥವರಿಗೆ ಪಾಂಡು ರೋಗವಾಗುತ್ತದೆ. ಮೊದಲು ಅವರಿಗೆ ವಿರೇಚನವನ್ನು ಕೊಡಬೇಕು.

ನಾಗಕೇಸರ, ಜೇಷ್ಠಮಧು, ಹಿಪ್ಪಲಿಗಳ ಚೂರ್ಣವನ್ನು ವಯಸ್ಸಿಗನುಸರಿಸಿ ೨-೪ ಗುಂಜಿ ಜೇನುತುಪ್ಪದಲ್ಲಿ ಕೊಡಬೇಕು. ಮಣ್ಣು ತಿನ್ನುವುದನ್ನು ಬಿಡಿಸಬೇಕು.

ಪಥ್ಯ: ಪಚನವಾಗುವಂಥ ಸೌಮ್ಯ ಆಹಾರವನ್ನು ತೆಗೆದುಕೊಳ್ಳಬೇಕು. ಮಜ್ಜಿಗೆ, ಹಾಲು ಯೋಗ್ಯವಾದವುಗಳು.

ಮಲಬದ್ಧತೆಗೆ ತ್ರಿಫಲಾ ಮೃದುಸಾರಕಗಳಂಥ ಚೂರ್ಣಗಳನ್ನು ಮಲಗುವಾಗ ತೆಗೆದುಕೊಳ್ಳಬೇಕು.

ರಕ್ತಪಿತ್ತ

ಮೂಗು, ಬಾಯಿ, ಮಲದ್ವಾರಗಳಿಂದ ರಕ್ತಸ್ರಾವವಾಗುತ್ತಿದ್ದರೆ, ಅದಕ್ಕೆ ಶಾಸ್ತ್ರದಲ್ಲಿ ರಕ್ತಪಿತ್ತವೆಂದೆನ್ನುತ್ತಾರೆ. ರೂಢಿಯಲ್ಲಿ ಈ ಶಬ್ದವನ್ನು ಬೇರೆ ರೋಗಕ್ಕೆ ಉಪಯೋಗಿಸುತ್ತಾರೆ.

ಮೂಗಿನೊಳಗಿಂದ ರಕ್ತ ಬರುತ್ತಿದ್ದರೆ, ಒಂದು ಕಪ್ಪು ತಣ್ಣೀರಿನಲ್ಲಿ ೪ ಗುಂಜಿ ಪಟಿಕದ ಪುಡಿ ಹಾಕಿ ಆ ನೀರನ್ನು ಸಣ್ಣ ಬಾಯಿನ ಪೀಕಳಿಯಲ್ಲಿ ತಕ್ಕೊಂಡು ಮೆಲ್ಲಗೆ ಮೂಗು ತೊಳೆಯಬೇಕು. ತಲೆ ಸ್ವಲ್ಪ ಕೆಳಗೆ ಆಗುವಂತೆ ಮಾಡಿಕೊಂಡು ಮಲಗಬೇಕು. ಎರಡು ಹುಬ್ಬುಗಳ ನಡುವೆ ತಣ್ಣೀರಿನ ಒದ್ದೆಯ ಬಟ್ಟೆಯನ್ನಿಡಬೇಕು.

ಬಾಯಿಯೊಳಗಿಂದ ರಕ್ತ ಬರುತ್ತಿದ್ದರೆ ಪಟಿಕದ ನೀರು ಅಥವಾ ಅಳಲೇಕಾಯಿಯ ಕಷಾಯದಿಂದ ಮೇಲಿಂದಮೇಲೆ ಬಾಯಿ ಮುಕ್ಕಳಿಸುತ್ತಿರಬೇಕು.

ಮಲದ್ವಾರದಿಂದ ರಕ್ತ ಹೋಗುತ್ತಿದ್ದರೆ, ಚಂದ್ರಕಲಾ ೧-೨ ಗುಂಜಿ, ಪ್ರವಾಳ ಚ. ಪು. ೧-೨ ಗುಂಜಿ ಕೂಡಿಸಿ ದಾಳಿಂಬ ಪಾಕದಲ್ಲಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳಬೇಕು. ಅಡುಸಾಲದ ಎಲೆ, ದ್ರಾಕ್ಷಿ, ಅಳಲೇಕಾಯಿ ಇವುಗಳ ಕಷಾಯದಲ್ಲಿ ಸಕ್ಕರೆ ಕೂಡಿಸಿ ತೆಗೆದುಕೊಳ್ಳುವದರಿಂದ ಎಲ್ಲ ತರದ ರಕ್ತಪಿತ್ತಗಳು ಗುಣವಾಗುವವು. ಅಡುಸಾಲದ ಎಲೆಯ ರಸ, ಕಲ್ಲುಸಕ್ಕರೆ ಕೂಡಿಸಿ ತೆಗೆದುಕೊಳ್ಳುವದರಿಂದಲೂ ಗುಣವಾಗುತ್ತದೆ.

ರಕ್ತಪಿತ್ತ ವಿಕಾರದವರು ಜಡ ಆಹಾರ, ಹುಳಿ, ಎಣ್ಣೆ, ಖಾರ ಬಿಡಬೇಕು. ಶ್ರಮದ ಕೆಲಸ ಮಾಡಬಾರದು. ಮುಕ್ತಾಭಸ್ಮ, ಪ್ರವಾಳ, ಚಂದ್ರಕಲಾ, ಬೋಲಬದ್ಧ ರಸ, ಉಶೀರಾಸವ ದ್ರಾಕ್ಷಾರಿಷ್ಟ ಇವು ರಕ್ತಪಿತ್ತಕ್ಕೆ ಗುಣಕಾರಿಯಾದ ಔಷಧಗಳು.

ಪ್ಲೀಹವೃದ್ಧಿ

ಪ್ಲೀಹವಿದು ಚಿಕ್ಕ ಇಂದ್ರಿಯವು ಹೊಟ್ಟೆಯಲ್ಲಿ ಎಡಬದಿಗೆ ಇರುತ್ತದೆ. ಬಹಳ ದಿವಸ ಚಳಿಜ್ವರ (ಮಲೇರಿಯಾ) ಬಂದರೆ ಇದು ವೃದ್ಧಿ ಹೊಂದುತ್ತದೆ. ಹೀಗೆ ಆಗುವದರಿಂದ ರಕ್ತದೊಳಗಿನ ಕೆಂಪು ಕಣಗಳು ಕಡಿಮೆಯಾಗಿ ಶ್ವೇತ ಕಣಗಳು ಹೆಚ್ಚುವವು. ಕೈಕಾಲುಗಳು ಸಣ್ಣವಾದಂತಾಗಿ ಹೊಟ್ಟೆಯು ದೊಡ್ಡದಾಗಿ ಕಾಣುತ್ತದೆ.

(೧) ಅಜವಾನ, ಚಿತ್ರಮೂಲ, ಜವಖಾರ, ಪಿಪ್ಪಲೀಮೂಲ, ದಂತಿಮೂಲ, ಹಿಪ್ಪಲಿ ಇವುಗಳನ್ನು ಸಮಭಾಗ ತೆಗೆದು ಸೂಕ್ಷ್ಮ ಚೂರ್ಣಮಾಡಿ

೧-೨ ಗುಂಜಿ ದಿನಕ್ಕೆ ಎರಡು ಸಲ ಹಾಲು ಸಕ್ಕರೆಯೊಡನೆ, ಅಥವಾ ಜೇನು ತುಪ್ಪದೊಡನೆ ತೆಗೆದುಕೊಳ್ಳುವದು.

(೨) ಮ್ಯಾಕಸಿಂಧೂರವನ್ನು ಅರ್ಧದಿಂದ ೧ ಗುಂಜಿ ಜೇನುತುಪ್ಪದ ಗೂಡ ದಿನಕ್ಕೆ ೨ ಸಲ ಕೊಡುವದು. ದ್ರಾಕ್ಷಿ, ಖರ್ಜೂರಾದಿ ಆಹಾರಗಳಿಂದ ಪ್ಲೀಹ ವಿಕಾರವು ಕಡಿಮೆಯಾಗುವದು.

ಪಥ್ಯ: ಜಡ ಆಹಾರ ಬಿಟ್ಟುಬಿಡುವದು. ಚಿತ್ರಕಾದಿ ಚೂರ್ಣಕೊಡಿಸಿ ಮಜ್ಜಿಗೆ ತೆಗೆದುಕೊಳ್ಳಬೇಕು. ಶೌಚಕ್ಕೆ ಆಗದಿದ್ದರೆ ಸ್ವಲ್ಪ ಮೃದುವಿರೇಚಕಚೂರ್ಣವನ್ನು ತೆಗೆದುಕೊಳ್ಳುವದು.

ಬಾವು

ಯಾವುದೇ ಹೊರಗಿನ ಕಾರಣದಿಂದ ಬಾವು ಬಂದಿದ್ದರೆ ನಾದಂಗದ ಕೋರೆ, ಬೇ, ಬೇರೆಗಳಾದಿಬೇರು ತೆಯ್ದು ಹಚ್ಚಿ ಕಾಯಿಸುವದರಿಂದ ಬಾವು ಇಳಿಯುತ್ತದೆ.

ಅಂತರಿಂದ್ರಿಯ ವಿಕಾರಗಳಿಂದ ಅಂದರೆ ಹೃದಯ, ಮೂತ್ರಪಿಂಡ, ಯಕೃತಗಳಲ್ಲಿ ವಿಕೃತಿಯುಂಟಾಗಿ ಬಾವು ಬಂದರೆ ಆ ಆ ಕಾರಣಗಳಿಗನು ಸರಿಸಿ ಚಿಕಿತ್ಸೆ ಮಾಡಬೇಕಾಗುವದು. ಹೀಗಿದ್ದಾಗ ಮೇಲೆ ಹಚ್ಚುವದರಿಂದ ವಿಶೇಷ ಉಪಯೋಗವಾಗುವದಿಲ್ಲ.

(೧) ಹೃದಯ (ರಕ್ತಾಶಯ)ದ ದೋಷದಿಂದ ಬಾವು ಇದ್ದರೆ, ಲಕ್ಷ್ಮೀವಿಲಾಸ, ಮಕರಧ್ವಜ, ರಸಸಿಂಧೂರಗಳಲ್ಲಿ ಯಾವುದಾದರೊಂದನ್ನು ಅರ್ಧದಿಂದ ೧ ಗುಂಜಿ ಜೇನುತುಪ್ಪದಲ್ಲಿ ದಿನಕ್ಕೆ ೨ ಸಲ ಕೊಡುವದು. ಊಟದ ನಂತರ ಪಾರ್ಥಾರಿಷ್ಟವನ್ನು ದಿನಕ್ಕೆ ೨-೪ ಚಮಚೆ ಅಷ್ಟೇ ನೀರಿನೊಡನೆ ಕೊಡುವದು.

(೨) ಮೂತ್ರಪಿಂಡಗಳ ದೋಷದಿಂದ ಬಾವು ಇದ್ದರೆ ಚಂದ್ರಪ್ರಭಾದ ೧-೨ ಗುಳಿಗೆ, ಅಥವಾ ಗೋಕ್ಷುರಾದಿ ಗುಗ್ಗುಳದ ೧-೨ ಗುಳಿಗೆಗಳನ್ನು ಬೇಳೆಗಣಜಲಿ ಕಷಾಯದಲ್ಲಿ ಕೊಡುವದು. ಊಟದ ನಂತರ ಪುನರ್ನವಾಸವನ್ನು ೨-೪ ಚಮಚೆ ನೀರಿನಲ್ಲಿ ಕೊಡುವದು.

(೩) ಯಕೃತ ದೋಷದಿಂದ ಬಾವು ಇದ್ದಲ್ಲಿ ಲೋಕನಾಥ-ಕುಮಾರಿ-

ಭೃಂಗರಾಜಾಸವಗಳನ್ನು ಕೊಡುವದು. ಕಷಾಯ:— ಬಿಳಿಗಣಜಲಿ ಬೇರು, ದೇವದ್ವಾರ, ಮರದರಿಸಿಣ, ಸುಂಠಿ, ಅಳಲೇಕಾಯಿ, ಅಮೃತಬಳ್ಳಿ, ಚಿತ್ರಮೂಲ, ಗಂಟುಭಾರಂಗಿ ಇವುಗಳ ಕಷಾಯವನ್ನು ದಿನಕ್ಕೆ ಎರಡು ಸಲ ಕೊಡುವದು. ಗೋಮೂತ್ರ ಕುಡಿಯಬೇಕು.

ಪಥ್ಯ: ಉಪ್ಪು ತೀರ ಬಿಟ್ಟುಬಿಡಬೇಕು. ಲಘು ಆಹಾರವನ್ನು ಪಚನವಾಗುವಷ್ಟು ತೆಗೆದುಕೊಳ್ಳಬೇಕು. ಬಿಸಿನೀರು ಕುಡಿಯಬೇಕು. ವಿಶ್ರಾಂತಿಯನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕು.

ರಕ್ತದ ಒತ್ತಡ (ಬ್ಲಡ್ ಪ್ರೆಶರ)

ರಕ್ತನಾಳಗಳಲ್ಲಿ ರಕ್ತವು ಪೂರ್ಣ ತುಂಬಿಕೊಂಡು ಹರಿಯುತ್ತಿರುತ್ತದೆ. ಈ ವಿಕಾರದವರು ಭೋಳಬಂದು ಬೀಳುವಷ್ಟು ಸ್ಥಿತಿಯಾಗುತ್ತದೆ. ಸುವರ್ಣಮಾಕ್ಷಿಕ, ಸೂತಶೇಖರ, ಆರೋಗ್ಯವರ್ಧಿನಿ, ಮುಕ್ತಾಯುಕ್ತ ಕಾಮದುಧಾ ಇವುಗಳಲ್ಲಿ ಯಾವುದಾದರೊಂದನ್ನು ೭ ದಿವಸ ಅಥವಾ ೧೪ ದಿವಸ ಕೊಡುವದು. ಅನಂತರ ಮೃಗಶೃಂಗಭಸ್ಮ, ಸುವರ್ಣಮಾಕ್ಷಿಕ, ಪ್ರವಾಳ ಚ. ಪು. ಅಮೃತಸತ್ವ, ಶೀತೋಪಲಾದಿ ಚೂರ್ಣಗಳನ್ನು ನೆಲ್ಲೀಕಾಯಿ ಪಾಕಿನಲ್ಲಿ ಕೊಡುವದು. ಭಸ್ಮಗಳ ಪ್ರಮಾಣ ಅರ್ಧದಿಂದ ೧ ಗುಂಜಿ ಬೆಳಿಗ್ಗೆ ಮತ್ತು ಸಾಯಂಕಾಲ ಕೊಡುವದು. ರಾತ್ರಿ ಮಲಗುವಾಗ ಸುವರ್ಣಯುಕ್ತ ಸೂತಶೇಖರನನ್ನು ಅರ್ಧದಿಂದ ೧ ಗುಂಜಿ ಬ್ರಾಹ್ಮೀರಸದಲ್ಲಿ ಜೇನುತುಪ್ಪ ಕೂಡಿಸಿ ಕೊಡುವದು. ಚಂದ್ರಕಲಾ, ಸೂತಶೇಖರ, ಪ್ರವಾಳ ಕೂಡಿಸಿ ದಿನಕ್ಕೆ ೨-೩ ಸಲ ನೆಲ್ಲೀ ಪಾಕಿನಲ್ಲಿ ಕೊಡುವದು. ಮುಕ್ತಾಭಸ್ಮ, ಅಭ್ರಕಗಳ ಯೋಗವಾದರೂ ಗುಣಕಾರಿಯಾಗಿದೆ.

ಪಥ್ಯ: ಲಘು ಆಹಾರ ತೆಗೆದುಕೊಳ್ಳುವದು. ಮಲಬದ್ಧತೆಯಾದಲ್ಲಿ ಮೃದುಸಾರಕ ತೆಗೆದುಕೊಳ್ಳಬೇಕು. ರಾತ್ರಿ ಜಾಗರಣ ಮಾಡಬಾರದು.

೪ ಶ್ವಾಸೋಚ್ಛ್ವಾಸಸಂಸ್ಥೆ ರೋಗಗಳು

ಕೆಮ್ಮು

ಇದು ಸರ್ವಸಾಮಾನ್ಯವಾಗಿ ಕಂಡುಬರುವ ರೋಗ. ಇದನ್ನು ಆದಷ್ಟು ಶೀಘ್ರ ಗುಣಪಡಿಸಿಕೊಳ್ಳುವದು ಒಳ್ಳೆಯದು.

(೧) ಕಷಾಯ — ಅಡುಸೋಗೆ, ಹಿಪ್ಪಲಿ, ಅಮೃತಬಳ್ಳಿ, ಇವುಗಳ ಕಷಾಯದಲ್ಲಿ [illegible] ಗುಂಜಿ ಒಪ್ಪರೇಣು ಮತ್ತು ಜೇನುತುಪ್ಪ ಕೂಡಿಸಿ ದಿನಕ್ಕೆ [illegible] ಸಲ ತೆಗೆದುಕೊಳ್ಳುವದು.

(೨) ಕಾಕಡಶಿಂಗಿ, ತ್ರಿಫಳ, ಜೇಷ್ಠಮಧು, ಶುಂಠಿ, ಸಮಸಮಗದ, ಒಪ್ಪಲ, ಸೈಂಧವ, ಸಮಭಾಗ ತೆಗೆದು ಸಣ್ಣ ಚೂರ್ಣ ಮಾಡಿ, ಅದ ಸಾಲದ ರಸದಲ್ಲಿ ೩ ದಿವಸ ಅರೆದು ಸಣ್ಣ ಕಡಲೇಕಾಳನಷ್ಟು ಗುಳಿಗೆಗಳನ್ನು ಮಾಡಿ ಇಡಬೇಕು. ನೆರಳಿನಲ್ಲಿ ಒಣಗಿಸಬೇಕು. ದಿನಕ್ಕೆ ೨-೩ ಸಲ ಜೇನುತುಪ್ಪದೊಡನೆ. ಸಿತೋಪಲಾದಿ, ತಾಲೀಸಾದಿಚೂರ್ಣ, ಲವಂಗಾದಿವಟಿ, ಮರೀಚ್ಯಾದಿವಟಿ, ರಸಸಿಂದೂರ, ಮಕರಧ್ವಜ, ವಾಸಾವಲೇಹ, ದ್ರಾಕ್ಷಾರಿಷ್ಟ ಇವು ಕೆಮ್ಮಿಗೆ ಗುಣಕಾರಕವಾದ ಔಷಧಗಳು

ಪಥ್ಯ : ಕೆಮ್ಮಿನವರು ಲಘು ಮತ್ತು ಸೌಮ್ಯ ಆಹಾರವನ್ನು ತೆಗೆದುಕೊಳ್ಳಬೇಕು. ಬಿಸಿನೀರು ಕುಡಿಯಬೇಕು. ಎದೆ ಬೆನ್ನುಗಳಿಗೆ ನೀಲಗಿರಿ ತರ್ಹಾ ತೈಲಗಳನ್ನು ಹಚ್ಚಿ ಕಾಸಿಕೊಳ್ಳಬೇಕು. ಶೀತವಾಗದಂತೆ ನೋಡಿಕೊಳ್ಳಬೇಕು. ಎದೆ ಬೆನ್ನುಗಳನ್ನು ಬೆಚ್ಚಗಿಟ್ಟುಕೊಳ್ಳಬೇಕು.

ದಮ್ಮು

ಇದು ಒಮ್ಮೆ ಸೇರಿಕೊಂಡಿತೆಂದರೆ, ಶೀಘ್ರ ಹೋಗುವದಿಲ್ಲ. ಆದ್ದರಿಂದ ದಮ್ಮು ಪ್ರಾರಂಭವಾದಕೂಡಲೇ ಯೋಗ್ಯ ಚಿಕಿತ್ಸೆಯನ್ನು ಪ್ರಾರಂಭಿಸುವದು. ಕಷಾಯ— ಗಂಟುಭಾರಂಗಿ, ಬಜೆ, ಎಕ್ಕೇಬೇರು, ಅಳಲೇಕಾಯಿ, ಅರಿಷಿಣ, ಅಡುಸಾಲ, ಅಮೃತಬಳ್ಳಿ, ಹಿಪ್ಪಲಿ ಇವುಗಳ ಅಷ್ಟಮಾಂಶ ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ದಿನಕ್ಕೆ ಎರಡು ಸಲ ತೆಗೆದು

ಕೊಳ್ಳುವದು. ದಮ್ಮಿನ ವೇಗ ಬಂದಾಗ— ಕರ್ಪೂರ ೧ ಗುಂಜಿ ಇಂಗು ೧ ಗುಂಜಿ ಕೂಡಿಸಿ ಜೇನುತುಪ್ಪದಲ್ಲಿ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು. ಅದುಸಾಲದೆ ಒಣಗಿದ ಎಲೆಗಳ ಪುಡಿಯನ್ನು ಸಿಗರೇಟಿನಂತೆ ಸೇದುವದು.

ಕಹಿಸೋರೆ (ಕಹಿ ಹೀರೇಕಾಯಿ) ಯ ಮೇಲ್ಭಾಗಕ್ಕೆ ಒಂದು ರೂಪಾಯಿ ಅಗಲ ಛೇದಮಾಡಿ ಚಕಳಿ ತೆಗೆಯಬೇಕು. ಆ ಛೇದಿಸಿದ ತೂತಿನಿಂದ ಅದರೊಳಗಿನ ನೀರು ಮತ್ತು ಬೀಜಗಳನ್ನು ಯುಕ್ತಿಯಿಂದ ಹೊರಗೆ ತೆಗೆಯಬೇಕು. ಅನಂತರ ಅದರೊಳಗೆ ಹಿಡಿಸುವಷ್ಟು ಉತ್ತಮ ಮದ್ಯವನ್ನು ಹಾಕಬೇಕು. ಮತ್ತು ಸೈಂದಲವಣ, ಅಜವಾನ, ಹಿಪ್ಪಲಿ, ಬಡೇಸೋಪುಗಳ ಚೂರ್ಣವನ್ನು ಹಾಕಿ ಅದರ ಚಕಳಿಯಿಂದ ಆ ತೂತು ಮುಚ್ಚಿ ಮೇಲೆ ೫ ಅಥವಾ ಏಳು ಪದರು ಮಣ್ಣು ಬಟ್ಟೆಯನ್ನು ಸುತ್ತಿ ಭೂಮಿಯಲ್ಲಿ ಏಳು ದಿವಸ ಇಡಬೇಕು. ಆಮೇಲೆ ಅದನ್ನು ಹೊರಗೆ ತೆಗೆದು ಮಣ್ಣುರಿವೆಯನ್ನು ಉಚ್ಚಿ ತೆಗೆದು ಒದ್ದೆ ಅರಿವೆಯಿಂದ ಸ್ವಚ್ಛ ಒರೆಸಬೇಕು. ಆಮೇಲೆ ಆ ಚಕಳಿಯನ್ನು ತೆಗೆದು ಅದರೊಳಗಿನ ಮದ್ಯವನ್ನು ಸೋಸಿ ಬಾಟ್ಲಿಯಲ್ಲಿಡಬೇಕು. ಇದನ್ನು ೧-೨ ಚಮಚೆ ದಿನಕ್ಕೆ ಎರಡು ಸಲ ಕೊಡುತ್ತ ಹೋಗಬೇಕು.

ಗುಲಾಬನೀರು ೩-೪ ಚಮಚೆ ಅದರಲ್ಲಿ ೨ ಗುಂಜಿ ಘಟಕಪ ಪುಡಿ ಹಾಕಿ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು. ದಮ್ಮು ಗುಣವಾಗುತ್ತದೆ. ಮೂರು ಅಥವಾ ಏಳು ದಿವಸ ನಿರಾಹಾರ ಮಾಡುವವರಿಂದ ದಮ್ಮು ಗುಣವಾದ ಉದಾಹರಣೆಗಳುಂಟು.

ಪಥ್ಯ: ಬಿಸಿನೀರು, ಸೌಮ್ಯ ಆಹಾರ, ವಿಶ್ರಾಂತಿ, ಧೂಳು ಇದ್ದಲ್ಲಿ ಹೋಗಿ ಕೂಡ್ರಬಾರದು.

ಶ್ವಾಸಕುಠಾರ, ಅಭ್ರಕ, ಮೌಕ್ತಿಕ, ರಸಸಿಂದೂರ, ಮಕರಧ್ವಜ. ಸಿತೋಪಲಾದಿ ಚೂರ್ಣ, ತಾಲೀಸಾದಿ ಚೂರ್ಣ, ದ್ರಾಕ್ಷಾರಿಷ್ಟ ಇವು ದಮ್ಮಿಗೆ ಗುಣಕಾರಿಯಾದ ಔಷಧಗಳು.

ಬ್ರಾಂಕಾಯಟಿಸ್

೧. ಕಾಕಡಸಿಂಗಿ, ಪಿಪ್ಪಲಿ, ಅತಿವಿಷಗಳ ಸಮಭಾಗ ಚೂರ್ಣವನ್ನು ೨-೪ ಗುಂಜಿ ಅಲ್ಲದರಸ, ಜೇನುತುಪ್ಪದಲ್ಲಿ ದಿನಕ್ಕೆ ಎರಡು ಸಲ ಕೊಡುವದು.

೨. ಅಮೃತಬಳ್ಳಿ, ಅಳಲೇಕಾಯಿ, ನೆಲಗುಳ್ಳ, ಪಿಪ್ಪಲಿ, ನಾಗರ, ಇವುಗಳ ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ದಿನಕ್ಕೆ ೨-೩ ಸಲ ಕೊಡುವದು.

೩. ರಸಸಿಂದೂರ ೧-೨ ಗುಂಜಿ ಜೇನುತುಪ್ಪದಲ್ಲಿ ಕೊಡುವದು.

೪. ಎದೆಯನ್ನು ಕಾಸುವದು.

ಕೋಡಿಗೆಕೆಮ್ಮು

ತಾರೇಕಾಯಿ, [illegible] ಅಜವಾನ, ಜೇಷ್ಠಮಧು, ಪಿಪ್ಪಲಿ, ಕಾಕಡಸಿಂಗಿ, ಅಡುಸಾಲ, ಗುಳ್ಳ ಇವುಗಳ ಅಷ್ಟಮಾಂಶ ಕಷಾಯದಲ್ಲಿ ಸಕ್ಕರೆ ಕೂಡಿಸಿ ಕೊಡುವದು. ದಿನಕ್ಕೆ ೨-೩ ಸಲ ಗುಣವಾಗುವತನಕ ಕೊಡಬೇಕು.

ಕ್ಷಯರೋಗ

ಇದರಲ್ಲಿ ಅನೇಕ ಪ್ರಕಾರಗಳಿವೆ. ಇಲ್ಲಿ ಈಗ ಕಫಕ್ಷಯದ ಸಲುವಾಗಿ ಬರೆದಿದ್ದೇನೆ. ಸಾಯಂಕಾಲ ಕಣ್ಣು ಉರಿಯುವದು, ಸಣ್ಣಜ್ವರ, ಕೆಮ್ಮು, ಅಶಕ್ತತೆ ಹೀಗೆ ಲಕ್ಷಣಗಳಾಗುವವು. ಆಗ ಕೂಡಲೇ ಸುವೈದ್ಯರಿಗೆ ತೋರಿಸಿ ಚಿಕಿತ್ಸೆಯನ್ನು ಪ್ರಾರಂಭಿಸಬೇಕು.

(೧) ಸಿತೋಪಲಾದಿ ಚೂರ್ಣವನ್ನು ೪-೮ ಗುಂಜಿ ಬೆಳಿಗ್ಗೆ ಮತ್ತು ಸಾಯಂಕಾಲ ಜೇನತುಪ್ಪದಲ್ಲಿ ಕೊಡುವದು.

(೨) ಅಡುಸಾಲದರಸ ೨-೪ ಚಮಚೆ, ಕೂಷ್ಮಾಂಡಸ್ವರಸ ೨-೪ ಚಮಚೆಗಳಲ್ಲಿ ವಂಶಲೋಚನ ೨-೪ ಗುಂಜಿ ತಾಲೀಸಪತ್ರಿ ಚೂರ್ಣ ೨-೪ ಗುಂಜಿ ಕೂಡಿಸಿ ಕುಸು ಜೇನುತುಪ್ಪ ಹಾಕಿ ದಿನಕ್ಕೆ ಎರಡು ಸಲ ಕೊಡುವದು.

(೩) ಚೌಸಷ್ಟಿ ಪಿಪ್ಪಲಿ ೧-೨ ಗುಂಜಿ ಜೇನತುಪ್ಪದಲ್ಲಿ ದಿನಕ್ಕೆ ೨-೩ ಸಲ ಕೊಡುವದು. ಇದರಿಂದ ಕೆಮ್ಮು ಕಡಿಮೆಯಾಗುತ್ತದೆ.

(೪) ಸುವರ್ಣಮಾಲಿನೀವಸಂತ ೧-೨ ಗುಂಜಿ, ಪ್ರವಾಳ ಚಂದ್ರಪುಟಿ ಪಾವುತೊಲಿ, ಅಮೃತಸತ್ವ ಅರ್ಧತೊಲಿ, ಇವರಲ್ಲಿ ೧೬ ಪುಡಿಗಳನ್ನು ಮಾಡಿ ಬೆಳಿಗ್ಗೆ ೧ ಸಾಯಂಕಾಲ ೧ ಜೇನತುಪ್ಪದಲ್ಲಿ ಕೊಡುವದು. ಇದರಿಂದ ಜ್ವರ ಕಡಿಮೆಯಾಗುವವು.

(೫) ಗೋರಬಿಚಿಂಚದೊಳಗಿನ ತಿಳಲು ೪-೮ ಗುಂಜಿ ಜೇನತುಪ್ಪದೊಡನೆ ದಿನಕ್ಕೆ ಎರಡು ಸಲ ಕೊಡುವವದರಿಂದ ಜ್ವರ ಕಡಿಮೆಯಾಗುತ್ತದೆ.

(೬) ಬಾಯಿಯೊಳಗಿಂದ ಅಂದರೆ ಕಫದಲ್ಲಿ ರಕ್ತ ಬೀಳುತ್ತಿದ್ದರೆ ಕೂಷ್ಮಾಂಡ ಸ್ವರಸದಲ್ಲಿ ದಿನಕ್ಕೆ ೨ ಸಲ ಮೌಕ್ತಿಕ ಕೊಡಬೇಕು.

(೭) ಕಾಕಮಾಚಿ ರಸದಲ್ಲಿ ಜಸದ ಭಸ್ಮವನ್ನು ಕೊಡುವದರಿಂದ ಬೆವರು ಬರುವದು ಕಡಿಮೆಯಾಗುತ್ತದೆ.

(೮) ಸುದ್ಧ ತುತ್ತೆ ೨ ಗುಂಜಿ, ಅಪ್ಸು ೭ ಗುಂಜಿ ಜೇನುತುಪ್ಪ ಹಾಕಿ ಅದರೊಳಗೆ ಎಂಟು ಗುಳಿಗೆಗಳನ್ನು ಮಾಡಬೇಕು. ಬೆಳಿಗ್ಗೆ ಒಂದು ಸಾಯಂಕಾಲ ಒಂದು ಗುಳಿಗೆಯನ್ನು ಕೊಟ್ಟು ಬಿಸಿನೀರು ಕೊಡುವದು. ಇದರಿಂದ ಅತಿಸಾರ ಕಡಿಮೆಯಾಗುತ್ತದೆ. ಅಥವಾ ಪಂಚಾಮೃತ ಪರ್ಪಟಿಯನ್ನು ಕೊಡಬೇಕು.

ಸುವರ್ಣಭಸ್ಮ, ಮೌಕ್ತಿಕ, ಅಭ್ರಕ, ಪ್ರವಾಳ, ರಾಜಮೃಗಾಂಕ, ಲಕ್ಷ್ಮೀವಿಲಾಸಗಳಂಥ ಔಷಧಿಗಳು ಉತ್ತಮವಾಗಿವೆ.

೫ ವಾತಸಂಸ್ಥೆ-ರೋಗಗಳು

ವಾತವಿಕಾರಗಳು

ವಾತರೋಗಗಳು ಅತ್ಯಂತ ಪ್ರಬಲವಾದವುಗಳು. ವಾತರೋಗಗಳಲ್ಲಿ ಎಂಭತ್ತು ಪ್ರಕಾರಗಳಿವೆ ಎಂದು ಶಾಸ್ತ್ರಕಾರರು ಹೇಳಿದ್ದಾರೆ. ವಾತ ಚಿಕಿತ್ಸೆ ಅಷ್ಟು ಸುಲಭವಾದುದು ಅಲ್ಲ. ಸುವೈದ್ಯರನ್ನು ಬರಮಾಡಿಕೊಂಡು ಚಿಕಿತ್ಸೆ ಪ್ರಾರಂಭಿಸಬೇಕು.

(೧) ವಾತವಿಕಾರದಲ್ಲಿ ಮಲಾವರೋಧವು ಆಗುವ ಸಂಭವ ಬಹಳ. ಅದಕ್ಕಾಗಿ ಶುಂಠೀಕಷಾಯದಲ್ಲಿ ಹರಳ ಎಣ್ಣೆಯನ್ನು ತೆಗೆದುಕೊಳ್ಳಬೇಕು, ಅಥವಾ ಇಚ್ಛಾಭೇದಿಯ ಒಂದು ಗುಳಿಗೆಯನ್ನು ತೆಗೆದುಕೊಳ್ಳಬೇಕು.

(೨) ಕಷಾಯ— ಉದ್ದು, ಕುಲುಥ, ನಸುಗುನ್ನಿ ಬೀಜ, ಸುಗಂಧಿ ಬೇರು, ರಾಸ್ನಾ, ಅಶ್ವಗಂಧಿ, ಹರಳಬೇರು ಇವುಗಳ ಅಷ್ಟಮಾಂಶ ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ಕೊಡುವದು. ದಿನಕ್ಕೆ ಎರಡು ಸಲ.

ಸಾಮಾನ್ಯವಾಗಿ ಯಾವತ್ತು ವಾತವಿಕಾರಗಳಿಗೆ, ನಾರಾಯಣತೈಲ, ವಿಷಗರ್ಭತೈಲ, ಮರೀಚ್ಯಾದಿತೈಲ, ಪ್ರಸಾರಣೀತೈಲಗಳಲ್ಲಿ ಯಾವುದಾದರೊಂದನ್ನು ಹಚ್ಚಿ ತಿಕ್ಕುತ್ತಿರಬೇಕು.

ಮಹಾಕ್ಷೀರಬಲಾದಿ ತೈಲವನ್ನು ಹೊಟ್ಟೆಯೊಳಗೂ ಕೊಡಬೇಕು. ಮೇಲೆ ಹಚ್ಚಲಿಕ್ಕೂ ಉಪಯೋಗಿಸಬೇಕು.

ಅರ್ಧಾಂಗವಾಯು

ಈ ಬೇನೆಯು ಮುದುಕರಿಗೂ, ಉಪದಂಶರೋಗ ಆದವರಿಗೂ, ಮದ್ಯ ಕುಡಿಯುವವರಿಗೂ ಆಗುವ ಸಂಭವ ಬಹಳ.

ರೋಗಿಗೆ ಸಂಪೂರ್ಣ ವಿಶ್ರಾಂತಿಯನ್ನು ಕೊಡುವದು ಅವಶ್ಯವಿದೆ. ತಲೆಯ ಮೇಲೆ ಬರ್ಫದ ಚೀಲವನ್ನು ಇಡಬೇಕು. ಇಲ್ಲವಾದರೆ ತಣ್ಣೀರಿನ ಪಟ್ಟಿಯನ್ನು ಇಡಬೇಕು.

ಇಂಥ ರೋಗಿಗಳಿಗೆ ಮೊದಲು ಹೇಮಗರ್ಭ ಅಥವಾ ಮಹಾವಾತವಿಧ್ವಂಸವನ್ನು ಕಾಡಿಗ್ಗರಗಿನ ರಸ ಜೇನುತುಪ್ಪ ಇದರಲ್ಲಿ ಕೊಡಬೇಕು. ದಿನಕ್ಕೆ ೨ ಸಲ ಈ ಪ್ರಕಾರ ಒಂದು ಸಪ್ತಾಹ ಕೊಡಬೇಕು. ಅನಂತರ ಏಕಾಂಗವೀರವನ್ನು ಅಲ್ಲದರಸ ಜೇನುತುಪ್ಪದಲ್ಲಿ ಕೊಡಬೇಕು. ದಿನಕ್ಕೆ ೨ ಸಲ. ಮಲಗುವಾಗ ಸರ್ಪಗಂಧ ವನಸ್ಪತಿಯ ಬೇರನ್ನು ೪-೮ ಗುಂಜಿ ನೀರಿನಗೂಡ ಕೊಡುವದು.

ಪಿತ್ತದೋಷವು ಪ್ರಬಲ ಕಂಡರೆ, ಚಂದ್ರಕಲಾ ೧ ಗುಂಜಿ ಸುವರ್ಣಮಾಕ್ಷಿಕ ೧ ಗುಂಜಿ ಕೂಡಿಸಿ ಕಲ್ಲೀಕಾಕಿತಲ್ಲಿ ಎರಡು ಸಲ ಕೊಡುವದು.

ಕಫದೋಷವು ಹೆಚ್ಚು ಕಂಡರೆ, ಸ್ಮೃತಿಸಾಗರರಸ ೧ ಗುಂಜಿ, ಅಡುಸಾಲದರಸ ೨ ಚಮಚೆ, ಅಲ್ಲದರಸ ೧ ಚಮಚೆ, ಜೇನುತುಪ್ಪ ಕೂಡಿಸಿ ಕೊಡಬೇಕು. ದಿನಕ್ಕೆ ೨-೩ ಸಲ. ಸುಪ್ತಿ ಭ್ರಮೆಗಳಿದ್ದರೆ ಸ್ಮೃತಿಸಾಗರವನ್ನು ಬ್ರಾಹ್ಮೀರಸದಲ್ಲಿ ಕೊಡಬೇಕು.

ಮೂತ್ರ ಕಟ್ಟಾಗಿದ್ದರೆ ರಬ್ಬರಿನ ನಳಿಕೆಯಿಂದ ಮೂತ್ರ ತೆಗೆಯಬೇಕು. ಶಿಲಾಜಿತು, ಗೋಕ್ಷುರಾದಿಗುಗ್ಗುಳಗಳನ್ನು ಕೊಡಬೇಕು. ಇದರಿಂದ ಮೂತ್ರವಾಗುತ್ತದೆ.

ಮಲಶುದ್ಧಿಯಗೋಸುಗ, ಬಿಸಿನೀರಿನ ಸಾಬೂ ಎನಿಮಾ ಕೊಡಬೇಕು.

ಬೇನೆಯು ಹಳೇತರಕ್ಕೆ ಬಿದ್ದಮೇಲೆ ಮುಂಜಾನೆ ಏಕಾಂಗವೀರ ಒಂದು ಗುಂಜಿ ಮತ್ತು ರಾತ್ರಿಯಲ್ಲಿ ಸ್ಮೃತಿಸಾಗರ ಒಂದು ಗುಂಜಿ ಅಲ್ಲದ ರಸ ಜೇನತುಪ್ಪದಲ್ಲಿ ಕೊಡುತ್ತ ಹೋಗಬೇಕು. ಇದನ್ನು ಕೊಟ್ಟ ಅರ್ಧ ಗಂಟೆಗೆ ಮಹಾರಾಸ್ನಾದಿ ಕಷಾಯವನ್ನು ಕೊಡಬೇಕು. ವಾತದಿಂದ ಶೂಲಿ ಇದ್ದರೆ ಮಹಾವಾತವಿಧ್ವಂಸ, ರಸೋನವಟಿಗಳನ್ನು ಜೇನಿನಲ್ಲಿ ಕೊಡಬೇಕು.
ವಾತನಾಶನತೈಲಗಳನ್ನು ಮೇಲೆ ಹಚ್ಚಿ ಮೆಲ್ಲಗೆ ತಿಕ್ಕಬೇಕು.

ಸಂಧಿವಾತ

ವಿಶ್ರಾಂತಿಯ ಅವಶ್ಯಕತೆಯನ್ನು ಮರೆಯಬಾರದು. ಮೇಲೆ ಹಚ್ಚಲು ವಾತನಾಶಕ ತೈಲಗಳನ್ನು ಉಪಯೋಗಿಸಬೇಕು. ವಾತದಿಂದ ಹಿಡಿದ ಭಾಗಗಳನ್ನು ಬಿಸಿನೀರಿನ ಚೀಲದಿಂದ ಕಾಸಬೇಕು. ಯೋಗರಾಜ ಗುಗ್ಗುಳ, ಅಥವಾ ಮಹಾಯೋಗರಾಜ ಗುಗ್ಗುಳಗಳನ್ನು ಆಕಳ ಹಾಲಿನಲ್ಲಿ ತೆಯ್ದು ದಿನಕ್ಕೆ ೨ ಸಲ ಕೊಡಬೇಕು.

(೨) ಮಹಾರಾಸ್ನಾದಿ ಕಷಾಯದಲ್ಲಿ ಪೋಟ್ಯಾಶ ಆಯೋಡಾಯಿಡ ೪-೮ ಗುಂಜಿ ಹಾಕಿ ದಿನಕ್ಕೆ ೨ ಸಲ ಕೊಟ್ಟರೆ ತೀವ್ರ ಗುಣಬರುತ್ತದೆ.

ಸರ್ವಸಾಧಾರಣವಾಗಿ ವಾತ ರೋಗಗಳಲ್ಲಿ ಉಪಯೋಗಿಸುವ ಔಷಧಗಳು

(ಗ) ಭಸ್ಮಗಳು :— ಸುವರ್ಣಮಾಕ್ಷಿಕ, ಪ್ರವಾಳ, ಮೌಕ್ತಿಕ, ರೌಪ್ಯ

(೨) ರಸಾಯನಗಳು :— ಏಕಾಂಗವೀರ, ತಾಪ್ಯಾದಿಲೋಹ, ವಾತವಿಧ್ವಂಸ, ಮಹಾವಾತವಿಧ್ವಂಸ, ಹೇಮಗರ್ಭ, ಅಷ್ಟಮೂರ್ತಿ, ರಾಜವಂಗೇಶ್ವರ, ಲಕ್ಷ್ಮೀನಾರಾಯಣರಸ.

(೩) ಕಷಾಯಗಳು :— ರಾಸ್ನಾಸಪ್ತಕ, ಮಹಾರಾಸ್ನಾದಿಕಷಾಯ, ಮಾಷಬಲಾದಿ ಕಷಾಯ.

(೪) ಗುಗ್ಗುಳಗಳು :— ಯೋಗರಾಜ ಗುಗ್ಗುಳ, ಮಹಾಯೋಗರಾಜ-ಗುಗ್ಗುಳ, ಷಡ್ವಿಂಶತಿ ಗುಗ್ಗುಳ, ತ್ರಯೋದಶಾಂಗ ಗುಗ್ಗುಳ.

(೫) ಆಸವಾರಿಷ್ಟಗಳು :— ಸಾರಸ್ವತಾರಿಷ್ಟ, ಅರವಿಂದಾಸವ, ಅಶ್ವಗಂಧಾರಿಷ್ಟ, ಪುನರ್ನವಾಸವ, ಸಾರಿವಾಸವ.

(೬) ತೈಲಗಳು :— ನಾರಾಯಣ ತೈಲ, ಪ್ರಸಾರಣೀತೈಲ, ಮಾಷತೈಲ, ಲಾಕ್ಷಾತೈಲ, ಕ್ಷೀರಬಲಾತೈಲ, ಸ್ಕಂಧವಾಯ್ವತೈಲ, ವಿಷಗರ್ಭತೈಲ, ಸಿದ್ಧಾರ್ಥಕತೈಲ, ಬಲಾಗುಡೂಚ್ಯಾದಿತೈಲ.

ಆರೈಕೆ :— ಇದು ಅತ್ಯಂತ ಮಹತ್ವದ ವಿಷಯವು. ಎಷ್ಟೋ ರೋಗಿಗಳಿಗೆ ಮಾತನಾಡಲಿಕ್ಕೆ ಬರುವದಿಲ್ಲ. ಬಿದ್ದಲ್ಲಿಯೇ ಬಿದ್ದುಕೊಂಡಿರುತ್ತಾರೆ. ಬಾಯಿಯಿಂದ ಜೊಲ್ಲು ಸೋರುತ್ತಿರುತ್ತದೆ. ಹತಾಶರಂತೆ ಕಾಣುತ್ತಿರುತ್ತಾರೆ. ಮಲಮೂತ್ರಗಳು ಮಲಗಿದಲ್ಲಿ ಹಾಸಿಗೆಯಲ್ಲಿಯೇ ಆಗುತ್ತವೆ. ಹಾಸಿಗೆಯಲ್ಲಿ ಬಿದ್ದಲ್ಲಿಯೇ ಬೀಳುವದರಿಂದ ಕಟಿ ಪೃಷ್ಠಗಳ ಮೇಲೆ ವ್ರಣಗಳಾಗುತ್ತವೆ. ಇಂಥ ಪ್ರಸಂಗಗಳಲ್ಲಿ ಪರಿಚಾರಕರು, ಅಂತಃಕರಣಪೂರ್ವಕವಾಗಿ ದಯಾದೃಷ್ಟಿಯಿಂದ ಬುದ್ಧಿಯನ್ನು ಉಪಯೋಗಿಸಿಕೊಂಡು ಶುಶ್ರೂಷೆ ಮಾಡಬೇಕಾಗುತ್ತದೆ.

ಪಥ್ಯ : ಹಾಲು, ಮಜ್ಜಿಗೆ, ಕಾಫಿ, ಮೋಸಂಬೀರಸಗಳಂಥ ದ್ರವ ಪದಾರ್ಥಗಳನ್ನು ಕೊಡಬೇಕು. ಜ್ಞಾನ ಹಳೇತರಕ್ಕೆ ಬಂದಮೇಲೆ ಸಾತ್ವಿಕ ಸೌಮ್ಯ ಆಹಾರ ಕೊಡಬೇಕು.

ಉನ್ಮಾದ

ಉನ್ಮಾದವೆಂದರೆ ಸ್ಮೃತಿವಿಭ್ರಮವಾಗುವದು. ಇದರ ಕಾರಣವನ್ನು ಶೋಧಿಸಿ ಅದನ್ನು ದೂರಗೊಳಿಸುವದರಿಂದ ಗುಣ ಬರುತ್ತದೆ. ಆದರೆ

ಒಮ್ಮೊಮ್ಮೆ ಆ ಕಾರಣವೇ ತಿಳಿಯುವದಿಲ್ಲ. ಆಗ ಕೆಳಗೆ ಬರೆದ ಉಪಚಾರಗಳನ್ನು ಮಾಡುವದು ಯೋಗ್ಯವಾಗಿದೆ.

(೧) ಕೂಷ್ಮಾಂಡಸ್ವರಸ ೨ ಚಮಚೆ, ಬ್ರಾಹ್ಮೀಸ್ವರಸ ೨ ಚಮಚೆ, ಲೋಳಸರದ ರಸ ೨ ಚಮಚೆ, ಕೂಡಿಸಿ ಅದರೊಳಗೆ ೨-೩ ಗುಂಜಿ ಬಜೆ ಪುಡಿ, ಜೇನುತುಪ್ಪ ಕೂಡಿಸಿ ದಿನಕ್ಕೆ ೨-೩ ಸಲ ಕೊಡುವದು.

(೨) ಜಟಾಮಾಂಸಿ ಚೂರ್ಣ ೨-೩ ಗುಂಜಿ, ಬಜೆಪುಡಿ ೨ ಗುಂಜಿ ಬ್ರಾಹ್ಮೀರಸ ಜೇನುತುಪ್ಪದಲ್ಲಿ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

(೩) ಶಂಖಪುಷ್ಪಿಯ ೨-೪ ಚಮಚೆ ರಸದಲ್ಲಿ ತುಸು ಜೇನುತುಪ್ಪ ಕೂಡಿಸಿ ಕೊಡುವದು.

(೪) ಬಜೆಕಷಾಯದಲ್ಲಿ ಖುರಾಸಾನಿ ಅಜವಾನ ೨-೪ ಗುಂಜಿ ಜೇನುತುಪ್ಪ ಕೂಡಿಸಿ ಕೊಡುವದು.

ತಲೆಗೆ ಬ್ರಾಹ್ಮೀ ಎಣ್ಣೆಯನ್ನು ಹಚ್ಚಬೇಕು. ಯಾವಾಗಲೂ ರೋಗಿಯ ಮನಸ್ಸು ಶಾಂತವಿರುವಂತೆ ಪ್ರಯತ್ನಿಸಬೇಕು. ಮಲಶುದ್ಧಿಯಾಗುವಂತೆ ಉಪಾಯ ಮಾಡಬೇಕು. ಸ್ಮೃತಿಸಾಗರ, ಕಾಮದುಧಾ, ಮೌಕ್ತಿಕ, ಚಂದ್ರಕಲಾ, ಉನ್ಮಾದ, ಗಜಕೇಸರಿ, ಬ್ರಾಹ್ಮೀ, ಸಾರಸ್ವತಾರಿಷ್ಟ, ಇಷ್ಟು ಉನ್ಮಾದಕ್ಕೆ ಉಪಯುಕ್ತ ಔಷಧಿಗಳು. ಪಥ್ಯ ಸಾತ್ವಿಕ ಆಹಾರ.

ಅಪಸ್ಮಾರ (ಮಂಲರೋಗ)

ಈ ರೋಗವು ಪೂರ್ವಜನ್ಮದ ಅದೃಷ್ಟದ ದ್ಯೋತಕವೆಂದು ಹೇಳಿದರೆ ವಿಶೇಷ ತಪ್ಪಾಗಲಿಕ್ಕಿಲ್ಲ. ಪ್ರಕೃತಿಗನುಸರಿಸಿ ಚಿಕಿತ್ಸೆ ಮಾಡುವದು ಮಾನವನ ಕರ್ತವ್ಯ. ಆದರೂ ಅನುಭವಿಕ ವೈದ್ಯರಿಂದ ಉಪಚಾರ ಮಾಡಿಸುವದು ಒಳ್ಳೆಯದು.

ರೋಗಿಗೆ ಒಮ್ಮೆಲೇ ಸ್ಮೃತಿಯು ತಪ್ಪುವದು. ಇದ್ದ ಪರಿಸ್ಥಿತಿಯಲ್ಲಿಯೇ ಬಿದ್ದುಬಿಡುತ್ತಾನೆ. ಮೈ ಸೆಟೆಯುತ್ತದೆ. ಕೆಲ ವೇಳೆ ಒದರುತ್ತಿರುತ್ತಾನೆ. ಬಾಯಿಯಲ್ಲಿ ಬುರುಗು ಬರುವದು. ನಾಲಿಗೆಯನ್ನು ಜೋರಿನಿಂದ ಕಚ್ಚಿಕೊಳ್ಳುವನು. ಇಷ್ಟಾದ ನಂತರ ಸ್ವಲ್ಪ ಹೊತ್ತು ಬಿಟ್ಟು ಕೆಲವರಿಗೆ ಎಚ್ಚರಬರುತ್ತದೆ. ಬೇರೆ ಕೆಲವರಿಗೆ ಅದೇ ಸ್ಥಿತಿಯಲ್ಲಿ ನಿದ್ರೆ ಬಂದು ಬಿಡುತ್ತದೆ.

ಉಪಚಾರ: ಅವನನ್ನು ಯೋಗ್ಯ ಸ್ಥಳದಲ್ಲಿ ವ್ಯವಸ್ಥಿತ ರೀತಿಯಿಂದ ಮಲಗಿಸುವದು. ನಾಲಿಗೆಯನ್ನು ಕಡಿದುಕೊಳ್ಳಬಾರದೆಂದು ಹಲ್ಲುಗಳ ನಡುವೆ ಹೂಲಿಜೆಂಡಿನ ಬೂಚು ಇಡಬೇಕು. ಅವನ ಮೈಮೇಲಿನ ಅರಿವೆಗಳನ್ನು ಸಡಲಿಸುವದು. ಎಚ್ಚರ ಬಂದ ನಂತರ ಹಾಲು ಅಥವಾ ಮೋಸಂಬಿ ರಸ ಕೊಡಬೇಕು.

(೧) ೧-೨ ಗುಂಜಿ ಸ್ಮೃತಿಸಾಗರ ರಸವನ್ನು ಜೇನುತುಪ್ಪ ಹಾಕಿದ ಬಜೆಕಷಾಯದೊಡನೆ ದಿನಕ್ಕೆ ೨ ಸಲ ಕೊಡುವದು.

(೨) ಬಜೆ ೪ ಗುಂಜಿ, ಶುಂಠಿ ೪ ಗುಂಜಿ, ಕೂಡಿಸಿ ಬ್ರಾಹ್ಮೀರಸ ಜೇನುತುಪ್ಪದಲ್ಲಿ ದಿನಕ್ಕೆ ೨ ಸಲ ಕೊಡುವದು.

(೩) ಕೂಷ್ಮಾಂಡಸ್ವರಸ ೩ ಚಮಚೆ, ಮಾದಾಳದ ಹಣ್ಣಿನರಸ ೩ ಚಮಚೆ, ತುಸು ಜೇನುತುಪ್ಪ ಕೂಡಿಸಿ ಅದರೊಡನೆ ೧-೨ ಮಾಸಿ ಜೇಷ್ಠ-ಮಧುದ ಚೂರ್ಣ ದಿನಕ್ಕೆ ೨ ಸಲ ಕೊಡಬೇಕು.

(೪) ಸ್ಮೃತಿಸಾಗರ ರಸವನ್ನು ಬ್ರಾಹ್ಮೀ ರಸದಲ್ಲಿ ಕೊಡುತ್ತ ಹೋಗುವದು

ಅಭ್ರಕ, ಮೌಕ್ತಿಕ, ಸುವರ್ಣಯೋಗಗಳು ಯೋಗ್ಯವಾದವುಗಳು. ಈ ರೋಗಿಗೆ ಔಷಧೋಪಚಾರವನ್ನು ವರ್ಷಾನುವರ್ಷ ಮಾಡಬೇಕಾಗುವದು. ಪಥ್ಯ ಅತ್ಯಂತ ಸೌಮ್ಯ ಆಹಾರ.

ಹಿಸ್ಟೀರಿಯಾ

ಈ ಬೇನೆಯು ವಿಶೇಷವಾಗಿ ಹೆಣ್ಣುಮಕ್ಕಳಿಗೆ ಬರುವದುಂಟು. ಆಗ ಅವರು ನಗುವರು, ಅಥವಾ ಅಳುವರು. ಏನೇನೋ ಮಾತನಾಡುವರು. ಮೊದಲಾದ ಅನೇಕ ಪ್ರಕಾರದ ಲಕ್ಷಣಗಳಾಗುವವು. ಇದಕ್ಕೆ ಗಾಬರಿಯಾಗುವ ಕಾರಣವಿಲ್ಲ. ಇದು ಗುಣವಾಗುವ ಬೇನೆ.

(೧) ಕೂಷ್ಮಾಂಡಸ್ವರಸದಲ್ಲಿ, ಜಟಾಮಾಂಸಿ ಮತ್ತು ಜೇಷ್ಠಮಧು ಇವುಗಳ ಚೂರ್ಣವನ್ನು ಜೇನುತುಪ್ಪ ಹಾಕಿ ಕೊಡಬೇಕು.

(೨) ಬ್ರಾಹ್ಮೀರಸವನ್ನು ಜೇನುತುಪ್ಪ ಕೂಡಿಸಿ ಕೊಡುವದು.

(೩) ಸ್ಮೃತಿಸಾಗರವನ್ನು ಕೊಡುವದು.

(೪) ಕಾಮದುಘಾ, ಮುಕ್ತಾಭಸ್ಮ, ಪ್ರವಾಳಗಳನ್ನು ಕೊಡುವದು. ಮಲಬದ್ಧತೆಯಾಗದಂತೆ ನೋಡುತ್ತಿರಬೇಕು. ಸೌಮ್ಯ ಆಹಾರವನ್ನು ಕೊಡಬೇಕು.

---

೬ ಮೂತ್ರರೋಗಗಳು

ಪೂಯಮೇಹ-ಪರಮಾ

ಶಿಶ್ನದ ತುದಿಯು ಕೆಂಪಗೆ ಆಗಿ ಬಾಯುವದು. ಮೊದಮೊದಲು ನೀರಿನಂಥ ಸ್ರಾವವು ಬರುವದು. ನಂತರ ಅದು ಅರಿಷಣ ವರ್ಣದ್ದೂ, ಪೂಯಯುಕ್ತವೂ ಗಟ್ಟಿಯಾಗಿಯೂ ಹೊರಬೀಳುವದು. ಮೂತ್ರಮಾರ್ಗದಲ್ಲಿ ಅತಿಶಯ ದಾಹವೂ, ವೇದನೆಯೂ ಪ್ರಾರಂಭವಾಗುವವು. ಶೋಥವೂ ಸಂಭವಿಸುವದು. ಅದರಿಂದ ಮೂತ್ರ ಬಹು ಕಷ್ಟದಿಂದ ಹೊರಬೀಳುತ್ತದೆ. ಶೋಥವು ಬಲಿತರೆ ರಕ್ತವೂ ಕೂಡ ಬರಬಹುದು. ಈ ರೋಗ ಸ್ತ್ರೀ ಪುರುಷರೀರ್ವರಿಗೂ ಆಗುವದುಂಟು.

ಚಿಕಿತ್ಸೆ— ಈ ವಿಕಾರವು ಪ್ರಾರಂಭವಾದ ಕೂಡಲೇ ಸಂಭೋಗವನ್ನು ಬಿಟ್ಟುಬಿಡಬೇಕು. ಕೋಷ್ಠಶುದ್ಧಿಗಾಗಿ ಔಡಲ ಎಣ್ಣೆಯನ್ನು ತೆಗೆದುಕೊಳ್ಳಬೇಕು. ಜನನೇಂದ್ರಿಯವನ್ನು ಸ್ವಚ್ಛ ತೊಳೆಯುತ್ತಿರಬೇಕು. ಇಂದ್ರಿಯದ ಸ್ರಾವವು ಕಣ್ಣು, ಮೂಗು ಬಾಯಿಗಳಿಗೆ ಹತ್ತದಂತೆ ಜಾಗ್ರತೆ ವಹಿಸಬೇಕು.

೪-೫ ಗುಂಜಿ ಪಟಿಕವನ್ನು ಒಂದು ಕಪ್ಪು ಬಿಸಿನೀರಿನಲ್ಲಿ ಹಾಕಬೇಕು. ಆ ನೀರನ್ನು ಸಣ್ಣ ಕಾಚಿನ ಜೀಕಳಿಯಲ್ಲಿ ತೆಗೆದುಕೊಂಡು ಮೆಲ್ಲನೆ ಮೂತ್ರ ದ್ವಾರದಲ್ಲಿ ಬಿಟ್ಟುಕೊಳ್ಳಬೇಕು. ಈ ಪ್ರಕಾರ ೩-೪ ಸಲ ಮಾಡಿಕೊಳ್ಳಬೇಕು. ಈ ಕೃತಿಯನ್ನು ಬಲ್ಲ ವೈದ್ಯರಿಂದ ಅರಿತುಕೊಂಡು ಮಾಡಬೇಕು.

ಔಷಧಗಳು

(೧) ಚಂದನ ತೈಲದ ೧೫-೨೦ ಹನಿಗಳನ್ನು ಬತ್ತಾಸದಲ್ಲಿ ಹಾಕಿ ದಿನಕ್ಕೆ ೨-೩ ಸಲ ತಿನ್ನಬೇಕು.

(೨) ನೆಗ್ಗಿಲೀಮುಳ್ಳು, ಮುತ್ತುಲು ಹೂ, ಬದೇಸೊಪ್ಪುಗಳ ಕಷಾಯವನ್ನು ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

(೩) ನೆಗ್ಗಿಲೀಮುಳ್ಳು, ಮತ್ತು ಕಪ್ಪರ ಚಿಪ್ಪಿಯ ಚೂರ್ಣವನ್ನು ೪-೬ ಗುಂಜಿ ಲಿಂಬೀರಸದ ಸರಬತ್ತಿನಗೂಡ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

(೪) ಅಳಲೇಕಾಯಿ, ಧಮಾಸಾ, ಕಕ್ಕೀಕಾಯಿ, ಪಾಷಾಣಭೇದ, ನೆಗ್ಗಿಲೀಮುಳ್ಳು ಇವುಗಳ ಕಷಾಯವನ್ನು ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

(೫) ವಂಗಭಸ್ಮವನ್ನು ೧-೨ ಗುಂಜಿ ನೆಲ್ಲೀಪಾಕಿನಲ್ಲಿ ದಿನಕ್ಕೆ ೨ ಸಲ ತೆಗೆದುಕೊಳ್ಳುವದು.

(೬) ಕಬಾಬಚಿನ್ನಿ ೮ ಗುಂಜಿ, ಸೋರುಪ್ಪು ೪ ಗುಂಜಿ, ತಿನ್ನುವ ಸೋಡಾ ೪ ಗುಂಜಿ ಇವನ್ನು ಕೂಡಿಸಿ ೩ ಬೇಟು ಮಾಡಿ ಮೂರು ಸಲ ತೆಗೆದುಕೊಂಡು ಮೇಲೆ ನೀರು ಕುಡಿಯುವದು.

ಮೂತ್ರವು ತುಸು ತುಸು ಆಗಿ ಉರಿಯುತ್ತಿದ್ದರೆ ೧-೨ ಗುಂಜಿ ಪ್ರವಾಳ ಚಂ. ಪು. ಭಸ್ಮವನ್ನು ಅಕ್ಕೀಕಟ್ಟಿನಗೂಡ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು. ಮತ್ತು ಕಾಸಿ ಆರಿಸಿದ ಹಾಲು ಅರ್ಧ ಕಪ್ಪು ಅದರೊಳಗೆ ಸೋಡಾ ವಾಟರ ಹಾಕಿ ಕುಡಿಯುವದು. ಇದರಿಂದ ಮೂತ್ರ ಸಾಫ ಆಗಿ ಉರಿ ಕಡಿಮೆಯಾಗುತ್ತದೆ.

ಶಿಲಾಜಿತು, ಚಂದ್ರಪ್ರಭಾ, ಗೋಕ್ಷುರಾದಿ ಗುಗ್ಗುಳ, ಚಂದನಾಸವ, ಉಶೀರಾಸವಗಳು ಗುಣಕಾರಿಯಾಗಿವೆ.

ಉಷ್ಣಪೇಯಗಳನ್ನು ಸೇವಿಸಬಾರದು. ಎಣ್ಣೆ, ಉಪ್ಪು, ಖಾರ ಬಿಡಬೇಕು. ಸಾತ್ವಿಕ ಆಹಾರ ತೆಗೆದುಕೊಳ್ಳಬೇಕು.

ಮೂತ್ರಾಘಾತ

ಮೂತ್ರ ವಿಸರ್ಜನೆಗೆ ತಡೆಯುಂಟಾಗುವದೇ ಮೂತ್ರಾಘಾತ. ಇದು ಅನೇಕ ರೋಗಗಳಲ್ಲಿ ಹಾಗು ನಿರೋಗಿ ಮನುಷ್ಯರಿಗೂ ಆಗುವ ಸಂಭವವಿರುತ್ತದೆ.

(೧) ಅಳಲೇಕಾಯಿ, ನೆಗ್ಗಿಲೀಮುಳ್ಳು, ಕಕ್ಕೇಕಾಯಿ, ಪಾಷಾಣಭೇದಿ, ರೇಣುಕಬೀಜಗಳ ಕಷಾಯ ಕೊಡುವದು. ದಿನದಲ್ಲಿ – ೩ ಸಲ.

(೨) ನೆಗ್ಗಿಲೀಮುಳ್ಳು, ಮುತ್ತಲ ಹೂ, ಬಡೇಸೋಪುಗಳ ಕಷಾಯವನ್ನು ಕೊಡುವದು.

(೩) ಬಾರ್ಲಿ ಕುದಿಸಿದ ನೀರು ಕೊಡುವದು.

(೪) ಸೋಡಾವಾಟರ ಮತ್ತು ಹಾಲು ಕೂಡಿಸಿ ಕೊಡುವದು.

(೫) ಗೋಕ್ಷುರಾದಿಗುಗ್ಗುಳವನ್ನು ನೀರಿನಲ್ಲಿ ತೆಯ್ದು ಕೊಡುವದು.

(೬) ಸೋರುಪ್ಪು ೧-೨ ಗುಂಜಿ ಕೊಡುವದು.

(೭) ಒಂದು ದೊಡ್ಡ ಬೋಗೋಣಿಯಲ್ಲಿ ಬಿಸಿನೀರು ಹಾಕಿ, ಅದರಲ್ಲಿ ೧೫-೨೦ ಮಿನಿಟು ಕೂಡುವದು.

(೮) ಬೆನ್ನು ಮತ್ತು ಹೊಟ್ಟೆಯ ಕೆಳಭಾಗವನ್ನು ಕಾಸುವದು.

(೯) ರಬ್ಬರ ನಲಿಕೆಯಿಂದ ಮೂತ್ರ ತೆಗೆಯುವದು.

ಮಧುಮೇಹ

ಮೂತ್ರದಗೂಡ ಸಕ್ಕರೆ ಹೋಗಹತ್ತುವದು. ಇದಕ್ಕೆ ಮಧುಮೇಹ ವೆಂದೆನ್ನುತ್ತಾರೆ.

(೧) ಪಾರಿಜಾತ ತೊಗಟೆ ೧ ತೊಲಿ ಉತ್ತರಾಣಿಬೇರು ೧ ತೊಲಿ ಸುಂಠಿ ೧॥ ಮಾಸಿ ಹವೀಜ ೩ ಮಾಸಿ ಸಪ್ತರಂಗಿ ೧ ತೊಲಿ ವಾಯುವರ್ಣ ೧ ತೊಲಿ ಬಡೇಸೋಪು ೧ ತೊಲಿ ಇವೆಲ್ಲವುಗಳನ್ನು ಅವಡುಸವಡು ಜಜ್ಜಿ ಕೂಡಿಸಿ ಅದರೊಳಗೆ ಏಳು ಭಾಗಮಾಡಿ ಇಡಬೇಕು. ಪ್ರತಿದಿನ ಒಂದು ಭಾಗವನ್ನು ತೆಗೆದುಕೊಂಡು ಕಷಾಯಮಾಡಿ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು. ಈ ಪ್ರಕಾರಾ ೨-೩ ತಿಂಗಳು ಮಾಡುವದು.

(೨) ನೇರಲಹಣ್ಣು ತಿನ್ನಬೇಕು. ನೇರಲಬೀಜಗಳನ್ನು ನೆರಳಲ್ಲಿ ಒಣಗಿಸಿ ಇಟ್ಟು ಅದರ ಪುಡಿಮಾಡಿ ೧-೧॥ ಮಾಸಿ ದಿನಕ್ಕೆ ೨ ಸಲ ನೀರಿನಗೂಡ ತೆಗೆದುಕೊಳ್ಳುವದು.

(೩) ಅನಾನಸಹಣ್ಣು ತಿನ್ನಬೇಕು.

ಲೋಹಭಸ್ಮ, ವಸಂತಕುಸುಮಾಕರ, ಶಿಲಾಜಿತು, ಚಂದ್ರಪ್ರಭಾ ಇವು ಯೋಗ್ಯ ಔಷಧಗಳಾಗಿವೆ.

ಸಕ್ಕರೆ, ಜಿಡ್ಡಿನ ಪದಾರ್ಥಗಳು, ಅಕ್ಕಿಯ ಅನ್ನ ತಿನ್ನಬಾರದು.

ಬಹುಮೂತ್ರ

ಮೇಲಿಂದ ಮೇಲೆ ಮೂತ್ರ ಆಗುವದು. ಇದಕ್ಕೆ ಬಹುಮೂತ್ರವೆಂದೆನ್ನುತ್ತಾರೆ.

(೧) ಹೊನ್ನವರಿ ಹೂವಿನ ಕಷಾಯದಲ್ಲಿ ಹಾಲು ಸಕ್ಕರೆ ಹಾಕಿ ಕೊಡುವದು. ದಿನಕೆ ೨ ಸಲ.

(೨) ಆಲದ ಬೇರಿನ ಕಷಾಯವನ್ನು ದಿನಕ್ಕೆ ೨ ಸಲ ಕೊಡುವದು.

ಬಸ್ತಿಶೂಲಿ

ಮೂತ್ರ ಸಂಚಯವಾಗುವ ಇಂದ್ರಿಯಕ್ಕೆ ಬಸ್ತಿ ಎಂದೆನ್ನುತ್ತಾರೆ. ಇದು ಜನನೇಂದ್ರಿಯದ ಹಿಂಬದಿಗೆ ಅದಕ್ಕೆ ಹೊಂದಿಕೊಂಡು ಇರುತ್ತದೆ.

೧ ಮುಳ್ಳುಸವತೀ ಬೀಜ, ಸವತೀಬೀಜ, ಬೂದಿಗುಂಬಳ ಬೀಜ ಇವುಗಳ ಕಷಾಯ ಕೊಡುವದು.

ಬಸ್ತಿಯ ಭಾಗವನ್ನು ಸ್ವಲ್ಪ ಎಣ್ಣೆ ಹಚ್ಚಿ ಕಾಸುವದು. ಬಿಸಿನೀರಿನಲ್ಲಿ ಕೂಡ್ರುವದು.

ಉರಿಮೂತ್ರ

೧. ಹವೀಜ ಅಥವಾ ಜೀರಿಗೆಯ ಕಷಾಯದಲ್ಲಿ ಹಾಲು ಸಕ್ಕರೆ ಕೂಡಿಸಿ ಕೊಡುವದು. ದಿನಕ್ಕೆ ೨-೩ ಸಲ.

೨. ಚಂದನದ ಎಣ್ಣೆಯ ೧೦-೧೫ ಹನಿಗಳನ್ನು ಬತ್ತಾಸದಲ್ಲಿ ತೆಗೆದು ಕೊಳ್ಳುವದು. ದಿನಕ್ಕೆ ೨ ಸಲ.



೭ ಉಪದಂಶ

ಉಪದಂಶವೆಂದರೆ ಗರಮಿರೋಗ, ಜನನೇಂದ್ರಿಯದ ಮೇಲೆ ಚಟ್ಟೆ ಏಳುವದು. ಇಂದ್ರಿಯವು ಬಾಯುವದು, ಗೆಜ್ಜೆಗಳಲ್ಲಿ ಉಡುಚು ಆಗುವದು, ಇವು ಉಪದಂಶದ ಸರ್ವಸಾಮಾನ್ಯ ಲಕ್ಷಣಗಳು.

ತ್ರಿಫಳಾ ಕಷಾಯದಿಂದ ಚಟ್ಟೆಗಳನ್ನು ತೊಳೆದು, ಸ್ವಚ್ಛ ಅರಳೆಯಿಂದ ಒರೆಸಬೇಕು. ಆದರ ಮೇಲೆ ಸಂಗಜೀರಗಿಯ ಪುಡಿಯನ್ನು ಉದುರಿಸಿ, ಹಳೇ ತುಪ್ಪ ಹಚ್ಚಿದ ಅರಿವೆಯ ಪಟ್ಟೆಯನ್ನು ಅದರ ಮೇಲೆ ಇಟ್ಟು ಕಟ್ಟಬೇಕು.

ಉಡುಚುಗಳಿಗೆ ರೇವಚಿನ್ನಿಯ ಅರ್ಕ ತೆಯ್ದು ಹಚ್ಚಬೇಕು. ಉಡುಚುಗಳಲ್ಲಿ ನೋವು ಇದ್ದರೆ ದಿನಕ್ಕೆ ೨-೩ ಸಲ ಅಗಸೀ ಪೋಟೀಸಿನಿಂದ ಕಾಸಬೇಕು. ಅವು ಒಡೆದು ಸೋರಹತ್ತಿದರೆ ಕೀವು ಪೂರ್ಣ ಬಸಿಯುವ ತನಕ, ದಿನಕ್ಕೆ ೨-೩ ಸಲ ಅರಿಷಿಣಪುಡಿ ಹಾಕಿದ ಕಣಕದ ಅಥವಾ ಅಗಸೀ ಪೋಟೀಸು ಹಾಕಬೇಕು. ಕೀವು ಹೋದ ನಂತರ, ದಿನಾಲು ತ್ರಿಫಲಾ ಕಷಾಯದಿಂದ ತೊಳೆದು ಅರಳೆಯಿಂದ ಮೆಲ್ಲನೆ ಒರೆಸಬೇಕು. ಆ ಮೇಲೆ ಒಂದು ದಪ್ಪ ಅರಿವೆಯ ತುಣುಕಿಗೆ, ಹಳೇ ತುಪ್ಪವನ್ನು ಹಚ್ಚಿ ಅದನ್ನು ವ್ರಣದ ಮೇಲೆ ಇಟ್ಟು ಅದರ ಮೇಲೆ ಅರಳೆಯನ್ನಿಟ್ಟು ಕಟ್ಟಬೇಕು. ಹಳೇ ತುಪ್ಪವಿದ್ದಿಲ್ಲವೆಂದರೆ, ರೋಪಣತೈಲದಲ್ಲಿ ಅರಿವೆಯನ್ನು ತೋಯಿಸಿ ಇಡಬೇಕು. ಹೀಗೆ ಮಾಡುವದರಿಂದ ಅವು ಮಾಯ್ದು ಬರುತ್ತವೆ.

೧. ಔಷಧಗಳು:— ಅನಂತಮೂಲದ ಕಷಾಯವನ್ನು, ಚೋಪಚಿನ್ನಿ ೩-೪ ಗುಂಜಿ ಚೂರ್ಣದೊಡನೆ ಗುಣವಾಗುವತನಕ ತೆಗೆದುಕೊಳ್ಳಬೇಕು.

೨. ವ್ಯಾಧಿಹರಣ, ಅಷ್ಟಮೂರ್ತಿ, ಸುವರ್ಣರಾಜವಂಗೇಶ್ವರ ಇವುಗಳಲ್ಲಿ ಯಾವುದಾದರೊಂದನ್ನು ವೈದ್ಯರ ಸಲಹೆಯಿಂದ ತೆಗೆದುಕೊಳ್ಳಬೇಕು.

೩. ಸಾರಿವಾದ್ಯಾಸವ, ಮಹಾಮಂಜಿಷ್ಠಾದಿ ಕಷಾಯಗಳು ಗುಣಕಾರಿಯಾದವುಗಳಿವೆ. ಪಥ್ಯ - ಸಂಭೋಗವನ್ನು ಬಿಟ್ಟುಬಿಡಬೇಕು. ಅಲವಣ

ಪಥ್ಯ ಮಾಡಬೇಕು. ಇದರಿಂದ ಬೇಗನೆ ಗುಣವಾಗುತ್ತದೆ. ಹುಳಿ, ಎಣ್ಣೆ, ಖಾರಗಳನ್ನು ಬಿಟ್ಟುಬಿಡಬೇಕು.

---

೮ ತ್ವಚೆ ರೋಗಗಳು

ಹುರುಕು-ಕಜ್ಜಿ

ಇದು ಕಜ್ಜಿಗೆ ಕಾರಣವಾದ ಕ್ರಿಮಿ ಸ್ಪರ್ಶದಿಂದ ಹರಡುತ್ತದೆ. ಇದರಿಂದ ಕಡಿತ, ಮನಸ್ಸಿಗೆ ಕಿರಿಕಿರಿಯಾಗುತ್ತದೆ. ನಾಲ್ಕು ಜನರಿದ್ದಲ್ಲಿಗೆ ಹೋದರೆ ಅಸಹ್ಯವೆನಿಸುತ್ತದೆ. ಆದ್ದರಿಂದ ಈ ರೋಗವಿದ್ದವರು ಆದಷ್ಟು ಬೇಗನೆ ಗುಣವಾಗುವದಕ್ಕೆ ಒಳ್ಳೆ ಸ್ವಚ್ಛ ಬಟ್ಟೆಗಳನ್ನು ಉಪಯೋಗಿಸಬೇಕು. ಹಾಸಿಗೆ ಹೊದಿಕೆಗಳನ್ನು ಸ್ವಚ್ಛವಿಡಬೇಕು. ಪ್ರತಿನಿತ್ಯ ಸ್ನಾನಮಾಡಬೇಕು. ಬೇವಿನ, ಚಂದನದ ಸಾಬೂನುಗಳನ್ನು ಸ್ನಾನಕ್ಕಾಗಿ ಉಪಯೋಗಿಸುವದು.

ಬಹಿರುಪಚಾರ: ಎಳ್ಳೆಣ್ಣೆ ೩ ತೊಲೆ, ಗಂಧಕ ೧ ತೊಲೆ, ತುತ್ತಿ ೨ ಗುಂಜಿ ಚೆನ್ನಾಗಿ ಕಲಬತ್ತಿನಲ್ಲಿ ಅರೆದು ಸ್ವಚ್ಛ ಅಗಲವಾದ ಬಾಟ್ಲಿಯಲ್ಲಿ ಹಾಕಿ ಇಡಬೇಕು. ಇದು ಘೃತವಾಗುವದು. ಈ ಘೃತವನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಹಚ್ಚುವದರಿಂದ ಹುರುಕು ಕಜ್ಜಿಗಳು ಗುಣವಾಗುತ್ತವೆ. ಇದೇ ಘೃತವು ಇಸಬು, ತದ್ದು, ಗಜಕರ್ಣಗಳಿಗೂ ಗುಣಕಾರಿಯಾಗಿದೆ.

ಹೊಟ್ಟೆಯೊಳಗೆ ಮಹಾಮಂಜಿಷ್ಠಾದಿ ಕಷಾಯವನ್ನು ಪ್ರತಿ ಊಟದ ನಂತರ ೨ ಚಮಚೆ, ೨ ಚಮಚೆ ನೀರು ಕೂಡಿಸಿ ತೆಗೆದುಕೊಳ್ಳಬೇಕು.

ಗಜಕರ್ಣ

ಇದು ಬಹಳ ಕೆಟ್ಟ ಬೇನೆ. ತ್ವಚೆಯು ಆನೆಯ ಕಿವಿಗಳಂತೆ ದಪ್ಪ ಮತ್ತು ಬಿರುಸು ಆಗುತ್ತದೆ. ಇದಕ್ಕೆ ಒಂದೇಸವನೆ ಬಿಟ್ಟುಬಿಡದರೆ ಉಪಚಾರ ಮಾಡಿ ಕಳೆದುಕೊಳ್ಳಬೇಕು. ಸುಲಭಸಾಧ್ಯವೆಂದು ತಿಳಿಯಬಾರದು.

ಹೊಟ್ಟೆಯೊಳಗೆ- ಮಹಾಮಂಜಿಷ್ಠಾದಿ ಕಷಾಯವನ್ನು ತಪ್ಪದೆ ತೆಗೆದು ಕೊಳ್ಳುತ್ತ ಹೋಗಬೇಕು. ಮೇಲೆ ಹಚ್ಚಲಿಕ್ಕೆ: ಗಂಧಕ ೧೬ ಗುಂಜಿ, ಹರ-ತಾಳ ೧೬ ಗುಂಜಿ, ಪಾರದ ೧೬ ಗುಂಜಿ, ಸೂರತಿ ಚಿಗಾಣ ೧೬ ಗುಂಜಿ, ತುತ್ತಿ ೧೬ ಗುಂಜಿ, ಫಟಿಕ ೧೬ ಗುಂಜಿ. ಮೊದಲು ಒಂದು ಕಲುಬತ್ತಿನಲ್ಲಿ ಪಾರದ, ಗಂಧಕಗಳನ್ನು ಕೂಡಿಸಿ ಚೆನ್ನಾಗಿ ೩ ತಾಸು ಅರೆಯಬೇಕು. ಆ ಮೇಲೆ ಉಳಿದ ಪದಾರ್ಥಗಳನ್ನು ಕೂಡಿಸಿ ಸ್ವಲ್ಪ ನೀರ ಅರೆದು ಆ ಮೇಲೆ ಅದರೊಳಗೆ ಕುರಿ ಹಾಲು ಹಾಕಿ ಒಂದು ದಿನ ಅರೆಯಬೇಕು. ನಂತರ ನೆರಳಲ್ಲಿ ಒಣಗಿಸಿ ಅಗಲು ಬಾಯಿಯ ಬಾಟ್ಲಿಯಲ್ಲಿ ಹಾಕಿ ಇಡಬೇಕು. ಗಜಕರ್ಣಕ್ಕೆ ಈ ಪುಡಿಯನ್ನು ಬೇವಿನ ಎಣ್ಣೆ ಅಥವಾ ಹುಲಗಲೀ ಎಣ್ಣೆಯಲ್ಲಿ ಹಚ್ಚಬೇಕು. ಆಡುಸಾಲ ಹಾಕಿ ಕುದಿಸಿದ ನೀರಿನಿಂದ ತೊಳೆಯುತ್ತಿರಬೇಕು. ಫಟಿಕ, ಟಂಕಣಖಾರಗಳ ಪುಡಿಯನ್ನು ಬಿಸಿ ನೀರಿನಲ್ಲಿ ಹಾಕಿ ಅದರೊಳಗೆ ಸ್ವಚ್ಛ ಅರಿವೆಯನ್ನು ತೋಯಿಸಿ, ಅದರ ಪಟ್ಟಿಯನ್ನು ಗಜಕರ್ಣದ ಮೇಲೆ ಇಡಬೇಕು.

ಇಸಬು

೧೦ ತೊಲಿ ಎಸರು ಬಂದ ನೀರಿನಲ್ಲಿ ೫ ತೊಲಿ ಪಪಾಯಿ ಹಾಲು. ಅರ್ಧ ತೊಲಿ ಟಂಕಣಖಾರಪುಡಿ ಹಾಕಿ ಇಡಬೇಕು. ಅದರ ನಂತರ ಇಸಬಿಗೆ ಆ ನೀರಿನಲ್ಲಿ ಅರಿವೆ ತೋಯಿಸಿ ಪಟ್ಟಿ ಹಾಕಬೇಕು. ಅಥವಾ ಮಾಗಿಯೇ ಹಚ್ಚಬೇಕು.

ತದ್ದು

ಮುತ್ತಲ ಬೀಜವನ್ನು ಲಿಂಬೀರಸದಲ್ಲಿ ತೆಯ್ದು ಹಚ್ಚಬೇಕು

ತ್ವಚರೋಗದವರಿಗೆ ಮಹಾಮಂಜಿಷ್ಠಾದಿ ಕಷಾಯವನ್ನು ಕೊಡುವದರಿಂದ ಗುಣಬರುತ್ತದೆ.

ಮಹಾಕುಷ್ಟ (ಲೆಪ್ರಸಿ)

ಈ ರೋಗವಾದರೂ ಪೂರ್ವಜನ್ಮದ ಅದೃಷ್ಟಫಲವೆಂದೆನ್ನಲು ಯಾವ ಅಭ್ಯಂತರವೂ ಇಲ್ಲ. ಈ ರೋಗದಿಂದ ಬಳಲುತ್ತಿರುವ ದುರ್ದೈವಿ ಪ್ರಾಣಿಗಳನ್ನು ಅಲ್ಲಲ್ಲಿ ನೋಡಬಹುದಾಗಿದೆ. ಈ ರೋಗನಿವಾರಣೆಗಾಗಿ ಅಲ್ಲಲ್ಲಿ, ಸರಕಾರದವರು ಆಶ್ರಮಗಳನ್ನು ತೆಗೆದಿದ್ದಾರೆ. ಈ ರೋಗನಿವಾರಣೆಗಾಗಿ

ಹೊಸ ಹೊಸ ಇಂಜಕ್ಶನಗಳು ಹೊರಟಿವೆ. ಆದರೆ ಅವು ಎಲ್ಲರಿಗೂ ಸಾಧ್ಯ- ವಾಗುವದಿಲ್ಲ. ಈ ಕೆಳಗೆ ಬರೆದ ಔಷಧದ ಪ್ರಯೋಗವನ್ನು ಮಾಡಿ ಅನುಭವ ತೆಗೆದುಕೊಂಡು ನಮಗೆ ತಿಳಿಸಬೇಕಾಗಿ ಬಿನ್ನಹ.

ಬಜೆ. ಕೋಷ್ಠ, ಹಳೇಬೆಲ್ಲ. ಹಂಸಪಾದೀ, ಗಂಧಕ, ಸೈಂಧಲವಣ, ಎಕ್ಕೆಯಬಾಲು, ಕಕ್ಕೆಯಬಾಲು, ಕೊಂಡೆ ಕಕ್ಕೆಯಬಾಲು, ಕರಿಜೀರಿಗೆ, ...ಪಲಗ, ನೆಲ್ಲೀಚಿಪ್ಪು, ಅಂಟವಾಳ, ಮುತ್ತಲಬೀಜ, ಚಿತ್ರಮೂಲ, ಕಲ್ಲುಬೇರು, ಈ ಕಲ್ಕ ಪೂಡಿ, ಇವುಗಳನ್ನು ಸಮಪ್ರಮಾಣದಿಂದ ತೆಗೆದುಕೊಂಡು ಸಂಪೂರ್ಣ ಚೂರ್ಣ ತಾಮ್ರದ ಪಾತ್ರದಲ್ಲಿ ಹಾಕಬೇಕು. ಪ್ರತಿದಿನ ಬೆಳಿಗ್ಗೆ ಕಲಿಸಿಕೊಂಡು ಕಣಗಲೆ ತೊಪ್ಪಲ ರಸ, ಮುತ್ತಲ ಎಲೆ ರಸ, ಮುಂಗುಸಿ ತೊಪ್ಪಲ ರಸ, ಬೇವಿನ ರಸಗಳನ್ನು ಕೂಡಿಸಬೇಕು. ಆ ಮೇಲೆ ತಾಮ್ರದ ಪಾತ್ರೆ ಅಥವಾ ಹಾಳೆಗಳಿಂದ ೩-೪ ತಾಸು ತಿಕ್ಕಬೇಕು. ಅನಂತರ ನೆರಳಲ್ಲಿ ಒಣಗಿಸಿ ಬಾಟ್ಲಿಯಲ್ಲಿ ತೆಗೆದು ಇಡಬೇಕು.

ಬೆಳಿಗ್ಗೆ ಮತ್ತು ಸಾಯಂಕಾಲ ೩-೪ ಗುಂಜಿ ನೆಲ್ಲೀಕಾಯಿರಸದಲ್ಲಿ ತೆಗೆದುಕೊಳ್ಳಬೇಕು. ಊಟದ ನಂತರ ಮಹಾಮಂಜಿಷ್ಠಾದಿ ಕಷಾಯವನ್ನು ತೆಗೆದುಕೊಳ್ಳಬೇಕು. ಮೇಲೆ ಹಚ್ಚಲಿಕ್ಕೆ ಚಾಲಮೋಗ್ರಾ ತೈಲವನ್ನು ಉಪಯೋಗಿಸಬೇಕು. ಇದು ಸಾಂಸರ್ಗಿಕ ಬೇನೆ. ಈ ಬೇನೆಯವರು, ಊರ ಹೊರಗೆ ಏಕಾಂತಿಯಾಗಿ ಇರಬೇಕು.

---

೯ ಕ್ಷುದ್ರರೋಗಗಳು

ತಲೆಶೂಲಿ - ಅರತಲೆಶೂಲಿ— (೧) ಹುಲಗಲೀ ಬೀಜವನ್ನು ನೀರಿನಲ್ಲಿ ತೆಯ್ದು ಅದರೊಳಗೆ ಅರ್ಧ ಗುಂಜಿಯಷ್ಟು ಬೆಲ್ಲ ಕೂಡಿಸಿ, ಸೂರ್ಯೋದಯದ ಮೊದಲು ಮೂಗಿನ ಎರಡೂ ಹೊರಳಿಗಳಲ್ಲಿ ೨-೩ ಹನಿ ಹಾಕಬೇಕು. ಈ ಪ್ರಕಾರ ೩-೪ ದಿವಸ ಮಾಡುವದು.

(೨) ನೆಲ್ಲೀಚಿಪ್ಪು, ಬದಾಮು, ಸುಂಠಿ, ನೀರಿನಲ್ಲಿ ತೆಯ್ದು ಅರ್ಧಗುಂಜಿ ಬೆಲ್ಲ ಕೂಡಿಸಿ ಮೂಗಿನೊಳಗೆ ೨-೨ ಹನಿ ಹಾಕುವದು.

(೩) ಯಾಲಕ್ಕಿ ಪುಡಿ ೪ ಗುಂಜಿ, ಕ್ವಿನಾಯಿನ್ ಅರ್ಧ ಗುಂಜಿ, ಸಕ್ಕರೆ-ಯೊಡನೆ ತೆಗೆದುಕೊಂಡು ಮೇಲೆ ಬಿಸಿನೀರಿನಲ್ಲಿ ಲಿಂಬಿಸರಬತ್ತು ಕುಡಿಯಬೇಕು.

(೪) ನವಸಾಗರ ೩ ಗುಂಜಿ, ಕರ್ಪೂರ ಅರ್ಧ ಗುಂಜಿ, ಒಂದು ಬಟ್ಟಲು ನೀರಿನಲ್ಲಿ ಕೂಡಿಸಿ ಕುಡಿಯುವದು.

(೫) ಮಲಬದ್ಧತೆ ಇದ್ದರೆ, ಸಾರಕ ಔಷಧ ತೆಗೆದುಕೊಳ್ಳುವದು.

ಕುರು

ಕೋಷ್ಠ ಶುದ್ಧಿಗಾಗಿ ಮೊದಲು ಔಡಲ ಎಣ್ಣೆಯನ್ನು ತೆಗೆದುಕೊಳ್ಳಬೇಕು. ಮೇಲೆ ಹಚ್ಚುವದಕ್ಕೆ— ಲಾಳ ೪, ಮೇಣ ೪, ಎಳ್ಳೆಣ್ಣೆ ೪, ತುಪ್ಪ ೩ ಈ ಪ್ರಕಾರ ತೆಗೆದುಕೊಂಡು, ಒಂದು ಕಬ್ಬಿಣ ಸವುಟಿನಲ್ಲಿ ಹಾಕಿ ತುಸು ಬಿಸಿ ಮಾಡಬೇಕು. ನಂತರ ಚೆನ್ನಾಗಿ ಕೂಡಿಸಬೇಕು. ಇದನ್ನು ಒಂದು ಅರಿವೆ ತುಂಡಿಗೆ ಹಚ್ಚಿ ಕುರುವಿನ ಮೇಲೆ ಇಟ್ಟು ಕಟ್ಟಬೇಕು. ಈ ರೀತಿಯಾಗಿ ಮಾಡುವದರಿಂದ ನೋವು ಕಡಿಮೆಯಾಗಿ ಕುರು ಒಡೆಯುತ್ತದೆ.

ಕುರು ಒಡೆದ ನಂತರ, ಕಣಕದ ಅಥವಾ ಅಗಸೀ ಪೋಟೀಸು ಹಾಕಬೇಕು. ಇದರಿಂದ ಕೀವು ಬಸಿಯುವದು.

ಕೀವು ಬಸಿದು ಹೋದನಂತರ, ಔಡಲ ಎಣ್ಣೆಯಲ್ಲಿ ಅರಳೆಯನ್ನು ತೊಯಿಸಿ ಕುರುವಿನ ಮೇಲೆ ಇಟ್ಟು ಕಟ್ಟಬೇಕು. ಪ್ರತಿದಿನ ಹೊಸ ಅರಳೆಯನ್ನು ಇಡುತ್ತ ಹೋಗಬೇಕು. ಅವಶ್ಯವೆನಿಸಿದಲ್ಲಿ ತ್ರಿಫಲಾಕಷಾಯದಿಂದ ತೊಳೆಯಬೇಕು. ಹಳೇ ತುಪ್ಪವನ್ನು ಅರಿವೆಗೆ ಹಚ್ಚಿ ಕುರುವಿಗೆ ಹಚ್ಚುವದರಿಂದಲೂ ಕುರು ಮಾಯುತ್ತದೆ. ಹೊಟ್ಟೆಯಲ್ಲಿ ಲೋಹಭಸ್ಮವನ್ನು ೧-೨ ಗುಂಜಿ ತುಪ್ಪ ಸಕ್ಕರೆಯಲ್ಲಿ ಕೊಡಬೇಕು. ಸಾಬೂನಿನ ಗಟ್ಟಿ ರಾಡಿಯಲ್ಲಿ ತುಸು ಸಕ್ಕರೆ ಕೂಡಿಸಿ, ಕುರುವಿಗೆ ಲೇಪಿಸಬೇಕು. ಇದರಿಂದಲೂ ಗುಣವಾಗುತ್ತದೆ.

ಕಾಲು ಒಡೆಯುವದು

ಬಿಳೇ ಹಾರಿವಾಳದ ಒಳತೊಗಟೆಯ ಚೂರ್ಣವನ್ನು ೪-೮ ಗುಂಜಿ, ತುಪ್ಪ ಸಕ್ಕರೆಯಲ್ಲಿ ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

ಮೇಲೆ ಹಚ್ಚಲಿಕ್ಕೆ— ರಾತ್ರಿ ಮಲಗುವ ಮುಂಚೆ ಬಿಸಿನೀರಿನಿಂದ ಸಾಬೂನು ಹಚ್ಚಿ ಕಾಲು ತೊಳೆದುಕೊಂಡು, ಒರೆಸಿಕೊಳ್ಳಬೇಕು. ಅನಂತರ, ಸೋಲ ಮೇಣವನ್ನು ಬಿಸಿಮಾಡಿ, ಒಡೆದ ಕಾಲಿಗೆ ಹಚ್ಚಿಕೊಳ್ಳುವದು.

ಗ್ರಂಥಿ (ಗಂಟು)

ಶರೀರದ ಮೇಲ್ಭಾಗದಿಗೆ ಗಂಟುಗಳಾದರೆ-ಬಾಳ, ಗಂಧಾಬಿರೋಜಾ ಗುಗ್ಗುಳಗಳನ್ನು ತೇಯ್ದು ಹಚ್ಚಬೇಕು.

ವ್ರಣಗಳು

ವ್ರಣ ಅಂದರೆ ಹುಣ್ಣು— ಹುಣ್ಣುಗಳಲ್ಲಿ ಕೀವು ಇದ್ದರೆ ಮೊದಲು ಪೋಟೀಸು ಹಾಕಬೇಕು. ಕೀವು ಕಡಿಮೆಯಾದ ನಂತರ ತ್ರಿಫಲಾ ಕಷಾಯದಿಂದ ತೊಳೆದು. ಒರೆಸಿ ಸಂಗಜೀರಿಗೆ ಪುಡಿ ೧ ತೊಲಿ, ಕಾಚು · ½ · ತೊಲಿ ಕರ್ಪೂರ · . ತೊಲಿ. ಈ ಪ್ರಕಾರ ಕೂಡಿಸಿ ವ್ರಣದ ಮೇಲೆ ಉದುರಿಸಿ ಅರಳೆ ಇಟ್ಟು ಕಟ್ಟಬೇಕು.

೨. ಹಳೇ ತುಪ್ಪವನ್ನು ಅರಿವೆಗೆ ಹಚ್ಚಿ ವ್ರಣದ ಮೇಲಿಟ್ಟು ಕಟ್ಟಬೇಕು.

೩. ವ್ರಣಗಳಲ್ಲಿ ಹುಳಗಳಾದರೆ, ತರ್ಪಣತೈಲವನ್ನು ಸಿಂಪಡಿಸಬೇಕು. ಅದರಿಂದ ಹುಳಗಳು ಹೊರಗೆ ಬರುತ್ತವೆ.

೪. ರೋಪಣತೈಲವನ್ನು ಹಚ್ಚುವದರಿಂದಲೂ ವ್ರಣಗಳು ಮಾಯುವವು.

ರೋಪಣತೈಲ ಫಾರ್ಮಸಿಗಳಲ್ಲಿ ದೊರೆಯುವದು.

ವಾಂತಿ ಕಡಿಮೆಯಾಗಲಿಕ್ಕೆ

೧. ಚ. ಫ. ಪ್ರವಾಳವನ್ನು ನೆಲ್ಲೀಪಾಕದಲ್ಲಿ ಕೊಡುವದು. ೨. ನವಿಲುಗರಿ ಸುಟ್ಟು ಜೇನುತುಪ್ಪದಲ್ಲಿ ಕೊಡುವದು. ೩. ಲವಂಗದ ಚಹಾ ಕೊಡುವದು. ಅರ್ಧತಾಸಿಗೊಮ್ಮೆ ೧ ೨ ಚಮಚೆ ಕೊಡುವದು.

ವಾಂತಿಯಾಗಲಿಕ್ಕೆ

೧. ೧—೨ ಚಮಚೆ ಸಾಸಿವೆ ಅರೆದು ಕುಡಿಸುವದು. ೨. ಮುಗ್ಗಾರಿಕಾಯಿಯನ್ನು ಅರೆದು ಕೊಡುವದು. ೩. ಎಂಟು ಚಮಚೆ ನೀರಿನಲ್ಲಿ ೨ ಗುಂಜಿ ತುತ್ತಿ ಹಾಕಿ ಇಡಬೇಕು. ಪ್ರತಿ ಹತ್ತು ಮಿನಿಟಿಗೆ ಒಂದು ಚಮಚೆ ಕೊಡುವದು.

ಇಂದ್ರಲುಪ್ತ (ತಿಗಳಿ ತಿಂದದ್ದು)

ಇಂದ್ರಲುಪ್ತ ಅಂದರೆ ಕೂದಲು ಉದುರುವದು.

(೧) ಕಹಿಪಡವಲದ ಎಲೆಯ ರಸವನ್ನು ಹಚ್ಚಬೇಕು.

(೨) ಬೇಲೀ ಓಪಲ (ಸಿರಸಿಯ ಕಡೆಗೆ ಸಿಗುತ್ತದೆ) ದ ಬೇರನ್ನು ಲಿಂಬೀ ರಸದಲ್ಲಿ ತೆಯ್ದು, ಅದರಲ್ಲಿ ಹಂಡೇದ ಕರಕು ಚನ್ನಾಗಿ ಕೂಡಿಸಿ ಆ ಭಾಗಕ್ಕೆ ಹಚ್ಚಬೇಕು.

(೩) ರೋಹಿಷ ತೃಣದ ಎಣ್ಣೆಯನ್ನು ಹಚ್ಚಬೇಕು.

(೪) ಪಾರಿಜಾತಕದ ಬೀಜವನ್ನು ನೀರಿನಲ್ಲಿ ತೆಯ್ದು ಹಚ್ಚಬೇಕು.

ಉಗುರುಸುತ್ತು

ಅರಿಷಿಣವನ್ನು ತೆಯ್ದು ಅದರೊಳಗೆ ಅಳಲೇಕಾಯಿಯ ಸೂಕ್ಷ್ಮಚೂರ್ಣ ಕೂಡಿಸಿ ಬಿಬಣಿಂಬಿನಲ್ಲಿ ಹಾಕಿ ಕಿಶ್ಯಬೇಕು. ಅನಂತರ ಉಗುರುಸುತ್ತು ಆದ ಭಾಗಕ್ಕೆ ಲೇಪಿಸಿ, ವಿಳೇದೆಲೆ ಇಟ್ಟು ಕಟ್ಟಬೇಕು.

ಅಂಡವೃದ್ಧಿ

ಅಂಡವೃದ್ಧಿಯೆಂದರೆ ತರಡುಬೀಜಗಳು ದೊಡ್ಡವಾಗುವವು. ತ್ರಿಫಲಾ ಕಷಾಯದಲ್ಲಿ ಗೋಮೂತ್ರ ಕೂಡಿಸಿ ಕುಡಿಯಲಿಕ್ಕೆ ಕೊಡಬೇಕು. ದಿನಕ್ಕೆ ಎರಡು ಸಲ.

ಯೋಗರಾಜ ಗುಗ್ಗುಲವನ್ನು ರಾಸ್ನಾ ಸಪ್ತಕ ಕಷಾಯದಲ್ಲಿ ಕೊಡುವದು. ಚಂದ್ರಪ್ರಭಾ ಗುಳಿಗೆಗಳನ್ನು ಆಕಳಹಾಲಿನಲ್ಲಿ ಕೊಡುವದು.

ನಾರಾಯಣತೈಲವನ್ನು ಅಂಡಕ್ಕೆ ಹಚ್ಚಿ ಮೇಲೆ ಅರಳೆಯನ್ನಿಟ್ಟು ಲಂಗೋಟಿ ಹಾಕಬೇಕು.

ಹಸೀ ತಂಬಾಕದ ಎಲೆಗಳನ್ನು ಅಥವಾ ಒಣಗಿದ ತಂಬಾಕದ ಎಲೆಗಳನ್ನು ತೊಯಿಸಿ ಅಂಡದ ಸುತ್ತುಮುತ್ತು ಇಟ್ಟು ಲಂಗೋಟಿ ಹಾಕಬೇಕು.

ಲಂಗೋಟಿಯನ್ನು ಯಾವಾಗಲೂ ಉಪಯೋಗಿಸಬೇಕು. ಮಲಬದ್ಧತೆಯಾಗದಂತೆ ಸಾರಕ ಚೂರ್ಣ ತೆಗೆದುಕೊಳ್ಳುವದು.

ಮೂಗು ಒಡೆಯುವದು

ದಾಳಿಂಬಹೂವಿನ ರಸ ಅಥವಾ ಎಳೇ ಕರಕಿ ರಸಗಳ ೩-೪ ಹನಿಗಳನ್ನು ಮೂಗಿನಲ್ಲಿ ಹಾಕುವದು. ಬೆಳಿಗ್ಗೆ ಮತ್ತು ಸಾಯಂಕಾಲ ಮೂಗಿನ ಮೇಲೆ ತಣ್ಣೀರಿನ ಪಟ್ಟಿಯನ್ನು ಇಡುವದು.

ಕಾಲು ಒಡೆದರೆ

೧. ವಿಶ್ರಾಂತಿಯನ್ನು ಕೊಡಬೇಕು. ೨. ಆಗಾಗ ತಣ್ಣೀರಿನ ಪಟ್ಟಿಯಿಂದ ಕಟ್ಟಬೇಕು. ೩. ಚಂದೂಗಿಡದ ತೊಪ್ಪಲ ಅರೆದು ಹಚ್ಚಿ ಕಟ್ಟಬೇಕು. ೪. ನೀರಿನಲ್ಲಿ ತುಸು ನವಸಾಗರ ಹಾಕಿ, ಆ ನೀರಿನಲ್ಲಿ ಅರಿವೆಯನ್ನು ತೋಯಿಸಿ ಅದನ್ನು ಒಳೆದ ಭಾಗಕ್ಕೆ ಸುತ್ತಬೇಕು. ೫. ಟೆಂಗಿನ ಕಾಯಿ ಒಡೆದು ಅದರಲ್ಲಿ ತುಸು ಅರಿಸಿನಪುಡಿ ಹಾಕಿ ಒಲೆಯಲ್ಲಿ ಕಟ್ಟಿ ಅದರ ಕಾವು ಕೊಡಬೇಕು.

ಸ್ವಪ್ನಾವಸ್ಥೆ

೧. ಹೊನ್ನವರಿ ಹೂವಿನ ಚೂರ್ಣದಲ್ಲಿ ಹಾಲು ಸಕ್ಕರೆ ಕೂಡಿಸಿ ಕೊಡುವದು. ೨. ಮೀರಾಸಾನಿ ಅಜವಾನ ೨-೪ ಗುಂಜಿ ನೆಗ್ಗಿಲಮುಳ್ಳಿನ ಪುಡಿ ೨-೪ ಗುಂಜಿ ತುಪ್ಪ ಸಕ್ಕರೆಯಲ್ಲಿ ಕೊಡುವದು. ೩. ಶಿಲಾಜಿತು, ವಂಗಭಸ್ಮ, ಪ್ರವಾಳ, ಒಂದೊಂದು ಗುಂಜಿ. ಅಮೃತಸತ್ವ ೩ ಗುಂಜಿ ಕೂಡಿಸಿ, ದಾಳಿಂಬ ಪಾಕಿನಲ್ಲಿ ದಿನಕ್ಕೆ ೨ ಸಲ ಕೊಡುವದು. ೪. ಚಂದ್ರಪ್ರಭಾ, ಗೋಕ್ಷುರಾದಿ ಗುಗ್ಗುಳಗಳನ್ನು ಆಕಳ ಹಾಲಿನಲ್ಲಿ ತೆಗೆದುಕೊಳ್ಳುವದು. ೫. ಚಂದನಾದಿವಟಿ, ಚಂದನಾಸವಗಳನ್ನು ತೆಗೆದುಕೊಳ್ಳುವದು. ೬. ಒದ್ದೆ ಲಂಗೋಟಿಯನ್ನು ಮಲಗುವ ಮೊದಲು ೧೫-೨೦ ಮಿನೀಟು ಹಾಕಿಕೊಳ್ಳುವದು. ಉಷ್ಣಪೇಯ, ರಾತ್ರಿ ಜಾಗರಣೆ, ಖಾರ, ಕರಿದಪದಾರ್ಥಗಳನ್ನು ಬಿಟ್ಟುಬಿಡಬೇಕು.

ಪೆಟ್ಟುಹತ್ತಿ ಬಾವು ಕೂಡಿ ಇದ್ದರೆ

೧. ಕೊಬ್ಬರಿ ಎಣ್ಣೆಯನ್ನು ಹಚ್ಚಿ, ಉಪ್ಪಿನ ಕಾವು ಕೊಡಬೇಕು. ಮೇಲೆ ಅರಳೆಯನ್ನು ಇಟ್ಟು ಕಟ್ಟಬೇಕು.

೨. ಸಾಬೂಣದ ನೀರಿನಲ್ಲಿ ಕೇರು ಕೆಯ್ದು ಪೆಟ್ಟುಹತ್ತಿದ ಭಾಗಕ್ಕೆ ಒಂದು ದಪ್ಪ ಕಡ್ಡಿಗೆ ಅರಳೆಯನ್ನು ಸುತ್ತಿ ಅದರಿಂದ ಲೇಪನಮಾಡಬೇಕು. ಆ ಲೇಪವು ಸ್ವಲ್ಪವೇಳೆಯಲ್ಲಿಯೇ ಒಣಗುವದು. ಒಂದು ವೇಳೆ ಒಣಗದೆ ಇದ್ದರೆ, ಅದರ ಮೇಲೆ ಬೂದಿಯನ್ನು ಉದುರಿಸಬೇಕು. ಇದರಿಂದ ಬಾವು ನೋವು ಕಡಿಮೆಯಾಗುತ್ತದೆ. ಒಮ್ಮೊಮ್ಮೆ ಆ ಭಾಗದಲ್ಲಿ ಬೊಕ್ಕೆಗಳು ಏಳುವ ಸಂಭವವಿರುತ್ತದೆ. ಹಾಗಾದಲ್ಲಿ ಕೊಬ್ಬರಿ ಎಣ್ಣೆಯನ್ನು ಹಚ್ಚಬೇಕು.

ನಾರು

೧. ಪಪಾಯಿ ಎಲೆಯ ರಸದಲ್ಲಿ ಹುಸು ಅಫು ಮಿಶ್ರಮಾಡಿ ನಾರು ಆದ ಸ್ಥಳಕ್ಕೆ ಹಚ್ಚಬೇಕು. ನಾರು ಹೊರಗೆ ಬರಲು ಸಹಾಯವಾಗುವದು. ೨. ಕರೇಲಕ್ಕಿತೊಪ್ಪಲ ರಸ ೨-೪ ಚಮಚೆ ಜೇನುತುಪ್ಪ ಕೂಡಿಸಿ ಕೊಡುವದು. ಲಕ್ಕೀತೊಪ್ಪಲ ಬಿಸಿಮಾಡಿ ಕಾಸಬೇಕು. ೩. ಹಪ್ಪಳಖಾರ, ಅರ್ಧದಿಂದ ಒಂದು ಮಾಸಿ ಕೆನೆಮೊಸರಿನಲ್ಲಿ ಕೊಡುವದು. ೪. ಫಟಿಕ ಅರ್ಧದಿಂದ ಒಂದು ಮಾಸಿ ನೀರಿನಗೂಡ ದಿನಕ್ಕೆ ೨ ಸಲ ಕೊಡುವದು. ಈ ಎಲ್ಲ ಔಷಧಗಳನ್ನು ಕನಿಷ್ಠ ಒಂದು ಸಪ್ತಾಹ ಕೊಡಬೇಕು.

---

೧೦ ಅರ್ಬುದ

ಅರ್ಬುದವೆಂದರೆ ಕಾನ್ಸರ. ಕಾನ್ಸರ ರೋಗನಿವಾರಣೆಗಾಗಿ ಅನೇಕ ಕೋಟಿ ರೂಪಾಯಿಗಳು ವೆಚ್ಚವಾಗಿವೆ. ಸಂಶೋಧನೆ ಇನ್ನೂ ನಡೆದಿವೆ. ನಾವು ನಮ್ಮ ಪ್ರಾಚೀನ ಪದ್ಧತಿಗನುಸರಿಸಿ ಈ ಔಷಧ ಬರೆದಿರುವೆವು. ಇದನ್ನು ಉಪಯೋಗ ಮಾಡಿಕೊಳ್ಳಲು ಏನೂ ಅಡ್ಡಿ ಇಲ್ಲ.

೧. ಬನಫಶಹಾದ ಕಷಾಯವನ್ನು ದಿನಕ್ಕೆ ಎರಡು ಸಲ ಕೊಡುವದು.
೨. ಮೇಲೆ ಬನಫಶಹಾ ತೆಯ್ದು ಹಚ್ಚಬೇಕು.
೩. ಕಾನ್ಸರ ತೊಳೆಯುವದಕ್ಕಾಗಿ ಬನಫಶಹಾದ ಪಂಚಾಂಗದ ಕಷಾಯ ಮಾಡಿ ಉಪಯೋಗಿಸುವದು.

೧೧ ಸಾಂಸರ್ಗಿಕ ರೋಗಗಳು

ಗೊಬ್ಬರ

ಮೊದಲು ಕಣ್ಣು ಕೆಂಪಗಾಗಿ ಜ್ವರ ಪ್ರಾರಂಭವಾಗುತ್ತವೆ. ಸಾಮಾನ್ಯವಾಗಿ ಜ್ವರದ ಉಷ್ಣತೆಯು ಹೆಚ್ಚು ಇರುತ್ತದೆ. ನಾಲ್ಕನೇ ದಿವಸ ಅಥವಾ ಐದನೇ ದಿವಸ ಗೊಬ್ಬರಗಳು ಒಣ ಬಕ್ಕೆಯ ರೂಪದಿಂದ ಮೋರೆಯ ಮೇಲೆ ಕಾಣಹತ್ತುವವು. ಮುಂದೆ ಒಂದೆರಡು ದಿನಗಳಲ್ಲಿ, ಆ ಬಕ್ಕೆಗಳು ಮೈತುಂಬೆಲ್ಲ ಹಬ್ಬುವವು.

ಗೊಬ್ಬರದ ಜ್ವರದಿಂದ ರೋಗಿಗಳಿಗೆ ಅಂತರ್ದಾಹವಾಗಿ ಸಂಕಟವಾಗುತ್ತದೆ. ಆಗ ಶತಾವರಿ, ಮಸೂರಗಳ ಕಷಾಯವನ್ನು ಅಥವಾ ಹವೀಜ, ಮಸೂರಗಳ ಕಷಾಯವನ್ನು ಸಕ್ಕರೆ ಹಾಕಿ ಕೊಡಬೇಕು.

ಗೊಬ್ಬರದಲ್ಲಿ ವಿಶೇಷವಾಗಿ ಕಫದೋಷವು ಪ್ರಬಲವಾಗಿರುತ್ತದೆ. ಅದು ಸಾಮ್ಯವಿದ್ದಲ್ಲಿ ಗಂಟಲದಲ್ಲಿ ಸುತ್ತಾಡುತ್ತಿರುವದು. ಹೆಚ್ಚಾದರೆ ಪುಪ್ಪುಸದಲ್ಲಿ ಅಥವಾ ಶ್ವಾಸನಲಿಕೆಗಳಲ್ಲಿ ಸೇರಿ, ಅಗ್ನಿದಾಹ, ಪಾಕ, ಶೋಥ ಮುಂತಾದ ವಿಕಾರಗಳನ್ನು ಹುಟ್ಟಿಸಬಹುದು. ಕಾರಣ ಗೊಬ್ಬರವು ಅಲ್ಪ ಬೇನೆಯೆಂದು ತಿಳಿದು ಅಲಕ್ಷಿಸಬಾರದು.

೧. ತಾರೀಕಾಯಿ, ಜೇಷ್ಠಮಧು, ಹಿಪ್ಪಲಿ, ಕಲ್ಲುಸಕ್ಕರೆಗಳ ಕಷಾಯವನ್ನು ಕೊಡಬೇಕು.

೨. ಶೃಂಗ್ಯಾದಿ ಚೂರ್ಣವನ್ನು ಜೇನುತುಪ್ಪದಲ್ಲಿ ೩ ಸಾರೆ ಕೊಡುವದು.

೩. ಗುಳ್ಳ, ನೆಲಗುಳ್ಳ, ದೇವದ್ವಾರ, ಹವೀಜ, ಸುಂಠಿಗಳ ಕಷಾಯವನ್ನು ಕೊಡಬೇಕು.

ಕಫವು ಹೆಚ್ಚಾಗಿ ಪುಪ್ಪುಸಗತವಾದರೆ, ರೋಗಿಗೆ ಬಹಳ ಕಷ್ಟವಾಗುತ್ತದೆ. ಇಂಥ ಪ್ರಸಂಗದಲ್ಲಿ ದಿನಕ್ಕೆ ೩-೪ ಸಲ ಅಗಸೀ ಪೋಟೀಸು ಹಾಕಬೇಕು. ಅಥವಾ ಎದೆ ಬೆನ್ನುಗಳಿಗೆ ಕರ್ಪೂರ ಎಣ್ಣೆಯನ್ನು ಹಚ್ಚಿ ಅಜವಾನದ ತವಡಿನ ಗಂಟಿನಿಂದ ಕಾಸಬೇಕು. ಮತ್ತು ಗಂಟುಭಾರಂಗಿ, ಅಮೃತಬಳ್ಳಿ, ಜೇಕಿನಗಡ್ಡೆ, ದೇವದ್ವಾರ, ಅಡುಸಾಲ, ಶುಂಠಿ, ಹಿಪ್ಪಲಿ, ಕೋಷ್ಠ ಇವುಗಳ ಕಷಾಯವನ್ನು ಕೊಡಬೇಕು.

೪. ಮಲಶುದ್ಧಿಯಾಗದಿದ್ದರೆ ಎನಿಮಾ ಕೊಡಬೇಕು. ನ್ಯೂಮೋನಿಯಾ ಆಗದಂತೆ ಕಾಳಜಿ ತೆಗೆದುಕೊಳ್ಳಬೇಕು.

ಪಥ್ಯ : ಅರಳ ಹಾಲು, ಭತ್ತರಳುಕುದಿಸಿದ ನೀರು ಬಾರ್ಲಿ ನೀರು ಇವು ಕೂಸುಗಳಿಗಾಗಿ. ಸ್ವಲ್ಪ ದೊಡ್ಡವರಿದ್ದರೆ, ಅಕ್ಕಿಯ ತಿಳಿಗಂಜಿ, ಕಾಫಿ, ಕುಡಿಯಲಿಕ್ಕೆ ಬಿಸಿನೀರು. ಪಥ್ಯೇದು. ಅಪಥ್ಯ — ತಂಪಪದಾರ್ಥಗಳು, ಹಾಕುಲಪದಾರ್ಥಗಳು.

ಮೈಲಿಬೇನೆ

ಪ್ರಾರಂಭದಲ್ಲಿ ತೀವ್ರಜ್ವರ, ಮೈತಿಂಡಿ, ಮೈಕೈ ನೋವು, ಗ್ಲಾನಿ, ಅರುಚಿ, ತ್ವಚೆಗೆ ಬಾವು, ತ್ವಚೆಯು ಕೆಂಪಗಾಗುವದು, ಕಣ್ಣು ಕೆಂಪಗಾಗುವವು, ಜ್ವರಗಳು ಮೂರನೇ ದಿವಸ ತುಸು ಕಡಿಮೆಯಾಗುವವು. ಅನಂತರ ಮೈಮೇಲೆ ಸಾಸಿವೆಕಾಳಿನಂಥ ಕೆಂಪು ಬೊಕ್ಕೆಗಳು ಮೈತುಂಬ ಸುರಿಯುವವು. ನಂತರ ಪುನಃ ಜ್ವರಗಳು ಅತಿ ವೇಗದಿಂದ ಬರುವವು. ೮-೯ ದಿವಸಗಳ ಸುಮಾರಕ್ಕೆ ಆ ಬೊಕ್ಕೆಗಳಲ್ಲಿ ಕೀವು ತುಂಬಿಕೊಳ್ಳುತ್ತದೆ. ಇದೇ ಸಮಯದಲ್ಲಿ ವಾತಪ್ರಕೋಪದಿಂದ ರೋಗಿಯು ಒಮ್ಮೊಮ್ಮೆ ಮರಣಹೊಂದುವ ಸಂಭವವಿರುತ್ತದೆ. ಒಂದು ವೇಳೆ ಬದುಕಿದರೆ, ಜ್ವರಗಳು ಕಡಿಮೆಯಾಗುತ್ತ ಬರುವವು. ಮತ್ತು ಮೈಲಿಗಳು ಹಕ್ಕಳಿಗಟ್ಟುವವು. ಜ್ವರವು ಹೆಚ್ಚಾದಲ್ಲಿ, ಹಣೆಗೆ ತಣ್ಣೀರಿನ ಪಟ್ಟಿಯನ್ನು ಹಾಕಬೇಕು. ಭೇದಿಯಾಗದೆ ಇದ್ದಲ್ಲಿ, ಸೌಮ್ಯ ರೇಚನವನ್ನು ಕೊಡಬೇಕು. ಕಣ್ಣುಗಳನ್ನು ಬೋರಿಕ್ ಲೋಶನದಿಂದ ತೊಳೆಯಬೇಕು.

ಕಷಾಯಗಳು— ಅಮೃತಬಳ್ಳಿ, ಜೇಷ್ಠಮಧು, ದೀಪದ್ರಾಕ್ಷಿ, ಹವೀಜ, ದಾಳಿಂಬತೊಗಟೆ, ಇವುಗಳ ಕಷಾಯವನ್ನು ದಿನಕ್ಕೆ ೨-೩ ಸಲ ಕೊಡಬೇಕು. (೨) ದಶಮೂಲಗಳು, ರಾಸ್ನಾ, ನೆಲ್ಲೀಕಾಯಿ, ಬಾಳದಬೇರು, ಧಮಾಸಾ, ಅಮೃತಬಳ್ಳಿ, ಹವೀಜ, ಜೇಕಿನಗಡ್ಡೆ ಇವುಗಳ ಕಷಾಯವನ್ನು ದಿನಕ್ಕೆ ೨-೩ ಸಲ ಕೊಡುವದು. ಇದರಿಂದ ಜ್ವರ, ಕೆಮ್ಮು, ದಾಹ ಈ ವಿಕಾರಗಳು ಕಡಿಮೆಯಾಗುತ್ತವೆ. ಸ್ವಚ್ಛತೆಯ ಬಗ್ಗೆ ವಿಶೇಷ ಎಚ್ಚರಿಡಬೇಕು. ರೋಗಿಯ ಹತ್ತರ ಪರಿಚಾರಕರ ಹೊರತು ಬೇರೆಯವರು ಹೋಗಬಾರದು.

ಪಥ್ಯ:— ಹಳೇ ಅಕ್ಕಿಯ ತಿಳುವಾದ ಗಂಜಿ, ದ್ರಾಕ್ಷಿ, ದಾಳಿಂಬ, ಮೋಸಂಬೀರಸ, ಭತ್ತದರಳು ಕುದಿಸಿದ ನೀರು, ಆಕಳ ಹಾಲು, ಆಕಳ ಮಜ್ಜಿಗೆ.

ಗಣಜಲಿ

ತ್ವಗ್ಗತ, ಮಸೂರಿಕಾದ ಲಕ್ಷಣಗಳು ಇದರಲ್ಲಿ ಇರುತ್ತವೆ. ಮೊದಲು ಸ್ವಲ್ಪ ಜ್ವರಬಂದು ಮೈಮೇಲೆ ಬೊಕ್ಕೆಗಳು ಏಳುವವು. ನಂತರ ಜ್ವರ

ಹೆಚ್ಚಾಗಿ ಬೊಕ್ಕೆಗಳು ನೀರಿನಿಂದ ತುಂಬಿಕೊಂಡಂತಾಗುತ್ತವೆ. ಮುಂದೆ ೨-೩ ದಿವಸಗಳಲ್ಲಿಯೇ ಒಣಗಿದಂತಾಗುವವು. ಮತ್ತೆ ಮೇಲಕಡೆಗೆ ಏಳುವವು. ಬೊಕ್ಕೆಗಳು ಕಪ್ಪಾದಂತಾಗಿ ಕಲೆಗಳು ಉಳಿಯುತ್ತವೆ. ಆ ಕಲೆಗಳು ಕೆಲವು ದಿವಸಗಳ ನಂತರ ಇಲ್ಲದಂತಾಗುತ್ತವೆ.

ಸೀತಾಳಿಯು ಉಗ್ರಸ್ವರೂಪದ ಜಡ್ಡಲ್ಲ. ಸೀತಾಳಿಯ ಬೊಕ್ಕೆಗಳಲ್ಲಿ ಕೀವು ತುಂಬುವದು. ಗರಿಷ್ಠ ಎರಡು ಮತ್ತು ಮೂರು ದಿವಸಗಳಲ್ಲಿ ಗುಣವಾಗುತ್ತದೆ. ಇದರಿಂದ ಜೀವಕ್ಕೆ ಅಪಾಯವಿಲ್ಲ. ಇದರ ಬೊಕ್ಕೆಗಳು ಸಿಡುಬಿನ ಗೊಬ್ಬರಗಳಂತೆ ನೀರು ತುಂಬಿ ಇರವು, ಒಂದೊಂದು ಇನ್ನೊಂದು ಆಗುತ್ತವೆ.

ಇದು ದೊಡ್ಡವರಿಗೆ ಆಗುವದು ಬಹಳ ಕಡಿಮೆ. ಚಿಕ್ಕಮಕ್ಕಳಿಗೆ ವಿಶೇಷವಾಗಿ ಆಗುತ್ತಿರುತ್ತದೆ. ಮುಖ್ಯವಾಗಿ ವಿಶ್ರಾಂತಿಯನ್ನು ಕೊಟ್ಟು ಗೊಬ್ಬರಕ್ಕೆ ಬೇಕಾದ ಚಿಕಿತ್ಸೆ ಮಾಡಬೇಕು.

---

೧೨ ದಂತರೋಗಗಳು

ಹಲ್ಲುನೋವು ಮತ್ತು ಹಲ್ಲೊಸಡುಗಳಿಂದ ರಕ್ತಬರುವದು

(೧) ಸಾಧಾರಣ ಬಿಸಿನೀರಿನಲ್ಲಿ ಫಟಿಕದ ಪುಡಿಯನ್ನು ಹಾಕಿ, ಆ ನೀರಿನಿಂದ ಬಾಯಿಮುಕ್ಕಳಿಸುವದು.

(೨) ತ್ರಿಫಲಾ ಕಷಾಯದಿಂದ ಬಾಯಿಮುಕ್ಕಳಿಸುವದು.

(೩) ನೋವು ಇದ್ದ ಭಾಗದ ಹೊರಬದಿಗೆ ಟರ್ಪಣ ಎಣ್ಣೆಯನ್ನು ಹಚ್ಚಿ ಮುರಿಗೀಕಾವು ಕೊಡುವದು.

(೪) ಲಿಂಬೀರಸದ ಸರಬತ್ತುಮಾಡಿ ಕುಡಿಯುವದು.

(೫) ದಾಲಚಿನ್ನಿ ಅಥವಾ ಲವಂಗದ ಎಣ್ಣೆಯನ್ನು ನೋವು ಇದ್ದ ಭಾಗಕ್ಕೆ ಅರಳೆಯಲ್ಲಿ ಅದ್ದಿ ಹಿಡಿಯುವದು.

(೬) ಹಂಚಿನಮೇಲೆ ಒಂದ ಥರ ಫಟಿಕದಪುಡಿ ಹಾಕಿ, ಅದರಮೇಲೆ ೨-೩ ಕೇರು ಇಟ್ಟು, ಕೇರು ಮುಚ್ಚುವಂತೆ ಪುನಃ ಒಂದು ಥರ ಫಟಿಕದಪುಡಿ

ಹಾಕಬೇಕು. ಅದರಮೇಲೆ ಒಂದು ಪ್ರಣತಿ ಅಥವಾ ಪರಿವಾಣವುಚ್ಚಿ, ಆ ಹಂಚನ್ನು ಒಲೆಯ ಮೇಲಿಟ್ಟು ಕೆಳಗೆ ಸಣ್ಣ ಉರಿ ಹಚ್ಚಬೇಕು. ಸ್ವಲ್ಪ ವೇಳೆಯಲ್ಲಿ ಕೀರು ಮತ್ತು ಘಟಕ ಅರಳು ಆಗುವವು. ಆಗ ಉರಿಯನ್ನು ತೆಗೆದುಬಿಡಬೇಕು. ಆರಿದ ನಂತರ ಅದನ್ನು ಅರೆದು ಬಾಟ್ಲಿಯಲ್ಲಿ ಹಾಕಿ ಇಡಬೇಕು. ಈ ಪುಡಿಯನ್ನು ಹಚ್ಚುವದರಿಂದ ಹಲ್ಲುಬೇನೆ ಮತ್ತು ಹಲ್ಲೊಳಗಿಂದ ರಕ್ತಬರುವದು ಕಡಿಮೆಯಾಗುತ್ತದೆ.

ಹಲ್ಲುಕುರು

ಇದು ವಸಡೆಯಲ್ಲಿ ಆಗುವದು. ಮೊದಲು ಮೇಲ್ಭಾಗಕ್ಕೆ ಎಣ್ಣೆಹಚ್ಚಿ ಕಾಸಬೇಕು. ಪೋಟ್ಯಾಶ ಪರಮ್ಯಾಂಗನೇಟ ಹಾಕಿದ ನೀರಿನಿಂದ ಅಥವಾ ತ್ರಿಫಲಾ ಕಷಾಯದಿಂದ ದಿನಕ್ಕೆ ೩-೪ ಸಲ ಬಾಯಿಮುಕ್ಕಳಿಸುವದು. ಕುರು ತೀರ ಪಕ್ವವಾಗಿದ್ದರೆ ಡಾಕ್ಟರರಕಡೆಗೆ ಹೋಗಿ ಕೊಯಿಸಿಕೊಳ್ಳಬೇಕು.

ಹುಳಕ ಹಲ್ಲು

ಕೆಲವರಿಗೆ ಹಲ್ಲುಗಳಲ್ಲಿ ಹುಳುಕು ಬೀಳುತ್ತವೆ. ಆ ತೂತಿನಲ್ಲಿ ಆಹಾರವು ಸಿಕ್ಕು ನೋವು ಆಗುತ್ತಿರುತ್ತದೆ. ಅಂಥವರು ಹಲ್ಲಿನ ಡಾಕ್ಟರರ ಕಡೆಗೆ ಹೋಗಿ ಅದನ್ನು ತುಂಬಿಸಿಕೊಳ್ಳಬೇಕು. ಇಲ್ಲವೆ ಕಿತ್ತಿಸಿಕೊಂಡುಬಿಡಬೇಕು.

ಅಗಳಾಡುವ ಹಲ್ಲುಗಳನ್ನು ಕಿತ್ತಿಸಿಕೊಳ್ಳಬೇಕೇ ಹೊರ್ತು ಅವನ್ನು ಗಟ್ಟಿಮಾಡುವ ಉದ್ಯೋಗಕ್ಕೆ ಹೋಗಬಾರದು.

ಬಾಯಿಂದ ದುರ್ವಾಸನೆ ಬರುತ್ತಿದ್ದರೆ, ಹಲ್ಲೊಳಗಿಂದ ಕೀವುಬರುತ್ತಿರಬಹುದೆಂದು ತಿಳಿದು ಪರೀಕ್ಷಿಸಿ ನೋಡಬೇಕು. ಆಗ ಪ್ರತಿದಿನ ಉತ್ತಮ ಹಲ್ಲುಪುಡಿಯಿಂದ ಬೆಳಿಗ್ಗೆ ಮತ್ತು ಮಲಗುವಾಗ ಹೀಗೆ ಎರಡು ಸಾರೆ ಹಲ್ಲು ತಿಕ್ಕಿಕೊಳ್ಳಬೇಕು. ತ್ರಿಫಲಾ ಕಷಾಯದಿಂದ ಬಾಯಿಮುಕ್ಕಳಿಸಬೇಕು. ಇಷ್ಟುಮಾಡಿದರೂ ಕೂಡ ವಾಸನೆಬರುವದು ನಿಲ್ಲದಿದ್ದರೆ, ಹಲ್ಲಿನ ಡಾಕ್ಟರರ ಕಡೆಗೆ ಹಲ್ಲುತೋರಿಸಿ, ಅವರ ಸಲಹೆಯಂತೆ ನಡೆಯಬೇಕು.

ಉತ್ತಮ ದಂತಮಂಜನ

[illegible] ೨ ತೊಲಿ, ಮಾಚಕಾಯಿ ೨ ತೊಲಿ, ಅಳಲೇ ಕಾಯಿ ೨ ತೊಲಿ, [illegible] ೮ ತೊಲಿ, ಕೇದಗು ೨ ತೊಲಿ,

ಚಾಕ ೬ ತೊಲೆ, ಇಪ್ಪಲಿಪ್ಪಲಿ ೧ ತೊಲೆ, ಒತ್ತಾಸು ರೀತಿಯಿಂದ ಬೆರೆ- ಸುವದು.

---

೧೩ ಕರ್ಣರೋಗಗಳು

ಕಿವಿಶೂಲೆ

ಕಿವಿಶೂಲೆ.— ಬಳ್ಳೊಳ್ಳಿಯ ಎಸಳುಗಳನ್ನು ಸುಲಿದು ಕುಟ್ಟಿ ಎಳ್ಳೆಣ್ಣೆಯಲ್ಲಿ ಹಾಕಿ ಬಿಸಿಮಾಡಬೇಕು. ಎಸಳು ಬೆಳ್ಳಗಾಗಬೇಕು. ಶೂಲೆ ಇರುವ ಕಿವಿಯಲ್ಲಿ ೪-೫ ಹನಿಗಳನ್ನು ಹಾಕಿಕೊಳ್ಳಬೇಕು. ದಿನಕ್ಕೆ ಎರಡುಸಲ.

(೨) ಕಿವಿಯ ಸುತ್ತಮುತ್ತ ಕೊಬ್ಬರಿ ಎಣ್ಣೆಯನ್ನು ಹಚ್ಚಿ ಬಿಸಿ ನೀರಿನ ಆವಿಯಿಂದ ಕಾಸಬೇಕು.

(೩) ಬಳ್ಳೊಳ್ಳಿರಸ ೧ ತೊಲೆ, ಅಲ್ಲದರಸ ೧ ತೊಲೆ, ಕರಿ ತುಳಸೀ- ರಸ ೧ ತೊಲೆ, ನಿಂಬೆಹಣ್ಣಿನರಸ ೧ ತೊಲೆ, ಇಂಗು ೪ ತೊಲೆ. ತೆಂಗು ಒಡೆದು ತುರಿದು ಅದರ ರಸತೆಗೆದದ್ದು ೨೦ ತೊಲೆ, ಎಲ್ಲ ಕೂಡಿಸಿ ಒಂದು ಬೋಗುಣಿಯಲ್ಲಿ ಅಥವಾ ಬಾಣಲೆಯಲ್ಲಿ ಹಾಕಿ ಸಣ್ಣ ಉರಿಯಮೇಲೆ ಇಡಬೇಕು. ರಸವೆಲ್ಲ ಸುಟ್ಟು ಎಣ್ಣೆ ಉಳಿಯುತ್ತಿಂದರೆ ಉರಿ ಆರಿಸಿಬಿಡ ಬೇಕು. ಎಣ್ಣೆಯು ಆರಿದನಂತರ ಸೋಸಿತೆಗೆದು ಬಾಟ್ಲಿಯಲ್ಲಿ ಇಟ್ಟು ಕಿವಿಶೂಲೆ ಇದ್ದಾಗ ೪-೫ ಹನಿ ಹಾಕಿ ಕಿವಿಯಲ್ಲಿ ಅರಳೆಯನ್ನಿಡಬೇಕು.

ಕಿವಿ ಸೋರುವದು

ಒಂದು ದಪ್ಪಕಡ್ಡಿಗೆ ಅರಳೆಯನ್ನು ಸುತ್ತಿ ಅದರಿಂದ ಕಿವಿಯೊಳಗಿನ ಕೀವು ಎಲ್ಲ ಹೋಗುವಂತೆ ಮೆಲ್ಲನೆ ಒರಸಬೇಕು. ಕಡ್ಡಿಯು ಒಳಗಿನ ಪರದೆಗೆ ತಾಗದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು. ಅನಂತರ ಔಷಧ ಹಾಕಿ ಅರಳೆಯನ್ನಿಡಬೇಕು.

(೧) ಜಾಜಮಲ್ಲಿಗೆ ತೊಪ್ಪಲದರಸ ೧೦ ತೊಲೆ, ಎಳ್ಳೆಣ್ಣೆ ೨॥ ತೊಲೆ. ಎರಡೂ ಕೂಡಿಸಿ, ಒಲೆಯ ಮೇಲೆ ಇಡಬೇಕು. ಸಣ್ಣ ಉರಿಹಚ್ಚಬೇಕು. ರಸವೆಲ್ಲ ಸುಟ್ಟು, ಎಣ್ಣೆ ಉಳಿದನಂತರ ಉರಿ ತೆಗೆದುಬಿಡಬೇಕು. ಆರಿದ

ನಂತರ ಎಣ್ಣೆಯನ್ನು ಸೋಸಿ ಬಾಟ್ಲಿಯಲ್ಲಿ ತೆಗೆದು ಇಡಬೇಕು. ಸೋರುತ್ತಿರುವ ಕಿವಿಯಲ್ಲಿ ಕೀಂವು ಒರೆಸಿ ೪-೫ ಹನಿಗಳನ್ನು ಹಾಕಬೇಕು. ದಿನಕ್ಕೆ ಎರಡುಸಲ.

ಕಿವಿಯಲ್ಲಿ ಕುರು ಆದಾಗ

(೨) ಬಳ್ಳೊಳ್ಳಿ ಹಾಕಿದ ಬಿಸಿ ಎಣ್ಣೆಯನ್ನು ಕಿವಿಯಲ್ಲಿ ಹಾಕಬೇಕು. ಮೇಲೆ ಕಾಸಬೇಕು. ಕುರು ಒಡೆದರೆ ಅರಳೆಯಿಂದ ಮೆಲ್ಲಗೆ ಒರೆಸಿತೆಗೆಯಬೇಕು. ನಂತರ ಜಾಜಿಮಲ್ಲಿಗೆಯ ಎಣ್ಣೆಯನ್ನು ಹಾಕಬೇಕು.

ಕಿವಿ ಕೇಳಿಸುವದು ಕಡಿಮೆ ಆದರೆ — ಕಿವಿಯಲ್ಲಿ ಶಬ್ದವಾಗುತ್ತಿದರೆ ಜಾಜಮಲ್ಲಿಗೆಯ ಎಣ್ಣೆಯನ್ನು ಹಾಕುತ್ತಿರಬೇಕು.

ಕ್ಷಾರತೈಲ, ಬಿಲ್ವತೈಲಗಳ ೩-೪ ಹನಿಗಳನ್ನು ಕಿವಿಯಲ್ಲಿ ಬೆಳಗ್ಗೆ ಮತ್ತು ಸಾಯಂಕಾಲ ಹಾಕಿ ಮೇಲೆ ಅರಳೆಯನ್ನಿಡಬೇಕು.

---

೧೪ ನೇತ್ರರೋಗಗಳು

ಕಣ್ಣುಬರುವದು (ನೇತ್ರಾಭಿಷ್ಯಂದ)

ಕಾಸಿ ಆರಿಸಿ ಸೋಸಿದ ನೀರು ೨|| ತೊಲಿ, ಅದರೊಳಗೆ ತುತ್ತೀದ ಅರಳು ೧ ಗುಂಜಿ, ಫಟಿಕದ ಅರಳು ೨ ಗುಂಜಿ ಕೂಡಿಸಿ, ಸ್ವಚ್ಛ ಬಾಟ್ಲಿಯಲ್ಲಿ ಹಾಕಿ ಬೂಚು ಹಾಕಿ ಇಡಬೇಕು. ಬೆಳಗ್ಗೆ ಮತ್ತು ಸಾಯಂಕಾಲ ೨-೩ ಹನಿ ಕಣ್ಣುಬಂದವರಿಗೆ ಹಾಕಬೇಕು.

ಕಣ್ಣಿನಲ್ಲಿಯ ಹೂವಿಗೆ:— ಬಳೀಗಣಜಲಿಬೇರನ್ನು ಸ್ವಚ್ಛತೊಳೆದು ನೀರಿನಲ್ಲಿ ತೆಯ್ದು ಅರಳೆಯಿಂದ ಹೂವಿಗೆ ಹಚ್ಚುವದು.

ಕಣ್ಣು ಉರಿ:— ಗುಲಾಬಜಲದ ೩-೪ ಹನಿಗಳನ್ನು ಕಣ್ಣಿನಲ್ಲಿ ಹಾಕುವದು. ಮೊಲೆ ಹಾಲಲ್ಲಿ ಅರಳೆಯನ್ನು ತೊಯಿಸಿ, ಕಣ್ಣಿನ ಎವೆಯ ಮೇಲೆ ಇಟ್ಟುಕೊಳ್ಳುವದು.

೧೫ ಸ್ತ್ರೀ ರೋಗಗಳು

ಪ್ರದರ— ಇದರಲ್ಲಿ ಶ್ವೇತಪ್ರದರ-ರಕ್ತಪ್ರದರ ಎಂದು ಎರಡು ಪ್ರಕಾರಗಳಿರುವವು.

ಕಷಾಯ.— ಬಾಳದಬೇರು ·|· ತೊಲಿ, ರಕ್ತಚಂದನ · ತೊಲಿ, ಚಿಕಣಮುಸಲಿ ·|· ತೊಲಿ, ನಾಗಕೇಸರ · ತೊಲಿ, ಅಸ್ಮತಕಲ್ಲ · ತೊಲಿ, ಧಮಾಸಾ ·|· ತೊಲಿ, ಕಲ್ಲಪತ್ರಸಗಿ ·|· ತೊಲಿ, ಲೋಧ್ರ ·|· ತೊಲಿ, ಅತಿವಿಷ · ತೊಲಿ, ಅತಿಮೋಹಕಸ್ತೂರ ·|· ತೊಲಿ, ಜೇಕಿನಗಡ್ಡೆ ·|· ತೊಲಿ, ಇವುಗಳನ್ನು ೪ ತೊಲಿ ನೀರಿನಲ್ಲಿ ಹಾಕಿ, ಅಷ್ಟಮಾಂಶ ಕಷಾಯ ಇಳಿಸಿ ಸೋಸಿ ಸಕ್ಕರಿ ಕೂಡಿಸಿ ತೆಗೆದುಕೊಳ್ಳುವದು.

ಆರ್ತವರೋಗ— ಕಡಿಗ ಆದಾಗ ಅಥವಾ ಆಗುವ ಮೊದಲು ಎಷ್ಟೋ ಹೆಣ್ಣುಮಕ್ಕಳಿಗೆ ಹೊಟ್ಟೆ ಕಡಿಯುತ್ತಿರುತ್ತದೆ. ಆದರಿಂದ ಅವರು ಬಹಳ ಕಷ್ಟಪಡುತ್ತಿರುತ್ತಾರೆ.

೧. ಕುಡೇರಾಸ್ತವಟಿ – ಗಜಗದಬೀಜ (ಹುರಿದು ಮಾಡಿದ ಪುಡಿ) ೧ ತೊಲಿ, ಕುಂಕು, ೧ ತೊಲಿ, ಪಾದೇಲವಣ ·||· ತೊಲಿ, ಇಂಗು (ಹುರಿದದ್ದು) ·||· ತೊಲಿ, ಬಾಲಹಿರಡಾ ೧ ತೊಲಿ, ಇವುಗಳನ್ನು ನುಗ್ಗೀ ಒಳದೋಟಿಯ ರಸದಲ್ಲಿ ೩ ದಿವಸ ಅರೆಯುವದು. ಒಂದು ಮಾಸಿ ಗುಳಿಗೆಗಳನ್ನು ಮಾಡಿ, ಬೆಳಗ್ಗೆ ಮತ್ತು ಸಾಯಂಕಾಲ ಒಂದೊಂದು ಗುಳಿಗೆಯನ್ನು ಬಿಸಿನೀರಿನಸಗೂಡ ತೆಗೆದುಕೊಳ್ಳುವದು. ಈ ಪ್ರಕಾರ ೪೦ ದಿವಸ ಅಥವಾ ಎರಡು ತಿಂಗಳು ತೆಗೆದುಕೊಳ್ಳಬೇಕು.

ಬಹುಸ್ರಾವ — (ಕಡಿಗ) ಹೆಚ್ಚಾಗಿ ಆಗಲಿಕ್ಕೆ. ಲೋಹಭಸ್ಮ, ಹುರಿದ ಇಂಗು, ಕರಿಬಾಳ ಸಮಪ್ರಮಾಣದಿಂದ ಕೂಡಿಸಿ ಇಡಬೇಕು. ೧-೨ ಗುಂಜಿ ಪುಡಿ ಲೋಧ್ರ ಚಕ್ಕೆಯ ಕಷಾಯದಗೂಡ ದಿನಕ್ಕೆ ಎರಡು ಸಲ ತೆಗೆದುಕೊಳ್ಳುವದು. ಈ ಪ್ರಕಾರ ೪೦ ದಿವಸ ತೆಗೆದುಕೊಳ್ಳುವದು.

ಸುಖಪ್ರಸೂತಿ

ದಿನತುಂಬಿದ ಗರ್ಭವತಿಯರಿಗೆ, ಪ್ರಸವಪೂರ್ವದಲ್ಲಿ ಬೇನೆಗಳು

ಪ್ರಾರಂಭವಾಗುವವು. ಆಗ ತೊಂದರೆಯಾಗದೆ ಸುಖದಿಂದ ಹಡೆಯ-ಬೇಕೆಂದು ಕೆಳಗಿನ ಔಷಧವನ್ನು ಕೊಡಬೇಕು.

ಜೇಷ್ಠಮಧುಚೂರ್ಣ ೧ ಮಾಸಿ, ಅಳಲೇಕಾಯಿ ಚೂರ್ಣ ೧ ಮಾಸಿ ಇವೆರಡು ಕೂಡಿಸಿ ಆಕಳ ಹಾಲು ಕಲ್ಲುಸಕ್ಕರೆಯಲ್ಲಿ ಕೂಡಿಸಿ, ಗರ್ಭವತಿಗೆ ಕುಡಿಯಲು ಕೊಡಬೇಕು.

ಬಾಣಂತಿ ಔಷಧ

ಹಡೆದಕೂಡಲೇ ಬಾಣಂತಿಗೆ ಕಸ್ತೂರಿಯನ್ನು ವಿಳೇದೆಲೆಯಲ್ಲಿ ಕೊಡಬೇಕು. ನಂತರ, ಪಂಚಕೋಲದ ಚೂರ್ಣವನ್ನು ಜೇನುತುಪ್ಪದಲ್ಲಿ ಕೊಡಬೇಕು. ಪಂಚಕೋಲ ಚೂರ್ಣವನ್ನು ಹತ್ತು ದಿವಸ ಪೂರ್ಣವಾಗುವವರೆಗೆ ಬೆಳಗ್ಗೆ ಮತ್ತು ಸಾಯಂಕಾಲ ಅರ್ಧದಿಂದ ಒಂದು ಮಾಸಿ ಜೇನುತುಪ್ಪದಲ್ಲಿ ಕೊಡುತ್ತ ಹೋಗಬೇಕು. ಹಿಪ್ಪಲೀ ಹಾಕಿ ಮರಳಿಸಿದ ಆಕಳ ಹಾಲು ಕೊಡಲು ಅಡ್ಡಿಯಿಲ್ಲ.

ಹಿಪ್ಪಲಿ, ಹಿಪ್ಪಲೀಮೂಲ, ಚವಕ, ಚಿತ್ರಮೂಲ, ಶುಂಠಿ ಇವುಗಳಿಗೆ ಪಂಚಕೋಲವೆಂದೆನ್ನುತ್ತಾರೆ. ಹತ್ತು ದಿನಗಳ ನಂತರ, ೪೦ ದಿನಗಳವರೆಗೆ ದಶಮೂಲಾರಿಷ್ಟವನ್ನು ಕೊಡಬೇಕು. ಜನನೇಂದ್ರಿಯವನ್ನು ತೊಳೆಯುವದಕ್ಕೆ — ಪೋಟ್ಯಾಶ ಪರಮಾಂಗನೇಟ ಹಾಕಿದ ನೀರು ಅಥವಾ ಜಾಲೀ ಒಳದೊಗಟೆಯ ಕಷಾಯವನ್ನು ಉಪಯೋಗಿಸುವದು.

ಮೊಲೆಹಾಲು ಬರಲಿಕ್ಕೆ (ಸ್ತನ್ಯವೃದ್ಧಿ)

ಕೆಲವು ತಾಯಂದಿರುಗಳಿಗೆ, ಸಾಕಷ್ಟು ಹಾಲು ಬರುತ್ತಿರುವದಿಲ್ಲ. ಅಂಥವರು ಈ ಕೆಳಗಿನ ಔಷಧ ತೆಗೆದುಕೊಳ್ಳುವದು.

೧. ನೆಲಗುಂಬಳವನ್ನು ಆಕಳ ಹಾಲಿನಲ್ಲಿ ತೆಯ್ದು ದಿನಕ್ಕೆ ೨-೩ ಸಲ ತೆಗೆದುಕೊಳ್ಳುವದು.

೨. ಶತಾವರೀ ಚೂರ್ಣವನ್ನು ೧-೨ ಮಾಸಿ ಹಾಲುಸಕ್ಕರೆಯೊಡನೆ ದಿನಕ್ಕೆ ೨ ಸಲ ತೆಗೆದುಕೊಳ್ಳುವದು.

೧೬ ಬಾಲರೋಗಗಳು

ಮುಟ್ಟುದೋಷ (ರಿಕೆಟ್ಸ್)

ಇದರಿಂದ ಮಕ್ಕಳ ಬೆಳಗೆ ನಿಂತು, ಎದೆಯ ಭಾಗವು ಮುಂದೆಬಂದಂತೆ ಆಗುವದು. ಎದೆ ಎಲಬುಗಳು ಕಾಣಹತ್ತುವವು. ಕೈಕಾಲುಗಳು ಸಣ್ಣ ಆಗುತ್ತವೆ. ಪಚನವು ಸರಿಯಾಗಿ ಆಗುವದಿಲ್ಲ.

(೧) ವಾಯುವಿಡಂಗ ಮತ್ತು ಅನಂತಮೂಲಗಳ ಕಷಾಯವನ್ನು ದಿನಕ್ಕೆ ೨ ಸಲ ಕೊಡುತ್ತಹೋಗುವದು.

(೨) ಮೃಗಶೃಂಗಭಸ್ಮ ೧ ಗುಂ. ಪ್ರವಾಳ ಪಂ. ಭ. ೧ ಗುಂ. ಅಮೃತ ಸತ್ವ ೨ ಗುಂ.

ಈ ಪ್ರಕಾರ ಕಲಿಸಿ ಒಂದು ಪುಡಿ ಮಾಡಬೇಕು. ಬೆಳಿಗ್ಗೆ ಒಂದು ಸಾಯಂಕಾಲ ೧ ಚೀಟು ನೆಲ್ಲೀಪಾಕ ಅಥವಾ ಜೇನುತುಪ್ಪದಲ್ಲಿ ಕೊಡುತ್ತ ಹೋಗಬೇಕು.

(೩) ಅಶ್ವಗಂಧಾರಿಷ್ಟ ೧-೨ ಚಮಚ, ಅಷ್ಟೇ ನೀರುಕೂಡಿಸಿ ದಿನಕ್ಕೆ ೨ ಸಲ ಕೊಡುವದು.

ಬಾಲಗ್ರಹ

ಅಪಚನ, ಮಲಾವರೋಧ, ಜಂತು, ಹಲ್ಲುಬರುವದು, ತೀವ್ರಜ್ವರ, ಮಿದುಳಿನ ವಿಕಾರ, ಇವುಗಳಲ್ಲಿ ಯಾವುದಾದರೊಂದು ಕಾರಣದಿಂದ ಬಾಲಗ್ರಹವು ಬರಬಹುದು. ಕಾರಣವನ್ನು ತಿಳಿದುಕೊಂಡು ಉಪಚಾರ ಮಾಡುವದು. ಬಾಲಗ್ರಹಕ್ಕೆ ಸಾಮಾನ್ಯವಾಗಿ ಕೆಳಗೆ ಬರೆದ ಚಿಕಿತ್ಸೆಯನ್ನು ಮಾಡಬೇಕು.

(೧) ಸತಾಪ ತೊಪ್ಪಲದ ೧೫-೨೦ ಹನಿ ರಸದಲ್ಲಿ ೧ ಗುಂಜಿ, ಗೋರೋಚನ ಕೂಡಿಸಿ ಕೊಡಬೇಕು. ದಿನಕ್ಕೆ ೨-೩ ಸಲ.

(೨) ವಾತಪ್ರಕೋಪ ಕಂಡುಬಂದಲ್ಲಿ ಸೂತಶೇಖರ, ಲಕ್ಷ್ಮೀನಾರಾಯಣರಸ, ಮಹಾಯೋಗರಾಜ ಗುಗ್ಗುಳ ಇವುಗಳಲ್ಲಿ ಯಾವುದಾದರೊಂದನ್ನು ಅತಿಸೂಕ್ಷ್ಮ ಪ್ರಮಾಣದಿಂದ ಜೇನಿನೊಡನೆ ಕೊಡುವದು. ದಿನಕ್ಕೆ ೩ ಸಲ.

(೩) ಪಿತ್ತಪ್ರಕೋಪದಲ್ಲಿ — ಸೂತಶೇಖರ, ಕಾಮದುಘಾ, ಸುವರ್ಣ ಮಾಕ್ಷಿಕ ಇವುಗಳಲ್ಲಿ ಯಾವುದಾದರೊಂದನ್ನು ೧ ರಿಂದ ಅರ್ಧ ಗುಂಜಿ ಜೇನಿನೊಡನೆ ಕೊಡುವದು. ದಿನಕ್ಕೆ ೨-೩ ಸಲ.

(೪) ಕಫಪ್ರಕೋಪದಲ್ಲಿ — ಲಕ್ಷ್ಮೀನಾರಾಯಣರಸ, ಹೇಮಗರ್ಭ, ಸ್ಮೃತಿಸಾಗರ ಇವುಗಳಲ್ಲಿ ಯಾವುದಾದರೊಂದನ್ನು ಜೇನಿನಲ್ಲಿ ಕೊಡುವದು.

(೫) ಬಾಲಗ್ರಹದಲ್ಲಿ ಸಹಸ್ರಪುಟಿ ಅಭ್ರಕವು ವಿಶೇಷ ಗುಣಕಾರಿ ಎಂದು ಅನುಭವ.

(೬) ಮೊಲದ ರಕ್ತವನ್ನು ೪-೬ ಹನಿ ಹಾಲಿನೊಳಗೆ ಕೂಡಿಸಿ ಕೊಡುವದು.

(೭) ಬ್ರಾಹ್ಮಿ ಅಥವಾ ಕೂಷ್ಮಾಂಡ ರಸದಲ್ಲಿ ಬಜೆ ತೆಯ್ದು ಕೊಡುವದು.

(೮) ಮಲಾವರೋಧವಿದ್ದಲ್ಲಿ ಗ್ಲಿಸರೀನ ಬಸ್ತಿ ಅಥವಾ ಔಡಲ ಎಣ್ಣಿ ಕೊಡುವದು.

(೯) ಜ್ವರ ಬಹಳ ಇದ್ದರೆ ಹಣೆಗೆ ಕೋಲನ ವಾಟರ ಅಥವಾ ತಣ್ಣೀರಿನ ಪಟ್ಟಿಯನ್ನು ಇಡುವದು.

(೧೦) ಬಾಲಗ್ರಹ ಬಂದ ವೇಳೆಯಲ್ಲಿ ಹುಡುಗರ ಪಾದಗಳನ್ನು ಬಿಸಿ ನೀರಿನಲ್ಲಿ ಇಡಬೇಕು. ತಲೆಯ ಮೇಲೆ ತಣ್ಣೀರಿನ ಪಟ್ಟಿಯನ್ನು ಹಾಕ ಬೇಕು.

ಕೂಸಿನ ಹೊಟ್ಟೆಯೊಳಗಿನ ಬೇನೆ.

(ಬ್ರಾಂಕೋನ್ಯುಮೋನಿಯಾ)

ತೀವ್ರಜ್ವರ, ಕೆಮ್ಮು, ಶ್ವಾಸ, ಸಾಧಾರಣವಾಗಿ ಈ ಲಕ್ಷಣಗಳಿರುವವು.

(೧) ಹೀಕಜಾಲಿ ಒಳದೊಗಟೆ ರಸ ೧೦-೧೫ ಹನಿ ಜೇನಿನೊಡನೆ ಕೊಡುವದು.

(೨) ಹಿಪ್ಪಲಿಯ ಸೂಕ್ಷ್ಮ ಚೂರ್ಣಕ್ಕೆ ಮೊಲದ ರಕ್ತದ ಭಾವನೆಯನ್ನು ಕೊಡುವದು. ನಂತರ ನೆರಳಿನಲ್ಲಿ ಒಣಗಿಸಿ ಬಾಟ್ಲಿಯಲ್ಲಿ ಇಡುವದು. ೧-೨ ಗುಂಜಿ ಜೇನಿನಗೂಡ.

(೩) ಒಂದು ಸೇರು ಉಪ್ಪು ಘಟಗಳನ್ನು ಬಿಸಿಬಿಸಿ ಕಾಕೆಳ್ಳ ಬೂದಿಯಲ್ಲಿ ಇಟ್ಟುಬಿಡಬೇಕು. ಬಿಸಿ ಆರಿದನಂತರ ಆ ಘಟಗಳನ್ನು ಹೊರಕ್ಕೆ ತೆಗೆದು ನೀರಿನಿಂದ ಬೂದಿ ಎಲ್ಲಾ ಹೋಗುವಂತೆ ಸ್ವಚ್ಛವಾಗಿ ತೊಳೆಯಬೇಕು. ಆ ಮೇಲೆ ಚಾಕುವಿನಿಂದ, ಅದರ ಮೇಲಿನ ಪದರುಗಳನ್ನು ಛೇದಿಸಬೇಕು. ನಂತರ ಅವನ್ನು ಎರಡೂ ಕೈಗಳಿಂದ ಹಿಡಿದು ಹಿಂಡಬೇಕು. ಆಗ ನೀರ ರಸವು ಬರುತ್ತದೆ. ಈ ರಸವನ್ನು ಅಗಲವಾಗಿರುವ ಬೇಸಿಮಣ್ಣಿನ ಪಾತ್ರೆಯಲ್ಲಿ ಅಥವಾ ಗಾಜಿನ ಪಾತ್ರೆಯಲ್ಲಿ ಹಿಡಿಯಬೇಕು. ಆ ರಸದಲ್ಲಿ ಕಾಡಿಗೆಯಷ್ಟು ದಪ್ಪ ತೆಳ್ಳನೆಯ ಸೋಡಾ ಹಾಕಬೇಕು. ನೆರಳಲ್ಲಿ ಒಣಗಿಸಬೇಕು. ಒಣಗಿದ ನಂತರ ಪುನಃ ರಸ ಹಾಕುವದು. ಈ ಪ್ರಕಾರ ಏಳುಸಲ ಮಾಡಬೇಕು. ಆ ಮೇಲೆ ಅದರೊಳಗೆ ೧|| ತೊಲಿ ಕೇಸರ ಕೂಡಿಸಿ ಅರೆದು ಆ ಪ್ರಮಾಣದಷ್ಟೇ ಸಕ್ಕರೆ ಕೂಡಿಸಿ ಪುನಃ ಅರೆಯುವದು. ಬಾಟ್ಲಿಯಲ್ಲಿ ಇಡಬೇಕು. ೨-೪ ಗುಂಜಿ ಜೇನಿನಗೂಡ ದಿನಕ್ಕೆ ೨-೩ ಸಲ.

ಮಲಾವರೋಧವಿದ್ದಲ್ಲಿ ಗ್ಲಿಸರೀನ ಬತ್ತಿ ಕೊಡುವದು. ಎದೆ ಬೆನ್ನು ಕಾಸಬೇಕು. ನ್ಯುಮೋನಿಯಾದ ಉಪಚಾರ ಮಾಡುವದು.

ಕೂಸಿನ ಜ್ವರ ಮತ್ತು ಕೆಮ್ಮು

(೧) ಅತಿವಿಷ, ಕಾಕಡಸಿಂಗಿ, ಜೇಕಿನಗಡ್ಡೆ, ಹಿಪ್ಪಲಿ, ಇವುಗಳ ಚೂರ್ಣವನ್ನು ೧-೨ ಗುಂಜಿ ಜೇನಿನಲ್ಲಿ ಕೊಡುವದು. (೨) ಕಟುಕರೋಹಿಣಿ ಚೂರ್ಣ ೧-೨ ಗುಂಜಿ ಜೇನಿನೊಡನೆ ಕೊಡುವದರಿಂದ ವಾಂತಿಯಾಗಿ, ಕೆಮ್ಮು ಮತ್ತು ಜ್ವರ ಕಡಿಮೆಯಾಗುತ್ತವೆ. (೩) ಇಸರೀಬೇರಿನ ಕಷಾಯವನ್ನು ಕೊಡಬೇಕು. (೪) ಅಡುಸಾಲರಸ, ಶಾಡಿಗ್ಗರಗಿನ ರಸಗಳಲ್ಲಿ ಹಿಪ್ಪಲೀಪುಡಿ ಜೇನುಕೂಡಿಸಿ ಕೊಡುವದು. (೫) ಸುದರ್ಶನ ಚೂರ್ಣವನ್ನು ಸೂಕ್ಷ್ಮ ಪ್ರಮಾಣದಿಂದ ಜೇನಿನಗೂಡ ಕೊಡುವದು. (೬) ಬಳ್ಳೊಳ್ಳಿ ಬಡೇಸೋಪುಗಳ ಕಷಾಯ ಕೊಡುವದು.

ಕೂಸಿನ ಅತಿಸಾರ

(೧) ಶುಂಠಿ, ಅತಿವಿಷ, ಜೇಕಿನಗಡ್ಡೆ, ಬಾಳದ ಬೇರು, ಇಂದ್ರಜವ ಇವುಗಳ ಕಷಾಯದಲ್ಲಿ ಜೇನುತುಪ್ಪ ಕೂಡಿಸಿ ಕೊಡುವದು.

(೨) ಜಾಜೀಕಾಯಿ, ಖಸಖಸಿ, ತೀರ ಸ್ವಲ್ಪ ಪ್ರಮಾಣದಿಂದ ಹಾಲಿನಲ್ಲಿ ಅರೆದು ಕೊಡುವದು.

(೩) ಬಿಲ್ವಪತ್ರಿಯ ಕಷಾಯ ಕೊಡುವದು.

(೪) ನೊಪಲು ಬೀಜದ ಎಣ್ಣೆಯನ್ನು ಕೊಡಬೇಕು

ಕೂಸಿನ ಹೊಟ್ಟೆ ಉಬ್ಬುವದು

(೧) ಹೊಟ್ಟೆಗೆ ಎಣ್ಣೆಯನ್ನು ಹಚ್ಚಿ, ಅರಿವೆಯಿಂದ ಸ್ವಲ್ಪ ಕಾಸಬೇಕು.

(೨) ಬಡೇಸೋಪು ಅಜವಾನಗಳ ಕಷಾಯ ಕೊಡುವದು. ಅಥವಾ ಗುಟ್ಟಿ ಹಾಕುವದು.

ಕೂಸಿನ ಕ್ರಿಮಿಗಳಿಗೆ

(೧) ವಾಯುವಿಡಂಗ, ಮುತ್ತಲಬೀಜಗಳ ಸೂಕ್ಷ್ಮ ಚೂರ್ಣವನ್ನು ಅಲ್ಪ ಪ್ರಮಾಣದಿಂದ ಜೇನುತುಪ್ಪ ಕೂಡಿಸಿ ಕೊಡುವದು. (೨) ವಾಯು ವಿಡಂಗದ ಕಷಾಯವನ್ನು ಕೊಡುವದು.

ಕೂಸಿನ ವಾಂತಿ ಕಡಿಮೆಯಾಗಲಿಕ್ಕೆ

(೧) ಅರಳೀ ಎಲೆ ಸುಟ್ಟು ಪುಡಿಮಾಡಿ, ಭತ್ತರಳು ಕುದಿಸಿದ ನೀರಿನ-ಕೂಡ ಅಥವಾ ಜೇನುತುಪ್ಪದ ಕೂಡ ಕೊಡುವದು.

ಹಾಲು ಕುಡಿದು ವಾಂತಿಯಾಗುತ್ತಿದ್ದರೆ (ಕ್ಷೀರಛರ್ದಿ)

(೧) ಪಂಚಕೋಲದ ಸೂಕ್ಷ್ಮ ಚೂರ್ಣವನ್ನು ಅತ್ಯಲ್ಪ ಪ್ರಮಾಣದಿಂದ ಅಥವಾ ಕಷಾಯವನ್ನು ಕೊಡುವದು.

ಕೂಸು ಅಳುತ್ತಿದ್ದರೆ

(೧) ತ್ರಿಫಲಾ ಮತ್ತು ಹಿಪ್ಪಲಿ, ಹಾಲಿನಲ್ಲಿ ಕೆಯ್ದು ಕೊಡುವದು,

ಹುಡುಗರು ಮೈ ಹಿಡಿಯಲಿಕ್ಕೆ

ಅಶ್ವಗಂಧೀ ಬೇರು ೧ ಅಕಳ ಹಾಲು ೮ ಭಾಗ ಮರಳಿಸಿ ಸಕ್ಕರೆ ಹಾಕಿ ಕುಡಿಯಲು ಕೊಡಬೇಕು.

ಕೂಸಿನ ಬಾಯಿ ಕೆಂಪು ಆದರೆ

ಮುಂಡಲೋಹ ಭಸ್ಮ ೧ ಗುಂಜಿ, ಕೊನ್ನೀರ್ಕಾವಿ ೧೦ ಗುಂಜಿ ಚಿಣ್ಣಾಗಿ ಕೂಡಿಸಿ ಇಡಬೇಕು. ಅರ್ಧದಿಂದ ಒಂದು ಗುಂಜಿ ಜೇನುತುಪ್ಪದಲ್ಲಿ ಕೊಡುವದು. ಅಥವಾ ಹಾಲಿನಲ್ಲಿ ಕೊಡುವದು.

ಕೂಸಿನ ನೆತ್ತಿ ಬಿದ್ದರೆ (ಅದಕ್ಕೆ ತೆಯ ಒತ್ತಿಗಾ)

ಅಳಲೇಕಾಯಿ, ಬಜೆ, ಕೋಷ್ಟ ಇವುಗಳ ಚೂರ್ಣವನ್ನು ಅರ್ಧದಿಂದ ೧ ಗುಂಜಿ ಹಾಲಿನೊಳಗೆ ಕೊಡುವದು.

ಕೂಸಿನ ಹೊಕ್ಕಳ ಕೆಂಪಾದರೆ (ನಾಭಿ ಪಾಕ)

ಅರಿಸಿಣ, ಲೋಧ್ರ, ಗೌಲ, ಜೇಷ್ಠಮಧು ಇವುಗಳ ಸೂಕ್ಷ್ಮ ಚೂರ್ಣವನ್ನು ಅರಳೆಯಿಂದ ಹೊಕ್ಕಳದ ಮೇಲೆ ಹಚ್ಚಬೇಕು.

ಚಿಕ್ಕಮಕ್ಕಳ ಯಕೃತವಿಕಾರ

ಇದು ಸಾಮಾನ್ಯವೇನೆ ಅಲ್ಲ. ಒಳ್ಳೇ ವೈದ್ಯರನ್ನು ಕರೆದು ತೋರಿಸಿ ಚಿಕಿತ್ಸೆ ಪ್ರಾರಂಭಿಸಬೇಕು. ಅವರು ಬರುವವರೆಗೆ ಕೆಳಗಿನ ಯೋಗವನ್ನು ಪ್ರಾರಂಭಿಸುವದು.

ಶಿರಫಳ (ತುಂಬರು) ೧ (ಇದು ಕೊಂಕಣದಲ್ಲಿ ಸಿಗುತ್ತದೆ) ಎಳೆ ಅಳಲೇಕಾಯಿ ೧ ಇಂಗು ೧ ಕೋಷ್ಟ ೧ ಸೈಂಧಲವಣ ೧ ಬಿಡಲವಣ ೧ ಪಾದೇಲವಣ ೧ ಅಜವಾನ ೧ ಜವಖಾರ ೧ ವಾಯುವಿಡಂಗ ೧ ಶಿಗಡಿ ೩ ಇವುಗಳನ್ನು ಕುಟ್ಟಿ ವಸ್ತ್ರಗಾಳ ಚೂರ್ಣ ಮಾಡಬೇಕು. ಈ ಚೂರ್ಣವನ್ನು ಒಂದು ಕಲಬತ್ತಿನಲ್ಲಿ ಹಾಕಿ ಅದರೊಳಗೆ ಕಾಡಿಗ್ಗರಗಿನ ರಸ ಹಾಕಿ ೩ ದಿವಸ ಅರೆಯಬೇಕು. ನೆಳಲಲ್ಲಿ ಒಣಗಿಸಿ ನಂತರ ಬಾಟ್ಲಿಯಲ್ಲಿ ತೆಗೆದು ಇಡಬೇಕು. ಮಕ್ಕಳ ವಯಸ್ಸಿಗನುಸರಿಸಿ ೨-೪ ಗುಂಜಿ ಕಾಡಿಗ್ಗರಗಿನ ರಸ ಜೇನುತುಪ್ಪದಲ್ಲಿ ಕೂಡಿಸಿ ಕೊಡುವದು.



ಪ್ರಥಮ ಖಂಡ

ಶಲ್ಯತಂತ್ರ

೧ ಶರೀರ ರಚನೆ

ಶರೀರಕ್ಕೆ ಅಸ್ಥಿಪಂಜರವು ಮುಖ್ಯ ಆಧಾರವಾಗಿದೆ. ಶರೀರದಲ್ಲಿ ಸುಮಾರು ಎರಡು ನೂರು ಎಲಬುಗಳಿರುವವು. ಮುಖ ಮತ್ತು ತಲೆ ಬುರುಡೆಯ ಎಲಬುಗಳು ಅಚಲವಿರುವವು. ಉಳಿದಕಡೆಯ ಎಲಬುಗಳು ಸರ್ವಸಾಧಾರಣವಾಗಿ, ಚಲವೆಂದು ಹೇಳಬಹುದು.

ಅಸ್ಥಿಪಂಜರಕ್ಕೆ ಸ್ನಾಯುಗಳ ಹೊದಿಕೆ ಇದೆ. ಸ್ನಾಯುಗಳಿರುವದರಿಂದ, ಮನುಷ್ಯನಿಗೆ ಚಲನವಲನ ಮಾಡಲು ಬರುತ್ತದೆ.

ತಿಂದ ಆಹಾರವು, ಪಚನೇಂದ್ರಿಯಗಳಲ್ಲಿ, ಪಚನವಾಗಿ ರಕ್ತವಾಗುತ್ತದೆ. ಶರೀರಪೋಷಣೆಗೆ ರಕ್ತವು ಅತ್ಯವಶ್ಯವಾದದು. ಈ ರಕ್ತವು, ಎದೆಯಲ್ಲಿರುವ ರಕ್ತಾಶಯದಿಂದ ಹೊರಟು ರಕ್ತವಾಹಿನಿಗಳ ದ್ವಾರದಿಂದ ಸಕಲ ಶರೀರವನ್ನು ಪೋಷಿಸುತ್ತಿರುತ್ತದೆ.

ಶ್ವಾಸೋಚ್ಛ್ವಾಸವು ಮನುಷ್ಯನ ಜೀವಿತದ ಲಕ್ಷಣ. ಈ ಉಸುರಾಡಿಸುವ ಕ್ರಿಯೆಯು, ಫುಪ್ಫುಸಗಳು, ಶ್ವಾಸನಲಿಕೆ, ಮೂಗು, ಬಾಯಿಗಳಲ್ಲಿ ನಡೆದಿರುತ್ತದೆ. ಇದರಿಂದ ಶರೀರಕ್ಕೆ ಬೇಕಾದ ಶುದ್ಧ ಹವೆಯು ದೊರೆಯುತ್ತದೆ ಮತ್ತು ಅಶುದ್ಧ ರಕ್ತವು ಶುದ್ಧವಾಗುತ್ತದೆ.

ಮಲಮೂತ್ರ ಬೆವರುಗಳ ರೂಪದಿಂದ ಶರೀರದೊಳಗಿನ ಅನುಪಯುಕ್ತ ದ್ರವ್ಯಾಂಶವು ಹೊರಗೆ ಹಾಕಲ್ಪಡುತ್ತದೆ.

ಹೊಟ್ಟೆಯ ಪೊಳ್ಳಿನಲ್ಲಿ ಬಲಬದಿಗೆ ಯಕೃತ್, ಎಡಬದಿಗೆ ಪ್ಲೀಹ, ಮಧ್ಯದಲ್ಲಿ ಸಣ್ಣ ಕರುಳು, ಸಣ್ಣ ಕರುಳಿನ ಸುತ್ತುಮುತ್ತ ದೊಡ್ಡ ಕರುಳು ಇರುತ್ತದೆ. ಇದೇ ಪೊಳ್ಳಿನಲ್ಲಿ ಗರ್ಭಾಶಯ, ಮೂತ್ರಾಶಯ, ಮಲಾಶಯಗಳು ಇರುತ್ತವೆ.

ಶರೀರಕ್ಕೆ ತ್ವಚೆಯು ಆವರಣವಿರುವದರಿಂದ, ಸೌಂದರ್ಯ ಪ್ರಾಪ್ತವಾಗಿದೆ. ತಲೆಬುರುಡೆಯಲ್ಲಿ ಮಿದುಳು ಎಂಬ ಅತಿ ಮಹತ್ವದ ಜ್ಞಾನೇಂದ್ರಿಯವು ಇರುತ್ತದೆ. ಅದರಿಂದ ಸುಷುಮ್ನಾನಾಡಿಯೂ ಅಸಂಖ್ಯ ಜ್ಞಾನತಂತುಗಳೂ ಶರೀರದ ತುಂಬ ಹರಡಿಸಿರುವವು. ಇದರಿಂದಲೇನೇ ಮನುಷ್ಯನಿಗೆ, ಎಲ್ಲ ತರದ ಜ್ಞಾನವಾಗುತ್ತದೆ. ಶರೀರದ ಎಲ್ಲ ವ್ಯವಹಾರವು ಇದೇ ಇಂದ್ರಿಯದಿಂದ ಆಗುತ್ತಿರುತ್ತದೆ. ಇದಕ್ಕೆ ವಾತಸಂಸ್ಥೆ ಎಂದೆನ್ನುತ್ತಾರೆ.

ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ ಇವು ೫ ಜ್ಞಾನೇಂದ್ರಿಯಗಳು.

ಬಾಯಿ, ಕೈ, ಕಾಲು, ಜನನೇಂದ್ರಿಯ, ಗುದ ಇವು ಐದು ಕರ್ಮೇಂದ್ರಿಯಗಳು.

ಮನಸ್ಸು ಒಂದು ಇಂದ್ರಿಯವೆಂದು ಶಾಸ್ತ್ರಕಾರರು ಹೇಳಿರುವರು. ಈ ಶರೀರಕ್ಕೆ ಪ್ರಾಣವಾಯುವಿನ ಸಂಬಂಧವಿರುವ ವರೆಗೆ ಆಯುಷ್ಯವಿರುತ್ತದೆ. ಶರೀರ ಮತ್ತು ಪ್ರಾಣವಾಯುವಿನ ಸಂಬಂಧ ತಪ್ಪಿತೆಂದರೆ ಮರಣ ಪ್ರಾಪ್ತವಾಗುತ್ತದೆ.

ಪರಮಾತ್ಮನ ಇಚ್ಛೆ ಇರುವತನಕ ಈ ಪಂಚಭೂತಾತ್ಮಕ ಶರೀರದಲ್ಲಿ ಜೀವಾತ್ಮನು ಕರ್ಮಫಲವನ್ನು ಅನುಭವಿಸುತ್ತ ವಾಸಮಾಡಿಕೊಂಡು ಇರುತ್ತಾನೆ.

---

೨ ರಕ್ತಸ್ರಾವ

ರಕ್ತಾಶಯದಿಂದ ಹೊರಟು, ಸಕಲ ಶರೀರವನ್ನು ಪೋಷಿಸುತ್ತಿರುವ ರಕ್ತವಾಹಿನಿಗಳಿಗೆ ರೋಹಿಣೀನಾಳಗಳೆಂದು ಅನ್ನುತ್ತಾರೆ. ಇವುಗಳಲ್ಲಿ ಚಿಕ್ಕ ದೊಡ್ಡ ಆಕಾರದವು ಇದ್ದು, ತೀರ ಚಿಕ್ಕ ನಾಳಗಳಿಗೆ ರೋಮನಾಳಗಳೆಂದು ಅನ್ನುತ್ತಾರೆ. ಇವು ಶುದ್ಧ ರಕ್ತ ನಾಳಗಳು. ಶುದ್ಧ ರಕ್ತದ ಬಣ್ಣವು ಕೆಂಪು ಇರುತ್ತದೆ.

ದೇಹವನ್ನು ಪೋಷಿಸುತ್ತಿರುವಾಗ, ಉಂಟಾದ ಅಶುದ್ಧ ರಕ್ತವು, ಸಕಲ ಶರೀರದ ಭಾಗದಿಂದ ಹೊರಟು ಪುಪ್ಪುಸ, ರಕ್ತಾಶಯಗಳ ಕಡೆಗೆ ಒಂದು ಪ್ರಾಣವಾಯುವಿನ ಸಂಯೋಗದಿಂದ, ಶುದ್ಧವಾಗಿ ಪುನಃ ಶುದ್ಧ ರಕ್ತವಾಹಿನಿಗಳಲ್ಲಿ ಕೂಡಿಕೊಳ್ಳುತ್ತದೆ. ಅಶುದ್ಧ ರಕ್ತವಾಹಿನಿಗಳಿಗೆ ಸಿರೆಗಳೆಂದೆನ್ನುತ್ತಾರೆ. ಅಶುದ್ಧ ರಕ್ತವು ಕಂದೀಬಣ್ಣದ್ದಿರುತ್ತದೆ.

ಈ ರಕ್ತವಾಹಿನಿಗಳಿಂದ ರಕ್ತವು ಹೊರಗೆ ಹರಿಯಹತ್ತಿತೆಂದರೆ ಅದಕ್ಕೆ ರಕ್ತಸ್ರಾವವೆಂದೆನ್ನುತ್ತಾರೆ. ರೋಗ ಮತ್ತು ಗಾಯಗಳು ರಕ್ತಸ್ರಾವಕ್ಕೆ ಕಾರಣಗಳು. ತ್ವಚೆಯ ಕೆಳಗೆ, ಅಂದರೆ ತ್ವಚೆಗೆ ಹೊಂದಿ ಅಸಂಖ್ಯಾತ ಲೋಮನಾಳಗಳಿರುವವು. ಅವುಗಳ ಸಮೀಪದಲ್ಲಿಯೇ ರಕ್ತವಾಹಿನಿಗಳು ಇರುತ್ತವೆ. ತ್ವಚೆಯು ಗಾಯಹೊಂದಿದಾಗ, ಲೋಮನಾಳ ರಕ್ತವಾಹಿನಿಗಳು ಹರಿದು ಅದರಿಂದ ರಕ್ತಸ್ರವಿಸುವದು. ರಕ್ತಸ್ರಾವದಲ್ಲಿ ಅಂತಃಸ್ರಾವ, ಬಹಿಃಸ್ರಾವ, ಎಂಬ ಎರಡು ಪ್ರಕಾರಗಳಿರುತ್ತವೆ

ಅಂತಃಸ್ರಾವ

ಮಿದುಳು, ಪುಪ್ಪುಸ, ಹೊಟ್ಟೆ, ಕರುಳುಗಳಲ್ಲಿ ಸ್ರಾವವಾದರೆ, ಅದಕ್ಕೆ ಅಂತಃಸ್ರಾವವೆಂದೆನ್ನುತ್ತಾರೆ. ಇದು ಕಠಿಣ ವಿಷಯ. ಜೀವಕ್ಕೆ ಅಪಾಯ ಸಂಭವಿಸುವ ಸಮಯ. ಕಾರಣ ಕೂಡಲೇ ಡಾಕ್ಟರರನ್ನು ಕರೆಯಿಸಿ ಉಪಚಾರ ಮಾಡಿಸಬೇಕು.

ಅಂತಃಸ್ರಾವದ ಸಾಮಾನ್ಯ ಲಕ್ಷಣಗಳು:-- ಅಂತಃಸ್ರಾವವಾದಲ್ಲಿ ಕಣ್ಣಿಗೆ ಕತ್ತಲೆ ಕವಿದಂತಾಗಿ, ತಲೆತಿರುಗಿದಂತಾಗುತ್ತದೆ. ಮೋರೆ, ತುಟಿಗಳು ಬಾಡಿದಂತಾಗಿ ಬೆಳ್ಳಗಾಗುವವು. ನಾಡೀಗತಿಯು ಮಂದವಾಗುವದು ಬೆವರು ಬಂದು ಮೈ ತಂಪಾಗುವದು. ಶ್ವಾಸೋಚ್ಛ್ವಾಸದ ಪ್ರಮಾಣವು ಕಡಿಮೆಯಾಗುವದು. ಸ್ರಾವವು ಹೆಚ್ಚು ಆದಲ್ಲಿ ಮೂರ್ಛೆ ಸಹ ಒದಗುವದು.

ಮಿದುಳಿನಲ್ಲಿ ರಕ್ತಸ್ರಾವವಾದುದು, ಸಾಮಾನ್ಯರಿಗೆ ತಿಳಿಯುವದು ಶಕ್ಯವಿಲ್ಲ. ಅದನ್ನು ಡಾಕ್ಟರರು ಪರೀಕ್ಷಿಸಿ ಯೋಗ್ಯ ಉಪಚಾರ ಮಾಡುವರು. ತಲೆಗೆ ಪೆಟ್ಟು ತಾಕಿ, ಮನುಷ್ಯನು ಮೂರ್ಛೆ ಹೋದಾಗ ಸರ್ವಸಾಮಾನ್ಯ ಉಪಾಯಗಳಿಂದ ಸ್ಮೃತಿಯು ಬಾರದೆ ಇದ್ದಲ್ಲಿ ಕೂಡಲೇ ಡಾಕ್ಟರರನ್ನು ಕರೆಯಿಸುವದು.

ಫುಪ್ಫುಸದಿಂದ ಬರುವ ರಕ್ತಸ್ರಾವವಾದರೂ ಸಾಮಾನ್ಯವಾದುದಲ್ಲ. ಕಾರಣ ಕೂಡಲೇ ಡಾಕ್ಟರರನ್ನು ಕರೆಯಿಸಿ ಉಪಚಾರ ಮಾಡಿಸಬೇಕು.

ಉಗುಳಿನ ಕೂಡ ಒಂದೇ ಸಮನೆ ಹೆಚ್ಚು ರಕ್ತ ಬರಹತ್ತಿತೆಂದರೆ, ಫುಪ್ಫುಸದಲ್ಲಿ ರಕ್ತಸ್ರಾವವಾಗಿದೆ ಎಂದು ತಿಳಿಯಬೇಕು.

ಆ ರೋಗಿಯನ್ನು ಒಂದು ಮಗ್ಗುಲಿಗೆ ಮಲಗಿಸಬೇಕು. ಅವನ ತಲೆ ಹೆಗಲುಗಳನ್ನು ತುಸು ಎತ್ತರಮಾಡಿ ಮಲಗಿಸಬೇಕು. ಅವನಿಗೆ ಸ್ವಲ್ಪವೂ ಕೂಡ ಶ್ರಮವಾಗದಂತೆ ನೋಡಿಕೊಳ್ಳಬೇಕು. ಹೆಚ್ಚು ಮಾತು ಕೂಡ ಆಡಗೊಡಬಾರದು. ಅವನು ಮಲಗಿದ ಕೋಣೆಯ ಕಿಡಕಿಗಳನ್ನು ತೆಗೆದು ಇಡಬೇಕು. ತಣ್ಣಗಿನ ನೀರು ಚಮಚೆ ಚಮಚೆ ಕುಡಿಸುತ್ತಿರಬೇಕು. ಬರ್ಫ ಸಿಕ್ಕರೆ ಬರ್ಫದ ಚೂರುಗಳನ್ನು ತಿನ್ನಲು ಕೊಡಬೇಕು. ಎದೆಯ ಮೇಲಿನ ಅರಿವೆಗಳನ್ನು ಸಡಿಲು ಮಾಡಬೇಕು. ಎದೆಯ ಮೇಲೆ ಬರ್ಫದ ಚೀಲ ಅಥವಾ ಅತಿತಣ್ಣಗಿನ ನೀರಿನಲ್ಲಿ ತೋಯಿಸಿ ಹಿಂಡಿದ ಅರಿವೆಯನ್ನು ಇಡಬೇಕು. ಅವನಿಗೆ ಮಬ್ಬು ಬರಹತ್ತಿದರೆ, ಅವನ ಕಾಲುಗಳನ್ನು ಕಾಸಬೇಕು. ಉಳ್ಳೀಗಡ್ಡೆಯನ್ನು ಹೆಚ್ಚಿ ಅವನ್ನು ಮೂಗಿಗೆ ಹಿಡಿಯಬೇಕು. ಸ್ಮೆಲಿಂಗ ಸಾಲ್ಟ ಇದ್ದಲ್ಲಿ ಮೂಸಿಕೊಳಿಸಬೇಕು. ಹೊಟ್ಟೆಯೊಳಗೆ ಉತ್ತೇಜಕ ಔಷಧ, ಬಿಸಿಬಿಸಿ ಕಾಫಿ, ಚಹ, ಕೊಡಬಾರದು.

ವಾಂತಿಯೊಡನೆ ರಕ್ತ ಬರಹತ್ತಿದರೆ ಅದು ಹೊಟ್ಟೆಯೊಳಗಿನ ಸ್ರಾವವೆಂದು ತಿಳಿಯಬೇಕು. ಹೊಟ್ಟೆಯೊಳಗಿಂದ ರಕ್ತಸ್ರಾವವಾಗುತ್ತಿದ್ದರೆ, ಮೇಲೆ ಬರೆದಂತೆ ಎಲ್ಲವನ್ನು ಮಾಡಬೇಕು. ಆದರೆ ಬರ್ಫದ ಚೀಲ ಅಥವಾ ತಣ್ಣೀರಿನ ಅರಿವೆಯನ್ನು ಹೊಟ್ಟೆಯ ಮೇಲೆ ಇಡಬೇಕು.

ಕುತ್ತಿಗೆ ಅಥವಾ ಗಂಟಲದೊಳಗಿಂದ ರಕ್ತ ಬರುತ್ತಿದ್ದರೆ, ರೋಗಿಯನ್ನು ಸ್ವಸ್ಥ ಮಲಗಿಸಿ, ಬರ್ಫದ ಚೂರುಗಳನ್ನು ತಿನ್ನಲಿಕ್ಕೆ ಕೊಡಬೇಕು. ಕುತ್ತಿಗೆಗೆ ತಣ್ಣೀರಿನ ಅರಿವೆಯನ್ನು ಸುತ್ತಬೇಕು. ಬಹಳ ಬಿಗಿಯಾಗುವಂತೆ ಕಟ್ಟಬಾರದು.

ಮೂಗಿನೊಳಗಿಂದ ರಕ್ತಸ್ರಾವ

ಕುತ್ತಿಗೆಯ ಮೇಲಿನ ಅರಿವೆಗಳನ್ನು ಸಡಿಲು ಮಾಡಬೇಕು. ಅವನನ್ನು

ಕುರ್ಚಿಯ ಮೇಲೆ ಕೂಡ್ರಿಸಿ, ತಲೆಯನ್ನು ಒಂದಕ್ಕೆ ತುಸು ಬಾಗಿಸಿ ಇಡಲು ಹೇಳಬೇಕು. ತಲೆಯನ್ನು ಮುಂದೆ ಬಾಗಿಸಬಾರದು. ಕಿಡಕಿಗಳನ್ನು ತೆಗೆದು ಇಡಬೇಕು. ಶ್ವಾಸವನ್ನು ಬಾಯಿಯಿಂದ ತೆಗೆದುಕೊಳ್ಳಲು ಹೇಳಬೇಕು. ಕುತ್ತಿಗೆಯ ಕೆಳಗೆ ಬರ್ಫದ ಚೀಲ ಅಥವಾ ತಣ್ಣೀರಿನ ಪಟ್ಟಿಯನ್ನು ಇಡಬೇಕು. ಮೂಗಿನ ಮೇಲೆಯೂ ಬರ್ಫ ಅಥವಾ ತಣ್ಣೀರಿನ ಪಟ್ಟಿಯನ್ನು ಇಡಬೇಕು. ಉಷ್ಣ ಪೇಯ, ಉತ್ತೇಜಕ ಔಷಧಗಳನ್ನು ಕೊಡಬಾರದು. ಮೌಕ್ತಿಕ, ಚಂದ್ರಕಲಾ, ಉಸೀರಾಸವ, ಚಂದನಾಸವಗಳಂಥ ಔಷಧಗಳನ್ನು ಕೊಡಲು ಅಡ್ಡಿಯಿಲ್ಲ.

ಹಲ್ಲುಗಳಿಂದ ರಕ್ತಸ್ರಾವ

ಫಟಕದ ಪುಡಿ ಹಾಕಿದ ನೀರಿನಿಂದ ಮೇಲಿಂದ ಮೇಲೆ ಬಾಯಿ ಮುಕ್ಕಳಿಸಬೇಕು. ಬರ್ಫದ ಚೂರುಗಳನ್ನು ಬಾಯಿಯಲ್ಲಿ ಹಿಡಿಯಬೇಕು. ತ್ರಿಫಲಾ ಕಷಾಯದಿಂದ ಅಥವಾ ಜಾಜಿಮಲ್ಲಿಗೆ ತೊಪ್ಪಲದ ಕಷಾಯದಿಂದ ಬಾಯಿ ಮುಕ್ಕಳಿಸಬೇಕು.

ಸ್ತ್ರೀಯರಿಗೆ ಯೋನಿಮುಖದಿಂದ ರಕ್ತ ಸ್ರವಿಸುತ್ತಿದ್ದರೆ

ಟೊಂಕದ ಕೆಳಗಿನ ಭಾಗವನ್ನು ತುಸು ಎತ್ತರ ಮಾಡಿ, ಕೆಳಬದಿಗೆ ಒಂದು ಗಾದಿಯ ಸುರುಳಿಯನ್ನಿಟ್ಟು, ಅದರ ಮೇಲೆ ಎರಡೂ ಕಾಲುಗಳನ್ನಿಡಲು ಹೇಳಬೇಕು. ಅವಳಿಗೆ ಪೂರ್ಣ ವಿಶ್ರಾಂತಿಯನ್ನು ಕೊಡಬೇಕು. ಕೆಳಹೊಟ್ಟೆಯ ಮೇಲೆ ಬರ್ಫದ ಚೀಲ ಅಥವಾ ತಣ್ಣೀರಿನ ಪಟ್ಟಿಯನ್ನು ಇಡಬೇಕು. ಹೊಟ್ಟೆಯೊಳಗೆ ಅಡುಸಾಲದ ರಸ, ಕಲ್ಲುಸಕ್ಕರೆ ಕೂಡಿಸಿ ಕೊಡಬೇಕು. ಮುಕ್ತಾಭಸ್ಮ, ಚಂದ್ರಕಲಾ, ಉಸೀರಾಸವಗಳನ್ನು ಕೊಡಬೇಕು.

ಬಹಿಃಸ್ರಾವ

ಶರೀರದ ಯಾವುದಾದರೊಂದು ಭಾಗವು ಗಾಯಗೊಂಡರೆ ಕೂಡಲೇ ರಕ್ತಸ್ರಾವವಾಗುತ್ತದೆ. ಇದಕ್ಕೆ ಬಹಿಃಸ್ರಾವವೆಂದೆನ್ನುತ್ತಾರೆ. ಶರೀರದ ಒಳಭಾಗದಲ್ಲಿ, ರೋಹಿಣಿ, ನೀಲೆ ಮತ್ತು ಲೋಮನಾಳಗಳು ರಕ್ತಾಭಿಸರಣದ ಕಾರ್ಯವನ್ನು ಮಾಡುತ್ತಿರುತ್ತವೆ. ತ್ವಚೆಗೆ ಹೊಂದಿ ಒಳಬದಿಗೆ ಅಸಂಖ್ಯ

ರೋಮನಾಳಗಳೆನ್ನುತ್ತಾರೆ ತ್ವಚೆಗೆ ಗಾಯವಾದ ಕೂಡಲೇ ಆ ರೋಮ ನಾಳಗಳು ಒಡೆದು, ರಕ್ತವು ಹೊರಗೆ ಬರುತ್ತದೆ. ಹೆಚ್ಚು ಗಾಯವಾದಲ್ಲಿ ರೋಹಿಣಿ, ಸಿರೆಗಳಿಗೆ ಗಾಯವಾಗಿ, ಅವುಗಳಿಂದಲೂ ರಕ್ತಸ್ರವಿಸುವದು.

ರಕ್ತಸ್ರಾವವನ್ನು ನಿಲ್ಲಿಸುವದು

ಗಾಯವು ಚಿಕ್ಕದಿದ್ದು ರಕ್ತಸ್ರಾವವು ಸರ್ವಸಾಧಾರಣವಾಗಿದ್ದರೆ, ಗಾಯಗೊಂಡ ಶರೀರದ ಭಾಗವನ್ನು ಬಲಗೈ ಹೆಬ್ಬೆರಳಿನಿಂದ ಅಥವಾ ಅವಶ್ಯವಿದ್ದಲ್ಲಿ ಎರಡೂ ಹೆಬ್ಬೆರಳುಗಳಿಂದ ಬಿಗಿಯಾಗಿ ಒತ್ತಿ ಹಿಡಿಯಬೇಕು. ಬೇರೊಬ್ಬರು ಅರಿವೆಯ ಉದ್ದ ಪಟ್ಟಿಯನ್ನು, ಘಟಕದ ನೀರಿನಲ್ಲಿ ತೋಯಿಸಿ, ಅದರಿಂದ ಗಾಯವನ್ನು ಕಟ್ಟಬೇಕು. ೩-೪ ತಾಸುಗಳ ವರೆಗೆ ಅದನ್ನು ಬಿಚ್ಚಬಾರದು. ೩-೪ ತಾಸುಗಳ ನಂತರ ಆ ಕಟ್ಟನ್ನು ಬಿಚ್ಚಬೇಕು. ರಕ್ತ ಹತ್ತಿ ಗಟ್ಟಿ ಹತ್ತಿಕೊಂಡಿದ್ದರೆ ಬಿಸಿನೀರು ಹಾಕಿ ನೆನೆಯಿಸಬೇಕು. ಅನಂತರ ಹಿಂಜಿದ ಅರಳೆಯನ್ನು ಬಿಸಿನೀರಿನಲ್ಲಿ ತೋಯಿಸಿ ಹಿಂಡಿ, ಆ ಅರಳೆಯಿಂದ ಮೆಲ್ಲಗೆ ಗಾಯವನ್ನು ಒರೆಸಬೇಕು. ನಂತರ ಸಂಗಜೀರಿಗೆ ಪುಡಿಯನ್ನು ಉದುರಿಸಿ, ಅದರ ಮೇಲೆ ಅರಳೆಯನ್ನಿಟ್ಟು ಕಟ್ಟಬೇಕು. ಅಥವಾ ಅರಿವೆಯ ತುಣುಕಿಗೆ ಹಳೇ ತುಪ್ಪ ಹಚ್ಚಿ, ಗಾಯದ ಮೇಲೆ ಇಟ್ಟು ಕಟ್ಟಬೇಕು. ಔಡಲ ಎಣ್ಣೆ, ಕೊಬ್ಬರಿ ಎಣ್ಣೆಗಳಲ್ಲಿ ಅರಳೆಯನ್ನು ಎದ್ದಿ ಗಾಯದ ಮೇಲೆ ಇಟ್ಟುಕಟ್ಟಿದರೆ ಗಾಯವು ಮಾಯ್ದು ಬರುತ್ತದೆ. ಗಾಯದ ಮೇಲೆ ಧೂಳಿ ಬೀಳದಂತೆ ಎಚ್ಚರಿರಬೇಕು.

ಗಾಯವು ದೊಡ್ಡದಿದ್ದು ರಕ್ತಸ್ರಾವವು ಬಹಳವಿದ್ದರೆ

ರಕ್ತಸ್ರಾವವು ಬಹಳ ಇದ್ದರೆ ಘಟಕದ ನೀರಿನಲ್ಲಿ ಅಥವಾ ತಣ್ಣೀರಿನಲ್ಲಿ ಸ್ವಚ್ಛ ಅರಿವೆಯನ್ನು ತೋಯಿಸಿ, ಮಡಿಕೆ ಹಾಕಿ ಗಾಯದ ಮೇಲೆ ಇಟ್ಟು ಒತ್ತಿಹಿಡಿಯಬೇಕು. ಬೇರೆಯವರು ಗಾಯದ ಪ್ರಮಾಣದ ಮೇಲಿಂದ ಅಗಲು ಇಟ್ಟುಕೊಂಡು ಒಂದು ಉದ್ದ ಅರಿವೆಯ ಪಟ್ಟಿಯಿಂದ ಗಾಯವನ್ನು ಸುತ್ತಿ ಸುತ್ತಿ ಕಟ್ಟಬೇಕು. ಗಾಯವಾದ ಭಾಗವು ತುಸು ಎತ್ತರದಲ್ಲಿ ಆಗುವಂತೆ ಮಾಡಿ ಮಲಗಿಸಬೇಕು. ಗಾಯವಾದ ಶರೀರದ ಭಾಗವನ್ನು ಅತ್ತಿತ್ತ ಅಗಳಾಡಿಸಬಾರದು. ಕುಡಿಯಲು ಚಮಚೆ ಚಮಚೆ ತಣ್ಣೀರು

ಕೊಡಬೇಕು. ಬರ್ಫದ ಚೂರು ತಿನ್ನಲಿಕ್ಕೆ ಕೊಡಬೇಕು. ಇಷ್ಟು ಮಾಡುತ್ತಿರುವಾಗಲೇ ವೈದ್ಯರನ್ನು ಬರಮಾಡಿಕೊಳ್ಳಬೇಕು.

ರಕ್ತಸ್ರವಿಸುವ ಸ್ಥಳವನ್ನು ಒತ್ತಿಹಿಡಿಯುವದು ಮತ್ತು ಶೀತ ಉಪಚಾರ ಅಂದರೆ ತಣ್ಣಗಿನ ಪಟ್ಟಿಯನ್ನಿಡುವದು. ಇವು ಎರಡು ಮುಖ್ಯ ಉಪಚಾರಗಳೆಂದು ಹೇಳಬಹುದು.

ರಕ್ತಸ್ರಾವದಿಂದಾಗುವ ದುಷ್ಪರಿಣಾಮಗಳು

ಶರೀರದ ಉಷ್ಣತೆ ಕಡಿಮೆಯಾಗುತ್ತ, ಕೈಕಾಲುಗಳು ತಣ್ಣಗಾಗುವವು. ಮನುಷ್ಯನು ನಿಸ್ತೇಜನಾಗಿ ಸ್ಮೃತಿತಪ್ಪುವ ಸಂಭವವೂ ಇರುತ್ತದೆ. ಮಾತನಾಡಲು ಶಕ್ತಿ ಉಳಿಯುವದಿಲ್ಲ. ರಕ್ತಸ್ರಾವವು ಹೆಚ್ಚಾದಲ್ಲಿ ಮರಣವೂ ಸಂಭವಿಸಬಹುದು. ಗಾಯವಾದ ಕೂಡಲೇ ಎಷ್ಟೋ ಜನರು ಸೂಸಮಣ್ಣು ಉದರಿಸುತ್ತಾರೆ. ಹೀಗೆ ಮಾಡುವದು ಒಳಿತಲ್ಲ. ಇದರಿಂದ ಧನುರ್ವಾತದಂಥ ಬಹು ಭಯಂಕರ ರೋಗವಾಗುವ ಸಂಭವವಿರುತ್ತದೆ. ಗಾಯಗಳಿಗೆ ಗಾಳಿ ತಗಲಿಸಬಾರದು.

---

೩. ಒಳೆಯುವದು (ಉಳುಕು)

ಒಳೆದ ಭಾಗದಲ್ಲಿ ಬಾವು ನೋವು ಇರುವ ಸಂಭವವಿದೆ. ಅಲ್ಲಿ ಕೈ-ಹಚ್ಚಿದರೆ ಸ್ವಲ್ಪು ಕಾವು ಎನಿಸುತ್ತದೆ. ಭುಜದ ಕೀಲದ ಹತ್ತಿರ ಒಳೆದರೆ, ಆ ಭಾಗವನ್ನು ಅತ್ತಿತ್ತ ಚಲಿಸದಂತೆ. ಒಂದು ಮಾಲಾಕಾರದ ೩-೪ ಬೆರಳು ಅಗಲು ಇರುವ ಪಟ್ಟಿಯನ್ನು ಕೊರಳಲ್ಲಿ ಹಾಕಿ, ಅದರಲ್ಲಿ ಮೊಳಕೈ ಮುಂದಿನ ಭಾಗವನ್ನು ಇಡಬೇಕು. ಒಳೆದ ಭಾಗಕ್ಕೆ ಹಿಂಜಿದ ಅರಳೆಯ ಮಡಿಕೆಯನ್ನಿಟ್ಟು ಕಟ್ಟಬೇಕು. ನೋವು ಬಹಳ ಇದ್ದರೆ, ಕೊಬ್ಬರಿ ಎಣ್ಣೆಯಲ್ಲಿ ಟರ್ಪಣತೈಲ ಅಥವಾ ನೀಲಗಿರಿ ಎಣ್ಣೆಯನ್ನು ಕೂಡಿಸಿ, ಅದನ್ನು ಒಳೆದ ಭಾಗಕ್ಕೆ ಮೆಲ್ಲಗೆ ಹಚ್ಚಿ ಮರಿಗೀಕಾವಿನಿಂದ ಕಾಸಬೇಕು. ಅನಂತರ ಅರಳೆಯನ್ನಿಟ್ಟು ಕಟ್ಟಬೇಕು.

ಕಾಲು ಒಳೆದರೆ

[illegible] ಬಟ್ಟೆಯಿಂದ ಸುತ್ತಿ ಸುತ್ತಿ ಕಟ್ಟಬೇಕು. ಕಾಲಿನ ಕೆಳಗೆ ಗಾದಿಯ ಸುರುಳಿಯನ್ನಿಟ್ಟು ಅದರ ಮೇಲೆ ಕಾಲು ಇಟ್ಟು ಮಲಗಬೇಕು. ನೋವು ಇದ್ದರೆ ಮೇಲಿನಂತೆ ಎಣ್ಣೆಯನ್ನು ಹಚ್ಚಿ ಮಾಲೀಶನ್ನು ಕೊಡಬೇಕು. ಕಾಲು ತಿಕ್ಕಬಾರದು. ಒಳೆದ ಭಾಗಕ್ಕೆ ೬-೫ ಗಂಟೆಗಳಿಗೊಮ್ಮೆ, [illegible] ತೆಯ್ದು ಅದರ ಗಟ್ಟಿ ರಾಡಿಯನ್ನು ಹಚ್ಚಿ ಕಾಸಬೇಕು.

ಪೆಟ್ಟುಹತ್ತಿ ಬಾವು ಬಂದಿದ್ದರೆ

೬-೫ [illegible], ಗಂಟೆಗಳಿಗೊಮ್ಮೆ [illegible] ತೆಯ್ದು ಹಚ್ಚಿ ಕಾಸಬೇಕು.

---

೪. ಸಂದು ಅಥವಾ ಕೀಲು ತಪ್ಪುವದು

ಎರಡು ಎಲಬುಗಳು ಕೂಡಿಕೊಳ್ಳುವ ಸ್ಥಳಕ್ಕೆ ಸಂಧಿಯನ್ನುತ್ತಾರೆ. ಆ ಸಂಧಿಗಳಿಗೆ ಧಕ್ಕೆ ಹತ್ತಿ ಅಥವಾ ಆ ಎರಡೂ ಎಲಬುಗಳ ಮೇಲಿರುವ ಸ್ನಾಯುಗಳಿಗೆ ಧಕ್ಕೆ ಹತ್ತುವದರಿಂದ, ಸಂದು ತಪ್ಪುವ ಸಂಭವವಿರುತ್ತದೆ. ಸಾಮಾನ್ಯವಾಗಿ, ಭುಜ, ಮೊಳಕೈ, ತೊಡೆ ಮತ್ತು ಗದ್ದಗಳಲ್ಲಿ ಸಂದು ತಪ್ಪುವದು ಕಂಡುಬರುತ್ತದೆ.

ಸಂದು ತಪ್ಪಿದ ಸ್ಥಳದಲ್ಲಿ ವಿಲಕ್ಷಣ ವೇದನೆ ಇರುತ್ತದೆ. ಆ ಅವಯವಕ್ಕೆ ಚಲನವಲನ ಮಾಡಲು ಬರುವದಿಲ್ಲ. ಸಂದು ತಪ್ಪಿದ ಅವಯವದ, ಪಾರ್ಶ್ವದ ಅದರ ಜತೆಯ ಅವಯವವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ವ್ಯತ್ಯಾಸವು ಸ್ಪಷ್ಟವಾಗಿ ಕಂಡುಬರುತ್ತದೆ. ಸಂದು ತಪ್ಪಿದವನನ್ನು ಮಲಗಿಸಬೇಕು. ಸಂದು ತಪ್ಪಿದ ಅವಯವದ ಕೆಳಗೆ ತಲೆಗಿಂಬು ಇಡಬೇಕು. ಆ ಅವಯವವನ್ನು ಅಗಳಾಡಿಸಬಾರದು. ಸಂದು ತಪ್ಪಿದ ಭಾಗದ ಮೇಲೆ ಒದ್ದೆ ಬಟ್ಟೆಯನ್ನು ಇಡಬೇಕು. ಹಾಲು ಸಕ್ಕರೆ ಹಾಕದೆ, ಮಾಡಿದ

ಬಿಸಿ ಬಿಸಿ ಕಾಫಿ ಕೊಡಬೇಕು. ಇಷ್ಟು ಮಾಡುತ್ತಿರುವಾಗಲೇ ಡಾಕ್ಟರರನ್ನು ಕರೆಯಿಸುವದು. ಕೀಲುತಪ್ಪಿ ಹೊರಗೆ ಬಂದ ಎಲಬನ್ನು, ಪುನಃ ಕೀಲವಲ್ಲಿ ಕೂಡ್ರಿಸುವ ಕೆಲಸವನ್ನು ಒಳ್ಳೇ ವೈದ್ಯರಿಂದಲೇನೇ ಮಾಡಿಸಬೇಕೇ ಹೊರ್ತು ಸಿಕ್ಕ ಸಿಕ್ಕವರ ಕಡಿಂದ ಕೂಡ್ರಿಸುವ ಪ್ರಯತ್ನ ಮಾಡಬಾರದು.

---

೫. ಅಸ್ಥಿಭಂಗ

ಅಸ್ಥಿಭಂಗ ಎಂದರೆ ಎಲಬು ಮುರಿಯುವದು. ಇದಕ್ಕೆ ಅನೇಕ ಕಾರಣಗಳಿದ್ದರೂ ಅಪಘಾತವೇ ಮುಖ್ಯ ಕಾರಣವೆಂದು ಹೇಳಬಹುದು.

ಅಸ್ಥಿಭಂಗದಲ್ಲಿ, ವಿಚೂರ್ಣಿತ, ಪಿಚಿತ, ಕಾಂಡಭಗ್ನ, ಮಜ್ಜಾಗತ, ಛಿನ್ನ, ವಕ್ರಗಳೆಂಬ ಭೇದಗಳನ್ನು ಸುಶ್ರುತಾಚಾರ್ಯರು ಹೇಳಿದ್ದಾರೆ. ಸರ್ವಸಾಧಾರಣವಾಗಿ ಅಸ್ಥಿಭಂಗದಲ್ಲಿ ಕೆಳಗಿನಂತೆ ಆರು ಪ್ರಕಾರಗಳನ್ನು ಮಾಡಿದ್ದುಂಟು.

(೧) ಸಾಮಾನ್ಯ ಅಸ್ಥಿಭಂಗ, (೨) ಮಿಶ್ರ ಅಸ್ಥಿಭಂಗ, (೩) ಚೂರ್ಣಭಂಗ ಒಂದಕ್ಕಿಂತ ಹೆಚ್ಚುತುಂಡುಗಳಾಗುವದು, (೪) ಮರ್ಮಭಂಗ ಎಲಬು ಮುರಿದು ಅಂತರಿಂದ್ರಿಯಗಳಿಗೆ ಅಪಾಯವಾಗುವದು, (೫) ಮಜ್ಜಾಗತ-ಮುರಿದ ಎಲುಬು ಅದೇ ಎಲುಬಿನೊಳಗೆ ಸೇರಿಕೊಳ್ಳುವದು, (೬) ವಕ್ರಭಂಗ.

(೧) ಸಾದಾ ಅಥವಾ ಸಾಮಾನ್ಯ ಅಸ್ಥಿಭಂಗ:- ಎಲಬು ಮುರಿಯುವದು. ಆದರೆ ಆ ಎಲಬಿನ ತುಣುಕು, ಹೊರಗೆ ಹಾಯುವದಿಲ್ಲ. ಹೀಗಾದಲ್ಲಿ ಸಾಮಾನ್ಯ ಅಸ್ಥಿಭಂಗವೆಂದು ತಿಳಿಯಬೇಕು.

(೨) ಸಂಯುಕ್ತ ಅಥವಾ ಮಿಶ್ರ ಅಸ್ಥಿಭಂಗ:— ಇದರಲ್ಲಿ ಎಲಬು ಮುರಿದು, ಎಲಬಿನ ತುಣುಕು ಹೊರಗೆ ಹಾಯುತ್ತದೆ. ಅಂದರೆ ಎಲಬು ಮತ್ತು ಹೊರಗಿನ ಹವೆ ಇವುಗಳ ಪರಸ್ಪರ ಸಂಬಂಧ ಉಂಟಾಗುವದು.

(೩) ಚೂರ್ಣಭಂಗ:— ಎಲಬು ಒಂದೇ ಕಡೆ ಮುರಿಯದೆ, ಅನೇಕ ತುಂಡುಗಳಾಗುವದು.

(೪) ಮರ್ಮಭಂಗ:— ಎಲಬು ಮುರಿದು ಅಂತರಿಂದ್ರಿಯಗಳಿಗೆ ಅಪಾಯವಾಗುವದು. ಪಕ್ಕಡಿ ಎಲಬು ಮುರಿದು ಪುಪ್ಪುಸಕ್ಕೆ ಧಕ್ಕೆಯಾಗಬಹುದು.

(೫) ಸಂವಿಷ್ಟಭಂಗ:— ಮುರಿದ ಎಲಬು ಅದೇ ಎಲಬಿನೊಳಗೆ ಸೇರಿಕೊಳ್ಳುವದು. ಎಲಬು ಮುರಿದು ಎರಡು ತುಂಡು ಆಗಿ, ಒಂದರ ತುದಿಯು ಮತ್ತೊಂದರಲ್ಲಿ ಸೇರಿಕೊಳ್ಳುವದು.

(೬) ವಕ್ರಭಂಗ:— ಎಲಬು ಮುರಿಯದೆ, ಬಗ್ಗುತ್ತದೆ. ಇದು ಹೆಚ್ಚಾಗಿ ಚಿಕ್ಕಮಕ್ಕಳಲ್ಲಿ ಕಂಡುಬರುತ್ತದೆ.

ಎಲಬು ಮುರಿದ ಲಕ್ಷಣಗಳು

(೧) ಎಲಬು ಮುರಿದ ಸ್ಥಳದಲ್ಲಿ ಬಾವು ಮತ್ತು ನೋವು ಇರುತ್ತದೆ.

(೨) ಎಲಬು ಮುರಿದ ಸ್ಥಳದ ಮೇಲೆ ಕೈಯಾಡಿಸಿ ನೋಡಿದರೆ, ಸಮ ಪಾತಳಿಯು ಹತ್ತುವದಿಲ್ಲ. ಒತ್ತಟ್ಟಿಗೆ ತುಸು ಎತ್ತರ ಅದರ ಹತ್ತರವೇ ತುಸು ಕೆಳಕ್ಕೆ ಆದಂತೆ ಅನಿಸುತ್ತದೆ.

(೩) ಮುರಿದ ಅವಯವದ ಎರಡೂ ತುದಿಗಳನ್ನು ಹಿಡಿದು, ಮೆಲ್ಲನೆ ಅಲುಗಾಡಿಸಿ ನೋಡಿದರೆ, ಅಲ್ಲಿ ಕರ್ ಕರ್, ಎಂಬ ಶಬ್ದವು ಕೇಳಬರುತ್ತದೆ.

(೪) ಮುರಿದ ಅವಯವವು ತನ್ನಷ್ಟಕ್ಕೆ ತಾನೇ ಜೋತಾಡಹತ್ತುವದು.

(೫) ಎಲಬು ಮುರಿದ ಅವಯವದ ಆಕಾರವು ತುಸು ಚಿಕ್ಕದಾಗುತ್ತದೆ. ಅದಕ್ಕೆ ಸಮಾನವಾದ ಅವಯವದೊಡನೆ ಸರಿಹೋಲಿಸಿ ನೋಡಿದರೆ, ಆಕಾರವು ಚಿಕ್ಕದಾದದ್ದು ಸಹಜವಾಗಿ ತಿಳಿದುಬರುವದು.

ಅಸ್ಥಿಭಂಗದ ಸಾಮಾನ್ಯ ಉಪಾಯಗಳು

ವೈದ್ಯಶಾಸ್ತ್ರದ ಜ್ಞಾನವಿಲ್ಲದವರು, ಮುರಿದ ಎಲಬು ಕೂಡ್ರಿಸುವ ಹವ್ಯಾಸಕ್ಕೆ ಹೋಗಬಾರದು. ವೈದ್ಯರನ್ನು ಕರೆಕಳಿಸಿ ಅವರು ಬರುವ ತನಕ, ಮುಂದಿನ ಉಪಚಾರ ಮಾಡಬೇಕು.

ಎಲುಬು ಮುರಿದ ಅವಯವಕ್ಕೆ ಪೂರ್ಣ ವಿಶ್ರಾಂತಿಯನ್ನು ಕೊಡಬೇಕು. ಎಲುಬು ಮುರಿದ ಅವಯವವನ್ನು ಇದ್ದಕ್ಕಿದ್ದಂತೆ ಇಟ್ಟು ಮೇಲೆ ಮತ್ತು ಕೆಳಗೆ ಸ್ವಲ್ಪ ಹೆಚ್ಚು ಅರಳೆಯನ್ನಿಡಬೇಕು. ನಂತರ ಮೇಲೆ ಮತ್ತು ಕೆಳಗೆ ದೇವದ್ವಾರದ ಫಲಕಗಳನ್ನು ಇಟ್ಟು, ಉದ್ದ ಅರಿವೆಯ ಪಟ್ಟಿಯಿಂದ ಸುತ್ತಿ ಸುತ್ತಿ ಕಟ್ಟಬೇಕು. ದೇವದ್ವಾರದ ಪಟ್ಟಿ ಸಿಗದೆ ಹೋದರೆ ದಪ್ಪ ರಟ್ಟಿನ ಪಟ್ಟಿಗಳನ್ನು ಕತ್ತರಿಸಿ, ಅವುಗಳನ್ನು ಫಲಕಗಳಂತೆ ಉಪಯೋಗಿಸಿಕೊಳ್ಳಬೇಕು. ಇದೂ ದೊರೆಯದೆ ಇದ್ದರೆ ಬಿದರು ಸೀಳಿ ಅವುಗಳನ್ನು ಉಪಯೋಗಿಸಬೇಕು. ಡಾಕ್ಟರರು ಬಂದನಂತರ, ಯೋಗ್ಯ ಉಪಚಾರವನ್ನು ಮಾಡಿಯೇ ಮಾಡುವರು. ಈಗಿನ ಸುಧಾರಣೆಯ ಕಾಲದಲ್ಲಿ ದೊಡ್ಡ ದೊಡ್ಡ ಶಹರಗಳಲ್ಲಿ ಎಕ್ಸ ರೇ (ಕ್ಷ ಕಿರಣ) ಇರುತ್ತವೆ. ಅದರಿಂದ ಮುರಿದ ಎಲುಬಿನ ನಿಜಜ್ಞಾನ ಮಾಡಿಕೊಂಡು ಡಾಕ್ಟರರು ಮುರಿದ ಎಲುಬನ್ನು, ಉತ್ತಮ ರೀತಿಯಿಂದ ಕೂಡ್ರಿಸುವರು.

ಎಲುಬು ಮುರಿದ ಭಾಗವನ್ನು ಉಣ್ಣೆಯ ವಸ್ತ್ರದಿಂದ, ಅಥವಾ ಕಂಬಳಿ ಹುರಡಿಯಿಂದ ಸುತ್ತಬೇಕು.

ಎಲಬು ಮುರಿದಾಗ ಲಕ್ಷ್ಯದಲ್ಲಿಡತಕ್ಕ ಸಂಗತಿಗಳು

(೧) ಎಲುಬು ಮುರಿದ ಭಾಗಕ್ಕೆ ಹೆಚ್ಚು ಅಪಾಯವಾಗದಂತೆ ನೋಡಿಕೊಳ್ಳಬೇಕು.

(೨) ಡಾಕ್ಟರರು ಬರುವ ವರೆಗೆ ಅವನನ್ನು ಆ ಸ್ಥಳದಿಂದ ಬೇರೆ ಕಡೆಗೆ ಕರೆದುಕೊಂಡು ಹೋಗಬಾರದು.

(೩) ರಕ್ತಸ್ರವಿಸುತ್ತಿದ್ದರೆ ಮೊದಲು ಅದನ್ನು ನಿಲ್ಲಿಸುವ ಉಪಾಯ ಕೈಕೊಳ್ಳಬೇಕು.

(೪) ಎಲುಬು ಮುರಿದ ಅವಯವವನ್ನು ಪೂರ್ವಸ್ಥಿತಿಗೆ ತಂದು ಇಡಲು ಯುಕ್ತಿಯಿಂದ ಪ್ರಯತ್ನಿಸಬೇಕು.

(೫) ಎಲಬು ಮುರಿದ ಅವಯವವು ಜೋತಾಡದಂತೆ ಅದಕ್ಕೆ ಯೋಗ್ಯ ಆಧಾರವನ್ನು ಕೊಡಬೇಕು.

ತಲೆಬುರುಡೆಯ ಎಲುಬು ಮುರಿದರೆ

ಇದಕ್ಕೆ ಪ್ರತ್ಯಕ್ಷ ಆಘಾತವೇ ಕಾರಣವೆಂದು ಹೇಳಬಹುದು. ಗಾಯ ಮತ್ತು ವಿಸ್ಮೃತಿ ಬಹಳವಾಗಿ ಇದ್ದೇ ಇರುತ್ತವೆ. ಮೊದಲನೇದಾಗಿ ವೈದ್ಯರನ್ನು ಕರೆಸುಕಳಬೇಕು. ಅವರು ಬರುವ ವರೆಗೆ ಮಾಡುವ ಉಪಾಯಗಳು:— ರೋಗಿಯನ್ನು ಒಂದು ಮಗ್ಗುಲಿಗೆ ಮಲಗಿಸಿ ಅವನ ತಲೆಯನ್ನು ಧಡಕ್ಕಿಂತಲೂ ತುಸು ಕೆಳಗೆ ಆಗುವಂತೆ ಮಾಡಬೇಕು. ಬೋರಿಕ್‌ಪುಡಿ ಅಥವಾ ಸಂಗಜೀರಿಗೆಪುಡಿ ಹಾಕಿದ ನೀರಿನಿಂದ, ಅಥವಾ ಸಾದಾ ಬಿಸಿನೀರಿನಿಂದ ಗಾಯವನ್ನು ತೊಳೆದು ಅರಿವೆಯಿಂದ ಒರಿಸಬೇಕು. ಅದರ ಮೇಲೆ ಅರಿವೆಯನ್ನಿಟ್ಟು ತ್ರಿಕೋಣಪಟ್ಟಿಯಿಂದ ಕಟ್ಟಬೇಕು. ಕಟ್ಟು ಬಹಳ ಬಿಗಿ ಆಗಬಾರದು. ರೋಗಿಯ ಪಾದಗಳಿಗೆ ಬಿಸಿಪುಡಿ ಹಚ್ಚಿ ತಿಕ್ಕಬೇಕು. ಕಾಲುಗಳ ಮೇಲೆ ಬಿಸಿನೀರಿನ ರಬ್ಬರ ಚೀಲಗಳನ್ನು, ಅಥವಾ ಬಿಸಿನೀರು ತುಂಬಿ ಉತ್ತಮ ಗಟ್ಟಿ ಬೂಚು ಹಾಕಿದ ಬಾಟ್ಲಿಗಳನ್ನು ಇಡಬೇಕು. ಅವನಿಗೆ ಸ್ಮೃತಿ ಇದ್ದಿಲ್ಲವೆಂದರೆ, ಚಾಹ ಅಥವಾ ಬೇರೆ ಉತ್ತೇಜಕ ಪೇಯಗಳನ್ನು ಕೊಡಲು ಪ್ರಯತ್ನಿಸಬಾರದು. ಅವನನ್ನು ಬೇರೆಕಡೆಗೆ ಒಯ್ಯುವದೇ ಆದಲ್ಲಿ ಹೊರಸಿನ ಮೇಲೆ ಮಲಗಿಸಿ ಅವನನ್ನು ಕರೆದುಕೊಂಡು ಹೋಗಬೇಕು. ಅವಶ್ಯ ಕಂಡಲ್ಲಿ, ಸುವರ್ಣಯುಕ್ತ ಸೂತಶೇಖರ, ಹೇಮಗರ್ಭಗಳನ್ನು ಕೊಡಬೇಕು.

ಗದ್ದದ ಎಲುಬು ಮುರಿದರೆ

ಬಾಯಿಯೊಳಗೆ ಬರ್ಫದ ಚೂರು ಕೊಡಬೇಕು. ತ್ರಿಕೋಣ ಆಕಾರದ ಪಟ್ಟಿಮಾಡಿ, ಅದನ್ನು ಗದ್ದದ ಕೆಳಗೆ ಮಾಡಿ ಅದರ ಎರಡೂ ತುದಿಗಳನ್ನು ತಲೆಯ ಮೇಲೆ ವಿರುದ್ಧ ದಿಶೆಗೆ ತೆಗೆದುಕೊಂಡು, ಎರಡೂ ಕಿವಿಗಳ ಹತ್ತರ ಪಟ್ಟಿಯನ್ನು ತರಬೇಕು. ಅಲ್ಲಿ ಎರಡೂ ತುದಿ ಕೂಡಿಸಿ ಸೇಫ್ಟಿ ಪಿನ್ನು ಹಾಕಬೇಕು. ವೈದ್ಯರನ್ನು ಕರೆಯಿಸಿಕೊಳ್ಳಬೇಕು.

ಪಕ್ಕೆಎಲುಬು ಮುರಿದರೆ

ಪಕ್ಕಡಿಯ ಕೆಳಗಿನ ಎಲುಬು ಮುರಿದರೆ ಫುಪ್ಫುಸ ಯಕೃತ ಪ್ಲೀಹ ಈ ಇಂದ್ರಿಯಗಳಿಗೆ ಅಪಾಯವಾಗುವ ಸಂಭವವಿರುತ್ತದೆ. ಇದು ಪ್ರತ್ಯಕ್ಷ

ಆಘಾತದಿಂದ ಆಗುತ್ತಿರುತ್ತದೆ. ಸಾಮಾನ್ಯವಾಗಿ ಮಧ್ಯ-ಪಕ್ಕದಲ್ಲಿನ ಪಕ್ಕೆಲು-ವುಗಳು ಮುರಿಯುವ ಸಂಭವ ಯಾವಾಗಲೂ ಇರುತ್ತದೆ.

ಲಕ್ಷಣಗಳು:- ಅಸ್ಥಿಭಂಗವಾದ ಸ್ಥಳದಲ್ಲಿ ವಿಲಕ್ಷಣ ನೋವು ಇರು-ತ್ತದೆ. ಶ್ವಾಸ ತೆಗೆದುಕೊಳ್ಳುವಾಗ ಆ ನೋವು ಹೆಚ್ಚಾಗುತ್ತದೆ. ಆ ಸ್ಥಳದ ಮೇಲೆ ಕೈ ಇಟ್ಟು ಅವನಿಗೆ ಶ್ವಾಸ ತೆಗೆದುಕೊಳ್ಳಲು ಹೇಳಬೇಕು. ಆಗ ಅಲ್ಲಿ ಮುರಿದ ಎಲುಬಿನ ಎರಡೂ ತುದಿಗಳ ಘರ್ಷಣವಾದದ್ದು ತಿಳಿದು-ಬರುತ್ತದೆ. ಪುಪ್ಪುಸಕ್ಕೆ ಧಕ್ಕೆಯಾಗಿದ್ದರೆ ಉಗುಳಿನ ಗೂಡ ರಕ್ತ ಬರುತ್ತದೆ.

ಉಪಚಾರ:— ಅವನ ತಲೆ ಮತ್ತು ಎದೆಗಳು ತುಸು ಎತ್ತರವಾಗುವಂತೆ ಮಾಡಿ ಸ್ವಲ್ಪ ಮಗ್ಗಲುಮಾಡಿ ಮಲಗಿಸಬೇಕು. ಎದೆಯ ಮೇಲಿನ ಅರಿವೆ ಗಳನ್ನು ಸಡಲಿಸಬೇಕು. ತಿನ್ನಲಿಕ್ಕೆ ಬರ್ಫ ಕೊಡಬೇಕು. ಎಲುಬು ಮುರಿದ ಸ್ಥಳದ ಮೇಲೆ ಬರ್ಫದ ಚೀಲವನ್ನು ಇಡಬೇಕು. ಎದೆಯ ಮಧ್ಯ ಭಾಗದಿಂದ ಬೆನ್ನೆಲುವಿನವರೆಗೆ ಒಂದೇ ಒಂದು ಪಟ್ಟಿ ಇರಬೇಕು.

ಎಲುಬು ಮುರಿದ ಸ್ಥಳಕ್ಕೆ ಸ್ಟಿಕಿಂಗ ಪ್ಲಾಸ್ಟರದ ಪಟ್ಟಿಯನ್ನು ಹಚ್ಚ-ಬೇಕು. ಅಥವಾ ಅರಳೆಯನ್ನಿಟ್ಟು ತ್ರಿಕೋನಾಕಾರದ ಕಟ್ಟು ಕಟ್ಟಬೇಕು. ಬೇರೆ ಕಡೆಗೆ ಕರೆದುಕೊಂಡು ಹೋಗುವದಿದ್ದರೆ, ಕುರ್ಚಿಯ ಮೇಲೆ ಕೂಡ್ರಿಸಿ ಕರೆದೊಯ್ಯಬೇಕು. ಡಾಕ್ಟರರಿಗೆ ಹೇಳಿಕಳುಹಿಸುವದು.

ಬೆನ್ನೆಲುಬು-ಮಣಿ ಎಲುಬು ಮುರಿದರೆ

ಮಣಿ ಎಲುಬು ಮುರಿಯುವದರಿಂದ, ಸುಷುಮ್ನಾನಾಡಿ ಹಾಗು ಮಜ್ಜಾತಂತುಗಳಿಗೆ ಧಕ್ಕೆಯಾಗುವ ಸಂಭವವಿದೆ. ಕುತ್ತಿಗೆಯ ಮೇಲೆ ಇರುವ ಮಣಿ ಎಲುಬು ಮುರಿದರೆ ಮರಣ ಸಂಭವಿಸುವದುಂಟು. ಮಣಿ ಎಲಬು ಮುರಿದರೆ, ಅದರ ಕೆಳಗಿನ ಶರೀರದ ಭಾಗಕ್ಕೆ ಪಕ್ಷಾಘಾತವಾಗುವದು.

ಉಪಚಾರ:— ಮುರಿದ ಎಲುಬನ್ನು ಒತ್ತಿ ಒತ್ತಿ ಪರೀಕ್ಷಿಸುವ ಗೋಜಿಗೆ ಹೋಗಬಾರದು. ಮೊದಲು ಡಾಕ್ಟರರನ್ನು ಕರೆಯಿಸಲು ಹೇಳಿರಿ. ಬಿಸಿ ಬಿಸಿ ಕಾಫಿ ಕೊಡಬೇಕು. ಕಾಲುಗಳ ಮೇಲೆ ಬಿಸಿ ಬಿಸಿ ನೀರಿನ ರಬ್ಬರ ಚೀಲವನ್ನು ಇಡಬೇಕು. ಕಂಬಳಿ ಹೊಚ್ಚಬೇಕು. ಅವನನ್ನು ಮಲಗಿ [illegible] ಮಲಗಿಸಬೇಕು. ಬೇರೆ ಕಡೆಗೆ ತೆಗೆದುಕೊಂಡು ಹೋಗುವದೇ

ಅದರಲ್ಲಿ ಬಾಗಿಲದಂಥ ಫಳಿಯ ಮೇಲೆ ಬೆನ್ನ ಕೆಳಗೆ ಮಾಡಿ ಅಂದರೆ ಅಂಗಾತ ಮಲಗಿಸಿ ಕರೆದುಕೊಂಡು ಹೋಗಬೇಕು. ಹೊರಸಿನ ಮೇಲೆ ಮಲಗಿಸ ಬಾರದು

ಕಟಿ ಅಸ್ಥಿಭಂಗ

ಈ ಎಲುಬು ಮುರಿದರೆ, ಮೂತ್ರಾಶಯ ದೊಡ್ಡಕರಳು ಮೊದಲಾದ ಅಂತರಿಂದ್ರಿಯಗಳಿಗೆ ಧಕ್ಕೆ ತಗಲುವ ಸಂಭವ ಬಹಳ ಇದೆ. ಟೊಂಕದಲ್ಲಿ ಶಕ್ತಿ ಉಳಿಯುವದಿಲ್ಲ. ನಿಲ್ಲಲಿಕ್ಕೆ ಬರುವದಿಲ್ಲ. ಈ ಲಕ್ಷಣಗಳು ಕಟಿ ಎಲುಬು ಮುರಿದಾಗ ಆಗುವವು. ಮೂತ್ರಾಶಯಕ್ಕೆ ಅಪಾಯವಾಗಿದ್ದರೆ ಮೂತ್ರದಗೂಡ ರಕ್ತವು ಬರುತ್ತದೆ.

ಉಪಚಾರ:-- ಡಾಕ್ಟರರನ್ನು ಕರೆಕಳಿಸುವದು. ತ್ರಿಕೋಣಾಕಾರದ ಅಗಲ ಅರಿವೆಯನ್ನು ಟೊಂಕಕ್ಕೆ ಕಟ್ಟಿ ಅದರ ಎರಡೂ ತುದಿಗಳನ್ನು ಮುಂಭಾಗಕ್ಕೆ ತಂದು ಅಪ್ಪಿಗಂಟು ಹಾಕಬೇಕು. ಅವನನ್ನು ಮಲಗಿದಲ್ಲಿಯೆ ಮಲಗಿಸಬೇಕು. ಬಿಸಿ ಬಿಸಿ ಕಾಫಿ ಕೊಡಬೇಕು. ಹಿಂಬಡ ಆರಂಭ ಮಾಡಿ ಭುಜದವರೆಗೆ ಆಗುವಂತೆ ಎರಡು ಫಲಕಗಳನ್ನು ಶರೀರದ ಎರಡೂ ಬದಿಗೂ ಇಟ್ಟು ಕಟ್ಟಬೇಕು. ಫಲಕಗಳು ತುಸು ಉದ್ದ ಇದ್ದು ಪಾದದ ಕಿಂತಲೂ ತುಸು ಮುಂದೆ ಇಡಬೇಕು.

ಜತ್ರುವಿನಭಂಗ (ಕೊರಳೆಲುಬು)

ಈ ಎಲಬು ಕುತ್ತಿಗೆಯ ಕೆಳಗೆ ಎಡಕ್ಕೆ ಮತ್ತು ಬಲಕ್ಕೆ ಇರುತ್ತವೆ. ಈ ಎಲಬು ಮುರಿದಾಗ, ಮೊದಲು ಕೋಟನ್ನು ಕತ್ತರಿಸಿ ತೆಗೆಯಬೇಕು. ಮುರಿದ ಎಲಬಿನ ಕಡೆಯ ಕೊಂಕಳದಲ್ಲಿ ಒಂದು ಚಿಕ್ಕ ಅರಿವೆಯ ಸುರಳಿಯನ್ನಿಟ್ಟು ಆ ಬದಿಯ ಭುಜವನ್ನು ಪಕ್ಕಡಿಗೆ ಜೋಡಿಸಿ, ಭುಜ ಮತ್ತು ಪಕ್ಕಡಿ ಕೂಡಿಯೇ ಆಗುವಂತೆ ಕಟ್ಟು ಕಟ್ಟಬೇಕು. ಇದನ್ನು ಕಟ್ಟುತ್ತಿರುವಾಗ ಕಟ್ಟಿನ ಒಂದೊಂದು ಸುತ್ತನ್ನು ಬೆನ್ನ ಕಡೆಯಿಂದ ಆ ಮುರಿದ ಎಲುಬಿನ ಮೇಲೆ ತಂದು ಮುಂದೆ ಹಾಯಿಸಿ ಕಟ್ಟಬೇಕು.

ಒಂದು ಅಗಲು ಪಟ್ಟಿಯನ್ನು ಮೂಲಾಕಾರಮಾಡಿ, ಕೊರಳಿನಲ್ಲಿ ಹಾಕಿ ಅದರಲ್ಲಿ ಮೊಳಕೈ ಇಡಬೇಕು. ಇದರಿಂದ ಮುರಿದ ಎಲಬಿಗೆ ವಿಶ್ರಾಂತಿ ದೊರೆಯುತ್ತ

ಭುಜಾಸ್ಥಿ ಭಂಗ

ಭುಜದ ಎಲುಬು ಮುರಿದರೆ, ಮೈಮೇಲಿನ ಅಂಗಿಯನ್ನು ಅವನಿಗೆ ತೊಂದರೆಯಾಗದಂತೆ ತೆಗೆಯಬೇಕು. ಒಂದು ವೇಳೆ ಸುಲಭವಾಗಿ ಬರುತ್ತಿದ್ದಿಲ್ಲವೆಂದರೆ ಕತ್ತರಿಯಿಂದ ಕತ್ತರಿಸಿಬಿಡಬೇಕು. ಮುರಿದ ಎಲುಬನ್ನು ಯುಕ್ತಿಯಿಂದ ತಂದು ಜಗ್ಗಿ ಸರಿಯಾಗಿ ಕೂಡಿಸಬೇಕು. ಅದರ ಮೇಲೆ ಹಿಂಜಿದ ಅರಳೆಯನ್ನಿಡಬೇಕು. ಅನಂತರ ಮೇಲೆ ಮತ್ತು ಕೆಳಗೆ ತೆಳುವಾದ ದೇವದ್ವಾರದ ಫಲಕಗಳನ್ನಿಟ್ಟು ಕಟ್ಟಬೇಕು. ಭುಜವು ಅಲುಗಾಡಬಾರದೆಂದು ಮೊಳಕೈಗೆ ತ್ರಿಕೋಣಾಕಾರದ ಅಗಲ ಅರಿವೆಯನ್ನು ಹಾಕಿ, ಅದರ ಎರಡೂ ತುದಿಗಳಿಗೆ ಗಂಟು ಹಾಕಿ ಕೊರಳಲ್ಲಿ ಹಾಕಬೇಕು ಅದರಿಂದ ಕೈ ಜೋತಾಡದೆ, ಜೋಳಿಗೆಯ ಆಶ್ರಯದಲ್ಲಿ ಉಳಿಯುವದು.

ಅಗ್ರಬಾಹುವಿನ ಅಸ್ಥಿಭಂಗ

ಅಗ್ರಬಾಹು ಎಂದರೆ ಮೊಳಕೈ. ಇಲ್ಲಿ ಎರಡು ಎಲಬುಗಳಿರುತ್ತವೆ. ಒಂದು ಅಥವಾ ಎರಡೂ ಎಲುಬುಗಳು ಮುರಿಯಬಹುದು. ಮುರಿದ ಎಲಬುಗಳನ್ನು ಸರಿಯಾಗಿ ಕೂಡ್ರಿಸಿ, ಅರಳೆಯನ್ನಿಟ್ಟು ಮೇಲೆ ಮತ್ತು ಕೆಳಗೆ ಫಲಕಗಳನ್ನಿಟ್ಟು ಕಟ್ಟಬೇಕು. ಫಲಕಗಳು ಮೊಳಕೈ ಕೀಲ ಹಿಡಿದು ತುದಿಬೆರಳಿನ ವರೆಗೆ ಬರುವಷ್ಟು ಉದ್ದವಿರಬೇಕು. ಕಟ್ಟು ಕಟ್ಟುವಾಗ ಹೆಬ್ಬೆರಳನ್ನು ಕಡೆಗೆ ಬಿಟ್ಟಿರಬೇಕು. ಮೊಳಕೈಗೆ ತ್ರಿಕೋಣಾಕಾರದ ಅಗಲ ಅರಿವೆ ಹಾಕಿ, ಅದರ ಎರಡೂ ತುದಿಗಳಿಗೆ ಗಂಟು ಹಾಕಿ, ಅದನ್ನು ಕೊರಳಿಗೆ ಹಾಕಿಕೊಳ್ಳಬೇಕು.

ಮುಂಗೈ ಮತ್ತು ಹಸ್ತದೊಳಗಿನ ಎಲಬು ಮುರಿದರೆ

ಮುಂಗೈ ಮತ್ತು ಹಸ್ತಗಳಿಗೆ ಸರಿಯಾಗುವಂತೆ, ಎರಡು ಫಲಕಗಳನ್ನು ತೆಗೆದುಕೊಂಡು, ಅವುಗಳಿಗೆ ಅರಳೆಯನ್ನು ಸುತ್ತಿ, ಮೇಲೆ ಮತ್ತು ಕೆಳಗೆ ಇಟ್ಟು ಕಟ್ಟಬೇಕು. ಮುಂಗೈಯನ್ನು, ಮಾಲಾಕಾರದ ಅಗಲು ಅರಿವೆಯ ಪಟ್ಟಿಯಲ್ಲಿ ಇಟ್ಟು ಕೊರಳಿಗೆ ಹಾಕಿಕೊಳ್ಳಬೇಕು.

ತೊಡೆಯ ಎಲಬು ಮುರಿದರೆ

ಅವನನ್ನು ಅಂಗಾತ ಮಲಗಿಸಬೇಕು. ಒಬ್ಬರು ಮುಂದ ತೊಡೆಯ

ಮೇಲ್ಭಾಗವನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿಯಬೇಕು. ಬೇರೊಬ್ಬರು ಅವನ ಪಾದವನ್ನು ಹಿಡಿದು ಜಗ್ಗಬೇಕು. ಆಗ ಮುರಿದ ಕಾಲು ಬೇರೆ ಕಾಲಿನಷ್ಟೇ ಉದ್ದವಾಗಿದೆಯೆಂದು ತಿಳಿದುಬಂದ ನಂತರ, ಬಗಲು ಹಿಡಿದು ಪಾದದ ತನಕ ಬರುವಂತೆ ಒಂದು ಫಲಕ, ಹೊರಬದಿಗೆ—ತೊಡೆಯ ಒಳಭಾಗದಿಂದ ಪಾದದ ವರೆಗೆ ಬರುವಂತೆ ಮತ್ತೊಂದು ಫಲಕ. ಮೊದಲು ಮುರಿದ ಸ್ಥಳದ ಮೇಲೆ ಅರಳೆಯನ್ನಿಡಬೇಕು, ಆ ಮೇಲೆ ಫಲಕಗಳನ್ನಿಟ್ಟು ಸರಿಯಾಗಿ ಕಟ್ಟು ಕಟ್ಟಬೇಕು. ಕಟ್ಟುವ ಪೂರ್ವದಲ್ಲಿ ಬಗಲು ಮತ್ತು ತೊಡೆಯ ಸಂದುಗಳಲ್ಲಿ ಚಿಕ್ಕ ಅರಳೆಯ ಸುರುಳಿ ಮಾಡಿ ಇಡಬೇಕು.

ಮೊಳಕಾಲ ಎಲುಬು ಮುರಿದರೆ

ಮೊಳಕಾಲಿನಲ್ಲಿಯೂ ಎರಡು ಎಲುಬುಗಳಿರುತ್ತವೆ. ಮುರಿದ ಕಾಲನ್ನು ಸರಿಯಾಗಿ ಜೋಡಿಸಬೇಕು. ಅದರ ಮೇಲೆ ಅರಳೆಯನ್ನಿಡಬೇಕು. ಆ ಮೇಲೆ ಅದಕ್ಕೆ ಸರಿಹೋಗುವಂಥ ಆಕಾರದ ಎರಡು ಫಲಕಗಳನ್ನು ಮೇಲೆ ಎಡಬಲಕ್ಕೆ ಇಟ್ಟು ಕಟ್ಟು ಕಟ್ಟಬೇಕು. ಫಲಕಗಳು ಮೊಳಕಾಲಿನಗಿಂತ ತುಸು ಉದ್ದವಿರಬೇಕು. ಕಾಲು ಅಗಳಾಡಿಸಬಾರದು. ಅವಶ್ಯವೆನಿಸಿದಲ್ಲಿ ಎರಡೂ ಕಾಲು ಜೋಡಿಸಿ ಕಟ್ಟಿ ಇಡಬೇಕು.

ಪಾದದ ಎಲುಬು ಮುರಿದರೆ

ಅರಳೆ ಸುತ್ತಿದ ಎರಡು ಫಲಕಗಳನ್ನು ಪಾದದ ಮೇಲೆ ಒಂದು ಕೆಳಗೆ ಒಂದು ಇಟ್ಟು ಕಟ್ಟು ಕಟ್ಟಬೇಕು. ಪಾದದ ಕೆಳಗಿನ ಫಲಕ ತುಸು ಉದ್ದ ಇರಬೇಕು. ಆ ಭಾಗಕ್ಕೆ ವಿಶ್ರಾಂತಿಯನ್ನು ಕೊಡಬೇಕು.

೬ ನೀರಿನಲ್ಲಿ ಮುಳುಗುವದು

ಮುಳುಗಿದವನನ್ನು ಶಕ್ಯವಾದಷ್ಟು ಶೀಘ್ರ ಮೇಲೆ ತೆಗೆಯಬೇಕು. ಅವನ ಬಾಯಿಯಲ್ಲಿ ಬೆರಳು ಹಾಕಿ ಅಲ್ಲಿ ಏನಾದರೂ ಕಸರು, ಕೆಸರು ಸಿಕ್ಕಿಕೊಂಡಿದ್ದರೆ ಹೊರಗೆ ತೆಗೆಯಬೇಕು. ಮೈ ಮೇಲಿನ ಒದ್ದೆ ಬಟ್ಟೆಗಳನ್ನು ತೆಗೆಯಬೇಕು. ಅವನನ್ನು ಡಬ್ಬು ಮಲಗಿಸಿ, ಹೊಟ್ಟೆಯ ಕೆಳಗೆ ಎರಡೂ ಕೈಗಳನ್ನು ಹಾಕಿ ಮೇಲಕ್ಕೆ ಎತ್ತಿ ಪುನಃ ಕೆಳಗೆ ಬಿಡಬೇಕು. ಹೀಗೆ ೫-೬ ಸಲ ಮಾಡಬೇಕು. ಹೀಗೆ ಮಾಡುವದರಿಂದ ಹೊಟ್ಟೆ ಪುಪ್ಪುಸಗಳಲ್ಲಿ ಸೇರಿಕೊಂಡ ನೀರು ಹೊರಗೆ ಬರುತ್ತದೆ. ಉಸಿರಾಡಿಸುವದು ನಿಂತಿದ್ದರೆ, ಅವನನ್ನು ಅಂಗಾತ ಮಲಗಿಸಿ ಕೃತ್ರಿಮ ಶ್ವಾಸೋಚ್ಛಾಸವನ್ನು ಪ್ರಾರಂಭಿಸಲು ಪ್ರಯತ್ನಿಸಬೇಕು.

ಕೃತ್ರಿಮ ಶ್ವಾಸೋಚ್ಛ್ವಾಸದ ರೀತಿ

ರೋಗಿಯನ್ನು ಅಂಗಾತ ಮಲಗಿಸಬೇಕು. ಅವನ ಮೈ ಮೇಲಿನ ಒದ್ದೆ ಬಟ್ಟೆಗಳನ್ನೆಲ್ಲ ತೆಗೆಯಬೇಕು. ಅವನ ಕುತ್ತಿಗೆಯ ಕೆಳಗೆ ಸಲ್ಪ ಹೆಚ್ಚು ಅಗಲು ಉಳ್ಳ ದಿಂಬು ಇಡಬೇಕು. ನಂತರ ಒಬ್ಬರು ಅವನ ನಾಲಿಗೆಯನ್ನು ಹೊರಗೆ ಜಗ್ಗಿ ಅರಿವೆಯಿಂದ ಹಿಡಿಯಬೇಕು. ಮತ್ತೊಬ್ಬರು, ಅವನ ತಲೆಯ ಹತ್ತರ ಮೊಣಕಾಲೂರಿ ಕೂತುಕೊಂಡು ಆ ರೋಗಿಯ ಎರಡೂ ಕೈಗಳನ್ನು ತಾನು ಕೂತಕಡೆಗೆ ಮೇಲೆ ತೆಗೆದುಕೊಂಡು, ಎರಡು ಸೆಕೆಂದು ಬಿಟ್ಟು ಪುನಃ ಅವೆರಡೂ ಕೈಗಳನ್ನು ಕೆಳಗೆ ಒಯ್ದು ಎದೆಗೆ ಹಚ್ಚಬೇಕು. ಪುನಃ ೧-೨ ಸೆಕೆಂದು ಬಿಟ್ಟು ಕೈಗಳನ್ನು ಪುನಃ ಮೇಲೆ ಒಯ್ಯುವದು. ಕೆಳಗೆ ಬಿಡುವದು ಹೀಗೆ ಪ್ರತಿ ಮಿನಿಟಿಗೆ ೧೫ ಸಲ ಮಾಡುವದು. ಸ್ವಾಭಾವಿಕ ಶ್ವಾಸೋಚ್ಛ್ವಾಸ ಪ್ರಾರಂಭವಾಗುವತನಕ ಇದರಂತೆ ಮಾಡಬೇಕು. ಬೇಗ ನಿರಾಶೆಯಾಗಬಾರದು. ಹೀಗೆ ಮಾಡುವದರಿಂದ ಎಷ್ಟೋ ಜನರು ಬದುಕಿದ್ದುಂಟು. ರೋಗಿಯ ಕಾಲುಗಳ ಮೇಲೆ ಬಿಸಿನೀರಿನ ಚೀಲ ಇಡಬೇಕು. ಅವನ ಮೈ ಮೇಲೆ ಕಂಬಳಿ ಅಥವಾ ಬೇರೆ ಬೆಚ್ಚಗಿನ ಅರಿವೆಗಳನ್ನು ಹೊಚ್ಚಬೇಕು. ಡಾಕ್ಟರರನ್ನು ಕರೆಯಿಸಲು ಮರೆಯಬಾರದು.

---

೭ ಶರೀರದಲ್ಲಿ ವಿಜಾತೀಯ ಪದಾರ್ಥಗಳು

ಗಂಟಲಲ್ಲಿ ಮುಳ್ಳು ಅಥವಾ ಬೇರೆ ಪದಾರ್ಥ ಸಿಕ್ಕು ಅಡ್ಡ ಕೂತರೆ

ಮುಕ್ಕಿ ಮುಂದೆ ಬೆರಳಿನಿಂದ ಅಥವಾ ಗಂಟಲಿಗೆ ನೋವಾಗದಂತೆ ಉದ್ದ ಚಿಮುಟದಿಂದ ತೆಗೆಯಲು ಪ್ರಯತ್ನ ಮಾಡಬೇಕು. ಕುತ್ತಿಗೆಯ ಹಿಂದೆ ಮೆಲ್ಲಗೆ ಗುದ್ದಬೇಕು. ಕೆಮ್ಮು ಬರುವಂತೆ ಉಪಾಯ ಮಾಡಬೇಕು. ಇಷ್ಟು ಮಾಡಿದರೂ ಆ ಪದಾರ್ಥ ಹೊರಗೆ ಬಾರದೆ ಹೋದಲ್ಲಿ ಹೊಟ್ಟೆಯೊಳಗೆ ಹೋಗುವಂತೆ ಮೆಲ್ಲಗೆ ಒಳಕ್ಕೆ ನೂಕಬೇಕು. ಆ ದಿನ ಅವನಿಗೆ ರೊಟ್ಟಿ, ಪಲ್ಲೆ, ಹಾಲು, ಹಣ್ಣು ಕೊಡಬೇಕು. ಹೆಸರುಬೇಳೆಯ ನಾರಿನ ಹುಡ್ಡು ಕೊಡಬೇಕು. ಬಟಾಟಿ ಬೇಯಿಸಿ ತಿನ್ನಲಿಕ್ಕೆ ಕೊಡಬೇಕು. ಹೀಗೆ ಮಾಡುವದರಿಂದ, ಹೊಟ್ಟೆಯೊಳಗೆ ಹೋದ ಪದಾರ್ಥವು ಮಲದಗೂಡ ಹೊರಗೆ ಬರುತ್ತದೆ. ಇದರ ಬಗ್ಗೆ, 'ಗ್ರಾಸಶಲ್ಯೇ ತು ಕಂಠಾಸಕ್ತೇ ನಿಃಶಂಕಂ ಮನಸಾ ಬುಧಃ ಸ್ಕಂಧೇ ಮುಷ್ಟಿನಾ ಹನ್ಯಾತ್ ಸ್ನೇಹಂ ಮದ್ಯಂ ಪಾನೀಯಂ ವಾ ಪಾಯಯೇತ್' ಎಂದು ಸುಶ್ರುತಾಚಾರ್ಯರು ಹೇಳಿದ್ದಾರೆ.

ಸೂಜಿ, ಕಾಜು, ಟಾಚಣಿಗಳನ್ನು ನುಂಗಿದ್ದರೆ:-- ಜುಲಾಬು ಕೊಡಲೇ ಬಾರದು. ಅಕ್ಕಿಯ ಗಂಜಿಯನ್ನು ತಿನ್ನಲಿಕ್ಕೆ ಕೊಡಬೇಕು. ಬಾಳೇ ಹಣ್ಣಿನ ಶೀಕರಣೆ, ಹಣ್ಣು, ಹಾಲು, ಬಟಾಟಿ ಪಲ್ಲೆ, ಬ್ರೆಡ್ ಹಾಲೊಳಗಿನ ರೊಟ್ಟಿ ಕೊಡಬೇಕು. ಹೊಟ್ಟೆಯೊಳಗಿನ ವಿಜಾತೀಯ ಪದಾರ್ಥಗಳು ಬಿದ್ದು ಹೋಗುವ ತನಕ ಹೀಗೆ ಮಾಡಬೇಕು.

ಮೂಗಿನೊಳಗೆ ಸಿಕ್ಕ ಪದಾರ್ಥ

ಮೂಗಿನೊಳಗೆ ಕಡಲೆ, ಹುಣಸೀಬೀಜ, ಹರಳುಗಳನ್ನು ಹಾಕಿಕೊಳ್ಳುವದುಂಟು. ಶೀನು ಬರುವಂತೆ ಉಪಾಯ ಮಾಡಬೇಕು. ಬಾಯಿ ಮತ್ತು ವಿಜಾತೀಯ ಪದಾರ್ಥ ಸೇರಿಕೊಳ್ಳದೆ ಇದ್ದ ಮೂಗಿನ ಹೊರಳೆಯನ್ನು ಕೈಯಿಂದ ಒತ್ತಿ ಹಿಡಿಯಬೇಕು. ಆಗ ಉಸುರಿನ ವೇಗದಿಂದ ಒಳಗಿನ

ಪದಾರ್ಥವು ಹೊರಗೆ ಬರುವ ಸಂಭವವಿರುತ್ತದೆ. ವಾಂತಿಯಾಗುವದ-ಕ್ಕಾಗಿ ತುಸು ಉಪ್ಪು ಕೂಡಿಸಿದ ನೀರು ಕುಡಿಯಲು ಕೊಡಬೇಕು. ವಾಂತಿಬಂದ ಕೂಡಲೇ ತುಸು ವೇಳೆ ಬಾಯಿ ಮುಚ್ಚಿ ಆ ಮೇಲೆ ವಾಂತಿ ಮಾಡಿಕೊಳ್ಳಲು ಹೇಳಬೇಕು. ವಾಂತಿಯಾಗುವಾಗ, ಆ ಪದಾರ್ಥವು ಹೊರಗೆ ಬರುವ ಸಂಭವವಿರುತ್ತದೆ. ಇದು ಸ್ವಲ್ಪ ದೊಡ್ಡ ಹುಡುಗರಿದ್ದರೆ ಮಾತ್ರ ಸಾಧ್ಯವಿದೆ. ಇಷ್ಟೆಲ್ಲ ಆದರೂ ಬಾರದಿದ್ದರೆ ಡಾಕ್ಟರರಿದ್ದಲ್ಲಿಗೆ ಹೋಗಬೇಕು.

ಕಿವಿಯಲ್ಲಿ ವಿಜಾತೀಯ ದ್ರವ್ಯ

ಕಿವಿಯಲ್ಲಿ ಹರಳು ಅಥವಾ ಬಟಿಗಡಲೆ, ಕಡಲೇಕಾಳು ಹೋಗಿದ್ದರೆ, ಬಿಸಿನೀರನ್ನು ಜೇಕಳಿಯಿಂದ ಹೊಡೆಯಬೇಕು. ನೀರಿನಗುಂಡ ಆ ಪದಾರ್ಥ ಹೊರಗೆ ಬರುತ್ತದೆ. ಒಂದು ವೇಳೆ ಹೊರಗೆ ಬಾರದೆ ಇದ್ದಲ್ಲಿ, ಉದ್ದ ಚಿಮುಟಿಗೆಯಿಂದ ಕಿವಿಗೆ ಧಕ್ಕೆಯಾಗದಂತೆ ತೆಗೆಯಬೇಕು. ಇವಾವುದ ರಿಂದಲೂ ಆಗದೆ ಇದ್ದಲ್ಲಿ ಡಾಕ್ಟರರು ಇದ್ದಲ್ಲಿಗೆ ಹೋಗಬೇಕು.

ಕಿವಿಯಲ್ಲಿ ಹುಳ ಸೇರಿಕೊಂಡಿದ್ದರೆ, ಕೊಬ್ಬರಿ ಎಣ್ಣೆಯನ್ನು ತುಸು ಬಿಸಿ ಮಾಡಿ ಹಾಕಿ, ಮೇಲೆ ಅರಳೆಯನ್ನಿಡಬೇಕು.

ಇಂಥ ಪ್ರಸಂಗಗಳಲ್ಲಿ ಕಿವಿಗೆ ಧಕ್ಕೆಯಾಗದಂತೆ ಅವಶ್ಯ ಲಕ್ಷ್ಯಗೊಡ-ಬೇಕು.

ಕಣ್ಣಿನಲ್ಲಿ ಕಸರು—ಉಸುಕು ಬಿದ್ದರೆ

ಇಂಥ ಪ್ರಸಂಗದಲ್ಲಿ ಕಣ್ಣು ತಿಕ್ಕಿಕೊಳ್ಳಬಾರದು. ಕಣ್ಣಿನ ರೆಪ್ಪೆಯನ್ನು ಮೆಲ್ಲಗೆ ತಿರುವಿ ಮೃದು ಅರಳೆಯಿಂದ ಅಥವಾ ಸ್ವಚ್ಛ ಅರಿವೆಯ ತುದಿ-ಯಿಂದ ಕಣ್ಣು ಒರೆಸಿ ಕಸರು ತೆಗೆಯಬೇಕು. ಬೋರಿಕ್ ಪುಡಿ ಹಾಕಿದ ನೀರಿನಿಂದ ಕಣ್ಣುಗಳನ್ನು ತೊಳೆಯಬೇಕು.

ಕಸರು ಬಿದ್ದ ಕಣ್ಣಿನಲ್ಲಿ ಔಡಲ ಎಣ್ಣೆಯ ೩-೪ ಹನಿಗಳನ್ನು ಬಿಡ-ಬೇಕು.

ಕಣ್ಣಿನಲ್ಲಿ ಉಕ್ಕಿನ ಕಣಗಳು ಬಿದ್ದರೆ ಕೂಡಲೇ ಡಾಕ್ಟರರಕಡೆಗೆ ಹೋಗಬೇಕು.

ಕಣ್ಣಿನಲ್ಲಿ ಸುಣ್ಣದ ನೀರು ಕಳ್ಳೀಹಾಲು ಸಿಡಿದಿದ್ದರೆ, ಬೆಣ್ಣೆ ಹಚ್ಚಬೇಕು.

ಇಂಥ ಪ್ರಸಂಗದಲ್ಲಿ ಕಣ್ಣುಗಳನ್ನು ಅರಿವೆ ಪಟ್ಟಿಣವಮಾಡಿ ತುಸು ಕಾವು ಕೊಡಬೇಕು.

---

೮ ಉರುಲು ಹಾಕಿಕೊಳ್ಳುವದು

ಉರುಲು ಹಾಕಿಕೊಂಡದ್ದು ತಿಳಿದ ಕೂಡಲೇ, ಒಂದು ಕೈಯಿಂದ ಅವನನ್ನು ತುಸು ಎತ್ತಿ ಹಿಡಿದು ಮತ್ತೊಂದು ಕೈಯಿಂದ ಆ ಹಗ್ಗವನ್ನು ಕತ್ತರಿಸಬೇಕು. ಅನಂತರ ಕುತ್ತಿಗೆಯ ಸುತ್ತಲು ಇರುವ ಹಗ್ಗವನ್ನು ಬಿಚ್ಚಿ ತೆಗೆಯಬೇಕು. ಬಿಗಿ ಮೇಲೆ ಅರಿವೆಗಳಿದ್ದರೆ ಅವುಗಳನ್ನು ಸಡಿಲು ಮಾಡಬೇಕು. ಅವನನ್ನು ಮಲಗಿಸಿ ನಾಲಿಗೆಯನ್ನು ಹೊರಗೆ ಜಗ್ಗಿ ಹಿಡಿಯಬೇಕು. ಕೃತ್ರಿಮ ಶ್ವಾಸೋಚ್ಛ್ವಾಸವನ್ನು ಮಾಡಿಸಿ, ಪ್ರಯತ್ನಿಸಬೇಕು. ಉಳ್ಳೇಗಡ್ಡೆಯನ್ನು ಜಜ್ಜಿ ಅದನ್ನು ಮೂಗಿಗೆ ಹಿಡಿಯಬೇಕು. ಸ್ಮೆಲಿಂಗ ಸಾಲ್ಟ ಇದ್ದರೆ ಅದನ್ನು ಮೂಗಿಗೆ ಹಿಡಿಯಬೇಕು. ಎದೆ, ಕೈಕಾಲುಗಳನ್ನು ಕಾಸಬೇಕು. ಬಿಸಿ ಪುಡಿ ಕಟ್ಟಿ ತಿಕ್ಕಬೇಕು. ಇಷ್ಟು ಮಾಡುತ್ತಿರುವಾಗಲೇ ಡಾಕ್ಟರರನ್ನು ಕರೆಕಳಿಸಬೇಕು.

---

೯ ಸುಡುವದು

ಆಕಸ್ಮಿಕ ಕಾರಣಗಳಿಂದ ಶರೀರದ ಭಾಗವು ಸುಡುವದುಂಟು. ಸುಡುವದರ ಹೆಚ್ಚು ಕಡಿಮೆ ಪ್ರಮಾಣದಿಂದ, ಶರೀರದ ಮೇಲೆ ಬೇರೆ ಬೇರೆ ರೀತಿಯಿಂದ ಪರಿಣಾಮವಾಗುವದು.

೧. ಝಳ ತಟ್ಟಿ ತ್ವಚೆಯು ಕೆಂಪಗಾಗುವದು. ೨. ಹೆಚ್ಚು ಸುಟ್ಟಲ್ಲಿ ತ್ವಚೆಯ ಮೇಲೆ ದೊಡ್ಡ ಗುಳ್ಳೆಗಳೇಳುವವು. ೩. ಮಾಂಸಲ ಭಾಗವು

ಶೀಘ್ರಗಾಗಿ ನಾಶವಾಗುವದು. ೪. ಶರೀರದ ಬಹು ಭಾಗವು ಸುಟ್ಟಿತೆಂದರೆ ಶರೀರದ ತುಂಬ ಅದರ ಪರಿಣಾಮವಾಗುತ್ತದೆ. ೫. ಅಂತರಿಂದ್ರಿಯಗಳಲ್ಲಿ ರಕ್ತ ಸಂಚಯವಾಗುವದು.

ಉಪಚಾರ:— ಚಿಕ್ಕಮಕ್ಕಳು ಸುಟ್ಟುಕೊಂಡಿದ್ದರೆ, ಅವರಿಗೆ ಬಿಸಿನೀರಿನಿಂದ ಸ್ನಾನಮಾಡಿಸಬೇಕು. ಅದರಿಂದ ಸುಟ್ಟಭಾಗದ ದಾಹವು ಕಡಿಮೆಯಾಗುತ್ತದೆ. ದೊಡ್ಡ ಮನುಷ್ಯರಿಗೂ ಇದರಿಂದ ಒಳ್ಳೇ ಪರಿಣಾಮವಾಗುತ್ತದೆ. ಸುಟ್ಟುಕೊಂಡವನ ಮೈಮೇಲಿನ ಅರಿವೆಗಳನ್ನು ತೆಗೆದುಹಾಕಬೇಕು. ಅರಿವೆ ತೆಗೆಯುವಾಗ, ಗುಳ್ಳೆಗಳು ಒಡೆಯದಂತೆ ನೋಡಿಕೊಳ್ಳಬೇಕು. ಅರಿವೆ ಅಂಟಿಕೊಂಡಿದ್ದರೆ, ಬೋರಿಕ್ ಪುಡಿ ಹಾಕಿದ ನೀರಿನಿಂದ ನೆನೆಸಿ, ಆ ಮೇಲೆ ತೆಗೆಯಬೇಕು. ಅಥವಾ ಒಳ್ಳೆಣ್ಣೆಯಿಂದ ನೆನಸಿ ತೆಗೆಯಬೇಕು. ಅಥವಾ ತಿನ್ನುವ ಸೋಡಾ ನೀರಿನಲ್ಲಿ ಹಾಕಿ ಆ ನೀರಿನಲ್ಲಿ ಅರಿವೆಯನ್ನು ನೆನೆಸಿ ತೆಗೆಯುವದು.

ಚಿಕಿತ್ಸೆ:— ಸುಣ್ಣದ ತಿಳಿನೀರು, ಒಳ್ಳೆಣ್ಣೆಗಳನ್ನು ಸಮಪ್ರಮಾಣದಿಂದ ತೆಗೆದುಕೊಂಡು, ಎರಡನ್ನೂ ಚೆನ್ನಾಗಿ ಕಲಿಸಬೇಕು. ಈ ಎಣ್ಣೆಗೆ ಕಾರನ್ ಆಯಿಲ್ ಎನ್ನುತ್ತಾರೆ. ಆ ಮೇಲೆ ಅದರಲ್ಲಿ ಸ್ವಚ್ಛ ಅರಿವೆಯನ್ನು ತೋಯಿಸಿ, ಸುಟ್ಟಭಾಗದ ಮೇಲೆ ಪಟ್ಟಿ ಹಾಕಬೇಕು. ಅದರ ಮೇಲೆ ಅರಳೆಯ ಮಡಿಕೆಯನ್ನಿಟ್ಟು ಸಾಧಾರಣ ಕಟ್ಟಬೇಕು. ಬಹಳ ಬಿಗಿ ಕಟ್ಟಬಾರದು. ೨೪ ತಾಸುಗಳ ನಂತರ ಬಿಚ್ಚಿ ಪುನಃ ಹೊಸ ಪಟ್ಟಿ ಹಾಕಬೇಕು.

ಎಚ್ಚರಿಕೆ:— ತಲೆ, ಮುಖ, ಕುತ್ತಿಗೆ, ಎದೆ ಮತ್ತು ಹೊಟ್ಟೆಗಳ ಭಾಗವು ಸುಟ್ಟರೆ, ವಿಶೇಷ ಅಪಾಯವಾಗುವ ಸಂಭವವಿರುತ್ತದೆ. ಹೀಗಾದಲ್ಲಿ ಕೂಡಲೇ ಡಾಕ್ಟರರನ್ನು ಕರೆಯುವದು. ಕಾದ ಎಣ್ಣೆಯಿಂದ ಮತ್ತು ಎಸರು ನೀರು ಬಿದ್ದು ತ್ವಚೆಯು ಸುಟ್ಟರೆ ಇದಕ್ಕಾದರೂ ಮೇಲೆ ಹೇಳಿದ ಎಣ್ಣೆಯನ್ನು ಉಪಯೋಗಿಸಿ, ಯುಕ್ತಿಯಿಂದ ಕಟ್ಟಬೇಕು.

ಲಕ್ಷದಲ್ಲಿಡತಕ್ಕ ಸಂಗತಿಗಳು

(೧) ಸುಟ್ಟಕೂಡಲೇ ಡಾಕ್ಟರರನ್ನು ಕರೆಕಳಿಸುವದು. (೨) ಸುಟ್ಟ ಗುಳ್ಳೆಗಳನ್ನು ಒಡೆಯಬಾರದು. (೩) ಸುಟ್ಟ ಭಾಗಕ್ಕೆ ಹವೆ ತಾಕದಂತೆ

ವ್ಯವಸ್ಥೆ ಮಾಡಬೇಕು. (೪) ಆತನಿಗೆ ಕಾಫಿ ಚಹ ಕೊಡಬೇಕು. (೫) ಕಾರನ್ ಆಯಿಲ್, ಒಕ್ಸಿಗ್ನ್, ಮಿಠಲ ಎಣ್ಣೆಗಳಲ್ಲಿ ಯಾವುದಾದರೊಂದನ್ನು ಮುಟ್ಟಿ ಗಾಯಗಳಿಗೆ ಹಚ್ಚಬೇಕು.

---

೧೦ ವಿಸ್ಮೃತಿ

ವಿಸ್ಮೃತಿ ಎಂದರೆ ಎಚ್ಚರದಪ್ಪುವದು. ಇದಕ್ಕೆ ಕೆಳಗೆ ಬರೆದ ಕಾರಣಗಳೆಂದು ಹೇಳಬಹುದು.

(೧) ಶ್ವಾಸೋಚ್ಛ್ವಾಸಕ್ಕೆ ವ್ಯತ್ಯಯ (೨) ಗ್ಲಾನಿ (೩) ಅಶಕ್ತತೆ (೪) ಮಿದುಳಿಗೆ ಧಕ್ಕೆ ತಾಗುವದು (೫) ರಕ್ತಜ (೬) ಮದ್ಯದ ಪರಿಣಾಮ (೭) ಮಾದಕ ವಿಷಗಳು (೮) ಅತಿ ಉಷ್ಣತೆ (೯) ಅತಿಚಳಿ (೧೦) ಉನ್ಮಾದ, ಅಪಸ್ಮಾರ.

ಎದೆ, ಉತ್ತಿಗೆಗಳಿಗೆ ಬಲವಾದ ಪೆಟ್ಟು ತಾಗುವದರಿಂದ

ಶ್ವಾಸನಲಿಕೆಯಲ್ಲಿ ಬೇರೆ ಪದಾರ್ಥ ಹೋಗಿ ಸಿಕ್ಕುವದರಿಂದ, ಹವೆಯಾಡದಂಥ ಸ್ಥಳದಲ್ಲಿ ಹೋಗಿ ಕೂಡ್ರುವದರಿಂದ, ನೀರಿನಲ್ಲಿ ಮುಳುಗುವದರಿಂದ, ದುಷ್ಟ ಹವೆಯನ್ನು ಉಸಿರಾಡಿಸುವದರಿಂದ, ಈ ಎಲ್ಲ ಕಾರಣಗಳಿಂದ ಶ್ವಾಸೋಚ್ಛ್ವಾಸಕ್ಕೆ ವ್ಯತ್ಯಯ ಬರುವದುಂಟು. ಆ ಆ ಕಾರಣಗಳಿಗನುಸರಿಸಿ ಯೋಗ್ಯ ಉಪಚಾರ ಮಾಡುವದು.

ಗ್ಲಾನಿ

ಶಾರೀರಿಕ ಮಾನಸಿಕ, ಅಶಕ್ತತೆ, ಉಪವಾಸ, ರಕ್ತಸ್ರಾವ, ಮೊದಲಾದ ಕಾರಣಗಳಿಂದ ಗ್ಲಾನಿ ಬರುವದುಂಟು. ಗ್ಲಾನಿ ಎಂದರೆ ಮುಚ್ಚು ಬರುವದು.

ಉಪಚಾರ :— ಮೈಮೇಲಿನ ಅರಿವೆಗಳನ್ನು ಸಡಲಿಸಬೇಕು. ಸ್ವಚ್ಛ ಹವೆಯಾಡುವಂಥ ಸ್ಥಳದಲ್ಲಿ ಅವನನ್ನು ಮಲಗಿಸಬೇಕು. ಶರೀರಕ್ಕಿಂತಲೂ ತುಸು ಕೆಳಗೆ ತಲೆಯಾಗುವಂತೆ ಮಾಡಿ ಮಲಗಿಸಬೇಕು. ಮೋರೆಯ ಮೇಲೆ ತಣ್ಣೀರು ಸಿಂಪಡಿಸಬೇಕು. ಕಾಲುಗಳನ್ನು ಕಾಸಬೇಕು. ಸೂತ-ಶೇಖರ, ದ್ರಾಕ್ಷಾಸವಗಳನ್ನು ಕೊಡಬೇಕು.

ಅಶಕ್ತತೆಯಿಂದ ಮೂರ್ಛೆ ಬಂದಿದ್ದರೆ

ಸ್ವಚ್ಛ ಹವೆಯಲ್ಲಿ ಮಲಗಿಸಬೇಕು. ಕಾಲುಗಳನ್ನು ಕಾಸಬೇಕು. ಬಿಸಿ ಬಿಸಿ ಕಾಫಿ ಕೊಡಬೇಕು. ಸೂತಶೇಖರ, ದ್ರಾಕ್ಷಾಸವಗಳನ್ನು ಕೊಡಬೇಕು.

ಮಿದುಳಿಗೆ ಧಕ್ಕೆಯಾಗಿ ಮೂರ್ಛೆ ಬಂದಿದ್ದರೆ

ಕೋಣೆಯಲ್ಲಿ ಕತ್ತಲಾಗುವಂತೆ ಮಾಡಿ, ಅಲ್ಲಿ ಅವನನ್ನು ಮಲಗಿಸಬೇಕು. ಕಾಫಿ ಕುಡಿಸಬೇಕು. ಮುಕ್ತಾಭಸ್ಮ, ಮುಕ್ತಾಯುಕ್ತ ಕಾಮ-ದುಧಾ, ಸೂತಶೇಖರಗಳನ್ನು ನೆಲ್ಲೀಪಾಕಿನಲ್ಲಿ ಕೊಡಬೇಕು. ಹಣೆಗೆ ಕೋಲನ್‌ವಾಟರದ ಪಟ್ಟಿಯನ್ನು ಹಾಕಬೇಕು.

ರಕ್ತಸ್ರಾವದಿಂದ ಮೂರ್ಛೆ ಬಂದಿದ್ದರೆ

ರಕ್ತಸ್ರಾವವನ್ನು ಮೊದಲು ನಿಲ್ಲಿಸಬೇಕು. ಹವೆಯಾಡುವಂಥ ಕೋಣೆಯಲ್ಲಿ ಮಲಗಿಸಬೇಕು. ನಾಡಿಗಳು ಮಂದವಾದರೆ ಸುವರ್ಣಯುಕ್ತ ಸೂತಶೇಖರ ಹೇಮಗರ್ಭ ಕೊಡಬೇಕು. ಕೈಕಾಲು ತಣ್ಣಗಾದರೆ ಕಾಸಬೇಕು. ಹಣೆಯಮೇಲೆ ತಣ್ಣೀರಿನ ಪಟ್ಟಿಯನ್ನಿಡಬೇಕು.

ಮದ್ಯದ ಪರಿಣಾಮವಾಗಿ ಮೂರ್ಛೆ ಬಂದಿದ್ದರೆ

ಅವನನ್ನು ಕೂಡಿಸಿ ಒಬ್ಬರು ಹಿಡಿಯಬೇಕು. ಅನಂತರ ಅವನ ತಲೆಯಮೇಲೆ ಕೊಡದಿಂದ ತಣ್ಣೀರು ಸುರುವಬೇಕು. ಅವನ ಮೈಮೇಲಿನ ಬಟ್ಟೆಗಳನ್ನು ತೆಗೆದು ಇಟ್ಟಿರಬೇಕು.

ಅತಿ ಉಷ್ಣತೆಯ ಪರಿಣಾಮವಾಗಿ ಮೂರ್ಛೆ ಬಂದಿದ್ದರೆ

ಅವನ ಮೈಮೇಲಿನ ಅರಿವೆಗಳನ್ನು ತೆಗೆದು ತಂಪು ಸ್ಥಳದಲ್ಲಿ ಮಲಗಿಸಿ ಗಾಳಿ ಹಾಕಬೇಕು. ದ್ರಾಕ್ಷಾಸವವನ್ನು ಕೊಡಬೇಕು. ಸಕ್ಕರೆ

ಹಾಕಿ ಮಾಡಿದ ಲಿಂಬೇರಸದ ಪಾನಕವನ್ನು ಕೊಡಬೇಕು. ಹಣೆಯ ಮೇಲೆ ತಣ್ಣೀರಿನ ಪಟ್ಟಿಯನ್ನಿಡಬೇಕು.

ಅತಿ ಚಳಿಯ ಪರಿಣಾಮವಾಗಿ ಮೂರ್ಛೆ ಬಂದಿದ್ದರೆ

ಬಿಸಿನೀರಿನ ಚೀಲದಿಂದ ಕೈಕಾಲುಗಳನ್ನು ಕಾಸಬೇಕು. ಬಜೆಪುಡಿ ಹಚ್ಚಿ ತಿಕ್ಕುವದು. ಬಿಸ್ಸಿದ ರಸದಲ್ಲಿ ಜೇನು ಕೂಡಿಸಿ ಕೊಡುವದು.

ಮಾದಕ ವಿಷಗಳ ಪರಿಣಾಮವಾಗಿ ಮೂರ್ಛೆ ಬಂದಿದ್ದರೆ

ಯಾವ ವಿಷವು ಹೊಟ್ಟೆಯೊಳಗೆ ಹೋಗಿದೆ ಎಂಬುದು ತಿಳಿದಲ್ಲಿ ಆ ವಿಷಚಿಕಿತ್ಸೆಯನ್ನು ಮಾಡಲು ಅನುಕೂಲವಾಗುವದು. ಒಂದು ವೇಳೆ ತಿಳಿಯದೆ ಹೋದಲ್ಲಿ, ಕೆಳಗೆ ಬರೆದ ಉಪಚಾರ ಮಾಡಬೇಕು.

ವಾಂತಿಯಾಗುವದಕ್ಕೆ:— ಹತ್ತು ಔಂಸು ಬಿಸಿನೀರಿನಲ್ಲಿ ೧-೨ ಚಮಚೆ ಸಾಸಿವೆಯ ಪುಡಿಯನ್ನು ಹಾಕಿ, ಆ ನೀರನ್ನು ಕುಡಿಯಲಿಕ್ಕೆ ಕೊಡಬೇಕು. ಅಥವಾ ಹತ್ತು ಔಂಸು ಬಿಸಿನೀರಿನಲ್ಲಿ ೭ ಚಮಚೆ ಉಪ್ಪು ಹಾಕಿ ಆ ನೀರು ಕುಡಿಯಲಿಕ್ಕೆ ಕೊಡಬೇಕು. ಇದರಿಂದಲೂ ವಾಂತಿಯಾಗಿ ವಿಷದ ತೀವ್ರತೆ ಕಡಿಮೆಯಾಗುತ್ತದೆ. ಜೀವಕ್ಕೆ ಅಪಾಯವಾಗುವಂಥ ವಿಷವು ಹೊಟ್ಟೆಯೊಳಗೆ ಹೋಗಿದ್ದರೆ ವಾಂತಿಯಾಗುವದಕ್ಕೆ ಔಷಧ ಕೊಡಬಾರದು. ಆ ಮನುಷ್ಯನ ಕೈ, ತುಟಿ, ಬಾಯಿಗಳಲ್ಲಿ ಕಪ್ಪು ಕಲೆಗಳು ಕಂಡರೆ, ಅವನು ಕೆಟ್ಟ ವಿಷವನ್ನು ತೆಗೆದುಕೊಂಡಿರುವನೆಂದು ತಿಳಿಯಬೇಕು.

ಜುಲಾಬು ಆಗುವದಕ್ಕೆ:— ೧ ಔಂಸು ಔಡಲ ಎಣ್ಣೆಯನ್ನು ಕೊಡಬೇಕು. ಅಥವಾ ಇಚ್ಛಾಭೇದಿಯ ೧-೨ ಗುಳಿಗೆಗಳನ್ನು ಬಿಸಿನೀರಿನಗೂಡ ಕೊಡಬೇಕು.

ಉತ್ತೇಜಕ:— ದ್ರಾಕ್ಷಾಸವವನ್ನು ಕೊಡಬೇಕು. ಸೂತಶೇಖರವನ್ನು ಕೊಡಬೇಕು. ಬಿಸಿಬಿಸಿ ಕಾಫಿ ಕೊಡಬೇಕು. ಬಿಸಿನೀರಿನ ಮತ್ತು ತಣ್ಣೀರಿನ ಎನಿಮಾ ಅದಲುಬದಲು ಮಾಡಿ ಕೊಡಬೇಕು.

ದಾಹಶಾಮಕ:— ಹಾಲು, ತಕ್ಕ, ಬಾರ್ಲಿ ನೀರು ಕೊಡಬೇಕು.

೧೧ ಗಾಯಗಳು

ರೇಝರ್ ಬ್ಲೇಡು ಕೋಯಲಿ ಮೊದಲುಗೊಂಡು ಅನೇಕ ವಿಧ ದಿಂದ ಚಿಕ್ಕಪುಟ್ಟ ಅಥವಾ ಭಯಾನಕ ಗಾಯಗಳಾಗಬಹುದು. ಸಾಮಾನ್ಯವಾಗಿ ಇದರಲ್ಲಿ ಸಾದಾ ಮತ್ತು ವಿಷಯುಕ್ತ ಗಾಯಗಳೆಂದು ಎರಡು ಭೇದ ಮಾಡಬಹುದು. ಗಾಯಗಳ ಬಗ್ಗೆ ಕೆಳಗಿನ ಸಂಗತಿಗಳನ್ನು ಅವಶ್ಯ ಲಕ್ಷ್ಯದಲ್ಲಿಡಬೇಕು.

೧. ಗಾಯದಿಂದ ರಕ್ತಸ್ರಾವವಾಗುತ್ತಿದ್ದರೆ, ಮೊದಲು ಅದನ್ನು ನಿಲ್ಲಿಸಬೇಕು. ೨. ಜಂತುನಾಶಕ ಔಷಧ ಹಾಕಿದ ನೀರಿನಿಂದ ಗಾಯ ಗಳನ್ನು ತೊಳೆಯುವದು. ೩. ಗಾಯಗಳಲ್ಲಿ ಧೂಳು ಹೋಗದಂತೆ ಡ್ರೆಸಿಂಗ ಮಾಡುವದು. ೪. ಅವಶ್ಯವಿದ್ದರೆ ಗಾಯದ ಭಾಗಕ್ಕೆ ವಿಶ್ರಾಂತಿ ಕೊಡುವದು. ೫. ಗಾಯಗೊಂಡು ಮೂರ್ಛೆ ಬಂದರೆ, ಉಪಚಾರ ಮಾಡು ವದು. ಗಾಯವನ್ನು ತೊಳೆಯುವವರು ಮೊದಲು, ತಮ್ಮ ಕೈಗಳನ್ನು ಬಿಸಿನೀರು ಸಾಬೂಣಗಳಿಂದ ಸ್ವಚ್ಛ ತೊಳೆದುಕೊಳ್ಳಬೇಕು. ಆ ಮೇಲೆ ೫೦ಕ್ಕೆ ೧ ಈ ಪ್ರಮಾಣದಿಂದ ಮಾಡಿದ ಕಾರ್ಬಾಲಿಕ್ ನೀರಿನಿಂದ ಕೈ ತೊಳೆದುಕೊಳ್ಳಬೇಕು. ಅನಂತರ ಗಾಯವನ್ನು ಒರಸಬೇಕು.

ಈ ಮೊದಲು ಹೇಳಿದ ಪದ್ಧತಿಯಿಂದ ರಕ್ತಸ್ರಾವವನ್ನು ನಿಲ್ಲಿಸಬೇಕು. ಗಾಯವನ್ನು ತೊಳೆಯುವದಕ್ಕಾಗಿ ಸಿಕ್ಕಸಿಕ್ಕ ನೀರು ತೆಗೆದುಕೊಳ್ಳಬಾರದು. ಎಸರು ಬರುವ ತನಕ ಕಾಸಿ ಆರಿಸಿದ ನೀರು ತೆಗೆದುಕೊಳ್ಳಬೇಕು. ಶಕ್ಯ ವಿದ್ದರೆ ಆ ನೀರಿನಲ್ಲಿ ಒಂದು ಕಪ್ಪು ನೀರಿಗೆ ಒಂದು ಹನಿ ಕಾರ್ಬಾಲಿಕ್ ಆಸಿಡ್ ಅಥವಾ ೧೦ ತೊಲಿಗೆ ೧ ಗ್ರೇನು ರಸಕರ್ಪೂರದ ಅಥವಾ ಬಣ್ಣ ಬರುವಷ್ಟು ಪೋಟ್ಯಾಶ ಪರಮಾಂಗನೇಟ ಹಾಕಬೇಕು. ಈ ಜಂತುನಾಶಕ ನೀರನ್ನು ಒಂದು ಪಾತ್ರೆಯಲ್ಲಿ ತೆಗೆದುಕೊಂಡು, ಅದರೊಳಗೆ ಸ್ವಚ್ಛ ಅರಳೆ ಯನ್ನು ತೋಯಿಸಿ, ಆ ಅರಳೆಯಿಂದ, ಗಾಯದ ಮೇಲೆ ನೀರು ಬಿಟ್ಟು, ಮೆಲ್ಲನೆ ತೊಳೆಯಬೇಕು. ಗಾಯದಲ್ಲಿ ಕಸರು ಇರಗೊಡಬಾರದು. ಗಾಯ ತೊಳೆದನಂತರ, ಔಷಧೀ ನೀರಿನಲ್ಲಿ ತೋಯಿಸಿ ಹಿಂಡಿದ ಅರಳೆಯಿಂದ ಗಾಯವನ್ನು ಒರೆಸಿ ತೆಗೆದು ಅದರ ಮೇಲೆ, ಒಂದು ದಪ್ಪ ಸ್ವಚ್ಛ ಅರಿವೆ ತುಣುಕಿಗೆ, ಹಳೇ ತುಪ್ಪ ಹಚ್ಚಿ ಗಾಯದ ಮೇಲೆ ಇಡಬೇಕು. ಅದರ

ಮೇಲೆ ಅರಳೆಯನ್ನಿಟ್ಟು ಕಟ್ಟು ಕಟ್ಟಬೇಕು. ಗಾಯವು ತುಂಬ ಒಳಕ್ಕೆ ಹೋಗಿದ್ದರೆ, ಬೋರಿಕ್ ಗಾಜನ್ನು ನೀರಿನಲ್ಲಿ ಕುದಿಸಿ ತೆಗೆದು ಒಂದು ಚ ಒಳಗಾಯದಲ್ಲಿ ತುರುಕಿ ಇಡಬೇಕು. ಮೇಲೆ ಪುನಃ ಹಿಂದಿನಂತೆ ಡ್ರೆಸಿಂಗ ಮಾಡಬೇಕು.

ಗಾಯವು ಚಿಕ್ಕದಿದ್ದರೆ ಅದರ ಮೇಲೆ ಲಿಂಟಿನ ತುಕಡಿ ಇಟ್ಟು ಮೇಲೆ ಗಮ್ ಪ್ಲಾಸ್ಟರ ಹಚ್ಚಬೇಕು. ಚಿಕ್ಕಪುಟ್ಟ ಸಾದಾ ಗಾಯಗಳಿಗೆ ಒಳ್ಳೆ ಎಣ್ಣೆ ರೋಪಣ ತೈಲ ಹಚ್ಚಿ ಡ್ರೆಸಿಂಗ ಮಾಡುವದರಿಂದ ಗುಣ ಬರುತ್ತದೆ. ಗಾಯದ ಮೇಲೆ ಅರಿಷಿಣಪುಡಿ ಉದುರಿಸಿ ಅರಳೆ ಇಟ್ಟು ಕಟ್ಟಿದರೂ ಗುಣ ಬರುತ್ತದೆ. ಗಾಯಗಳಲ್ಲಿ ಕೀವು ಆಗಿದ್ದರೆ ಅಗಸಿ ಅಥವಾ ಕಣಕದ ಪೋಟೀಸನ್ನು ಹಾಕಿ, ಕೀವು ಬಸಿಯುವಂತೆ ಮಾಡಿ ನಂತರ ಮೇಲೆ ಬರೆದಂತೆ ಉಪಚಾರ ಮಾಡಬೇಕು.

ಗಾಯವನ್ನು ೨೪ ತಾಸುಗಳ ನಂತರ ಬಿಚ್ಚಿ ಪುನಃ ತೊಳೆದು ಡ್ರೆಸಿಂಗ ಮಾಡಬೇಕು. ಆಗ ಪಟ್ಟಿಯು ಗಟ್ಟಿ ಹತ್ತಿದ್ದು ಕಂಡುಬಂದರೆ, ಔಷಧೀ ನೀರಿನಿಂದ ನೆನಸಿ ತೆಗೆಯಬೇಕು. ಹಾಗೆಯೇ ತೆಗೆದಲ್ಲಿ ರಕ್ತ ಸ್ರಾವವಾಗುತ್ತದೆ.

ಹೊಟ್ಟೆಯ ಮೇಲೆ ಕತ್ತಿಯಿಂದ ಹೊಡೆದು ಅಥವಾ ದನಗಳು ಕೋಡಿನಿಂದ ಇರಿದು ಹೊಟ್ಟೆಗೆ ಭಯಂಕರ ಗಾಯವಾಗಿ ಕರುಳು ಹೊರಬಿದ್ದರೆ ಡಾಕ್ಟರರು ಬರುವ ವರೆಗೆ, ಬಿಸಿನೀರಿನಲ್ಲಿ ತೋಯಿಸಿದ, ವಸ್ತ್ರವನ್ನು ಗಾಯದ ಮೇಲೆ ಇಟ್ಟು ನೊಣಗಳು ಕೂಡದಂತೆ ಮೇಲೆ ಒಂದು ಸ್ವಚ್ಛ ಚಾದರವನ್ನು ಹೊಚ್ಚಬೇಕು. ಕಾಲುಗಳ ಮೇಲೆ ಬಿಸನೀರಿನ ಬಾಟ್ಲಿಗಳನ್ನು ಇಡಬೇಕು.

ವಿಷಯುಕ್ತ ಗಾಯವನ್ನು ಕರ್ಪೂರ ಹಾಕಿದ ಲೋಶನದಿಂದ ತೊಳೆದು ಡ್ರೆಸಿಂಗ ಮಾಡಬೇಕು. ಕೀವು ಆಗದಂತೆ ಜಾಗ್ರತರಾಗಬೇಕು.

ಗಾಯವು ದೊಡ್ಡದಿದ್ದರೆ ಕೂಡಲೇ ಡಾಕ್ಟರರನ್ನು ಕರೆಯಿಸಿರಿ. ಹೊಟ್ಟೆಯ ಮೇಲೆ ಗಾಯವಾದಾಗ ಹೇಳಿದ ಉಪಚಾರವನ್ನು ಡಾಕ್ಟರರು ಬರುವ ತನಕ, ಮಾಡಬೇಕು.



ತೃತೀಯ ಖಂಡ

ವಿಷಚಿಕಿತ್ಸೆ

ಶರೀರದ ಮೇಲ್ಭಾಗಕ್ಕೆ ಹಚ್ಚುವದರಿಂದ ಮತ್ತು ಹೊಟ್ಟೆಯೊಳಗೆ ಹೋಗುವದರಿಂದ, ಯಾವ ಪದಾರ್ಥವು ಅಪಾಯವನ್ನುಂಟುಮಾಡುತ್ತಿದೆಯೋ ಅದು ವಿಷ. ನಾಗರಹಾವು ಮೊದಲಾದ ವಿಷಯುಕ್ತ ಪ್ರಾಣಿಗಳ ದಂಶದಿಂದಲೂ ವಿಷಬಾಧೆಯಾಗಿ ಜೀವಕ್ಕೆ ಅಪಾಯವಾಗುವ ಸಂಭವವಿದೆ. ಅದರಂತೆ, ಆಸಿಡ್ ಕುಡಿದು, ಅಥವಾ ಅಫೂ ಮೊದಲಾದ ವಿಷಯುಕ್ತ ಪದಾರ್ಥಗಳು ಹೊಟ್ಟೆಯೊಳಗೆ ಹೋದರೂ ಮರಣ ಸಂಭವಿಸುತ್ತದೆ. ಇಂಥ ಸಮಯದಲ್ಲಿ ಕೂಡಲೇ ಉಪಚಾರ ಪ್ರಾರಂಭಿಸಿದಲ್ಲಿ ಅನಾಹುತಗಳು ತಪ್ಪುವ ಸಂಭವವಿರುತ್ತದೆ.

ಹೊಟ್ಟೆಯಲ್ಲಿ ವಿಷ ಹೋಗಿದ್ದರೆ:— ಒಮ್ಮೆಲೇ ಜುಲಾಬು ಆಗುವದು. ವಾಂತಿಯಾಗುವದು. ಕೈಕಾಲುಗಳಿಗೆ ಸೆಳೆತ. ಹೊಟ್ಟೆಯಲ್ಲಿ ಸಂಕಟ ಮತ್ತು ನೋವು, ಭ್ರಮ, ಎಚ್ಚರತಪ್ಪುವದು ಈ ಲಕ್ಷಣಗಳಾಗುವವು. ವಿಷ ತೆಗೆದುಕೊಂಡದ್ದು ನಿಶ್ಚಿತ ತಿಳಿಯದೆ ಹೋದಾಗ, ಅವನ ವಾಂತಿ ವಿಷ್ಟೆಗಳನ್ನು ಕಾಜಿನ ಗ್ಲಾಸಿನಲ್ಲಿ ತೆಗೆದು ಪರೀಕ್ಷೆಗಾಗಿ ಕಳಿಸಬೇಕು. ಹೊಟ್ಟೆಯೊಳಗಿನ ವಿಷವು ಶರೀರದಲ್ಲಿ ಭೇದಿಸಬಾರದೆಂದು ಕೂಡಲೇ ಅವನಿಗೆ ಸಾಸಿವೆ ಅಥವಾ ಉಪ್ಪಿನ ನೀರಿನಿಂದ ವಾಂತಿಮಾಡಿಸಬೇಕು, ಡಾಕ್ಟರರಿಗೆ ಹೇಳಿಕಳಿಸಬೇಕು. ವಿಷ ಪ್ರಾಶನದಲ್ಲಿ ಕೆಳಗಿನ ಸಂಗತಿಗಳು ಅವಶ್ಯವಾಗಿವೆ. (೧) ವಿಷವನ್ನು ಹೊರಗೆಹಾಕುವದು. (೨) ವಿಷದ ಕೆಟ್ಟ ಪರಿಣಾಮವಾಗದಂತೆ ವಿರುದ್ಧ ಔಷಧಗಳನ್ನು ಕೊಡುವದು. (೩) ಔಷಧ ಕೊಟ್ಟು ವಿಷದ ಪರಿಣಾಮ ಕಡಿಮೆಯಾಗುವಂತೆ ಮಾಡುವದು.

ಅಫೂ

೪ ರಿಂದ ೮ ಗುಂಜಿ ಅಫೂ ಹೊಟ್ಟೆಯಲ್ಲಿ ಹೋದರೆ, ಪ್ರಾಣಕ್ಕೆ ಅಪಾಯವಾಗುವದು. ಅದನ್ನು ತೆಗೆದುಕೊಂಡ ಅರ್ಧತಾಸಿನನಂತರ ಅದರ

ಪರಿಣಾಮವಾಗಬಹುದು. ಅಫೂ ತಿಂದುಕೊಂಡವರು ೨೪ ತಾಸು ಬದುಕಿದರೆ ಮುಂದೆ ಗುಣವಾಗುವ ಸಂಭವವಿರುತ್ತದೆ.

ಅಫೂ ತಿಂದುಕೊಂಡವರಿಗಾಗುವ ಸಾಮಾನ್ಯ ಲಕ್ಷಣಗಳು

ಮೋರೆಯು ನಿಸ್ತೇಜವಾಗಿ, ಸ್ವಲ್ಪ ನೀಲಿಛಾಯೆಯು ಬರುವದು. ಉಸಿರಾಡಿಸುವ ಕ್ರಿಯೆಯು ಮಂದವಾಗಿ, ಘರಘರ ಅಂತಧ್ವನಿಯೂ ಆಗುವದು. ಮೊದಮೊದಲು ಸ್ವಲ್ಪ ಗುಂಗು ಬರುತ್ತಿ ಅನಂತರ ವಿಸ್ಮೃತಿಯಾಗುವದು. ನಾಡಿಗಳು ಮಂದವಾಗುವವು. ಕಣ್ಣಾಲಿಗಳ ಗೊಂಬೆಗಳು ಆಕುಂಚನ ಹೊಂದುವವು. ಶರೀರವು ತಣ್ಣಗಾಗುವದು.

ಉಪಚಾರ : ಅವರನ್ನು ಮಲಗಗೊಡಬಾರದು. ನಿದ್ರೆ ಬಾರದಂತೆ ಉಪಾಯಗಳನ್ನು ಯೋಜಿಸಬೇಕು. ಮೋರೆಯ ಮೇಲೆ, ತಲೆಯ ಮೇಲೆ ತಣ್ಣೀರು ಉಗ್ಗುತ್ತಿರಬೇಕು. ಅವನು ಕುಡಿಯುವ ಪರಿಸ್ಥಿತಿಯಲ್ಲಿ ಇದ್ದರೆ ಮೊದಲು ವಾಂತಿಗಾಗಿ ಔಷಧ ಕೊಡಬೇಕು.

೧೦-೧೨ ಔಂಸು ನೀರಿನಲ್ಲಿ ೧ ಚಮಚ ಸಾಸಿವೆಪುಡಿ ಅಥವಾ ೨ ಚಮಚ ಉಪ್ಪು ಕಲಿಸಿ ಕೊಡಬೇಕು. ಇದರಿಂದ ವಾಂತಿಯಾಗುತ್ತದೆ. ಅಥವಾ ಅವನ ಗಂಟಲದಲ್ಲಿ ಬೆರಳು ಹಾಕಿ ಇಲ್ಲವೆ ನವಿಲುಗರಿಯನ್ನು ಹಾಕಿ ವಾಂತಿಮಾಡಿಸಬೇಕು. ಸ್ಟಮಕ್‌ವಾಶ್ ಮಾಡಿಸುವದು. ೧೦-೧೨ ಔಂಸು ಬೇಸಿನೀರಿನಲ್ಲಿ ೧೦ ಗ್ರೇನು ಪೋಟ್ಯಾಶ ಪರಮ್ಯಾಂಗನೇಟು ಹಾಕಿ ಆ ನೀರು ಕುಡಿಯಲಿಕ್ಕೆ ಕೊಡಬೇಕು. ಕೆಳಗೆ ಬರೆದ ಉಪಚಾರ ಮಾಡಬೇಕು.

೧. ಬಿಸಿಬಿಸಿ ಕಾಫಿ, ಹಾಲು ಸಕ್ಕರೆ ಇಲ್ಲದೆ ಕೊಡಬೇಕು.

೨ ಅಟ್ರೋಪಿನ್ ಸಲ್ಫೇಟ್ನ ಇಂಜಕ್ಷನ್ ಕೊಡಿಸಬೇಕು. ಇದು ಅತಿಮಹತ್ವದ ಗುಣಕಾರಿ ಔಷಧ.

೩. ಕೈಕಾಲು ತಣ್ಣಗಾದಲ್ಲಿ ಕಾಸಬೇಕು. ಬಜೆಪುಡಿ ಹಚ್ಚಿ ತಿಕ್ಕಬೇಕು.

೪. ಅವಶ್ಯವಿದ್ದಲ್ಲಿ ಕೃತ್ರಿಮ ಶ್ವಾಸೋಚ್ಛ್ವಾಸ ಮಾಡಿಸಬೇಕು.

೫. ಕಾಳೇಂಬಡಿಕದ ರಸವನ್ನು ಕುಡಿಸಬೇಕು. ೧-೨ ಚಪ್ಪು.

ಭಾಂಗು ಮತ್ತು ಗಾಂಜಿ

ಭಾಂಗು ಮತ್ತು ಗಾಂಜಿ ಹೊಟ್ಟೆಯಲ್ಲಿ ತೆಗೆದುಕೊಳ್ಳುತ್ತಾರೆ. ಗಾಂಜಿಯನ್ನು ಸೇದುತ್ತಾರೆ. ಭಾಂಗು ಅಂದರೆ ಗಿಡದ ಒಣಗಿದ ಎಲೆ. ಗಾಂಜಿ ಎಂದರೆ ಒಣಗಿದ ಹೂವಿನ ಪುಡಿ. ಇವುಗಳ ಪರಿಣಾಮ ಅತಿಯಾದಾಗ ಸಿಕ್ಕ ಸಿಕ್ಕಂತೆ ಮಾತನಾಡುವರು. ಅವರ ಕಣ್ಣು ಕೆಂಪಾಗುವವು. ಗುಂಗು ಬರುತ್ತದೆ.

ಉಪಚಾರ:- ವಾಮಕ ಔಷಧ ಕೊಡಬೇಕು. ತಲೆಯ ಮೇಲೆ ತಣ್ಣೀರು ಸುರಿಯಬೇಕು. ಮಲಗಗೊಡಬಾರದು. [illegible]ಗಿಡದ ತೊಪ್ಪಲದ ರಸ ೨-೩ ತೊಲಿ ಕುಡಿಸಬೇಕು. ಮಜ್ಜಿಗೆ ಕುಡಿಸಬೇಕು. ಉಳ್ಳಾಗಡ್ಡಿ ಜಜ್ಜಿ ಮೂಗಿಗೆ ಹಿಡಿಯಬೇಕು. ಬಿಳೆ[illegible] ರಸದ ಅಂಜನವನ್ನು ಕಣ್ಣಿಗೆ ಹಚ್ಚಬೇಕು.

ತಂಬಾಕು

ತಂಬಾಕು ಹತ್ತಿದಾಗ - ಮೊದಲು ವಾಂತಿಮಾಡಿಸಿ ಆ ಮೇಲೆ ಬಿಸಿ ಬಿಸಿ ಕಾಫಿ ಕೊಡಬೇಕು. ಲವಂಗ ಹಾಕಿ ಮರಳಿಸಿದ ನೀರು ತುಸು ತುಸು ಕೊಡುತ್ತ ಹೋಗಬೇಕು.

ಬಚನಾಗ

ಬಚನಾಗದ ಎಲೆ ಮತ್ತು ಬೇರುಗಳನ್ನು ಔಷಧವನ್ನಾಗಿ ಉಪಯೋಗಿಸುವರು. ಬೇರಿನ ಚೂರ್ಣ ವಿಷಕಾರಿಯಾಗಿದ್ದು, ಹೊಟ್ಟೆಯೊಳಗೆ ಹೋದರೆ ಜೀವಕ್ಕೆ ಅಪಾಯವನ್ನುಂಟು ಮಾಡುತ್ತದೆ. ಅರ್ಧ ತಾಸಿನಿಂದ ೩ ತಾಸುಗಳಲ್ಲಿ ಮೃತ್ಯು ಸಂಭವಿಸಬಹುದು.

ಲಕ್ಷಣಗಳು:- ನಾಲಿಗೆ, ತುಟಿ, ಗಂಟಲುಗಳಲ್ಲಿ ಚುರುಚುರು ಅನಿಸುವದು. ಬಾಯಿ, ಅನ್ನನಲಿಕೆ ಮತ್ತು ಹೊಟ್ಟೆಗಳಲ್ಲಿ ದಾಹವೆನಿಸುವದು. ವಾಂತಿ ಮತ್ತು ಜುಲಾಬು ಆಗುವವು. ಝೋಲಿ ಹೋಗುವದು. ಪ್ರಮಾಣ ಮೀರಿ ಬಚನಾಗ ಹೊಟ್ಟೆಯಲ್ಲಿ ಹೋಗಿದ್ದರೆ ಹೃದಯದ ಕ್ರಿಯೆಯು ಮಂದವಾಗುತ್ತ ಆಗುತ್ತ ಪೂರ್ಣ ನಿಂತು ಮರಣ ಸಂಭವಿಸುವದು.

ಉಪಚಾರ:— ರೋಗಿಯನ್ನು ಮಗ್ಗಲು ಮಾಡಿ ಮಲಗಿಸಬೇಕು. ವಾಂತಿಯಾಗಲಿಕ್ಕೆ ಸಾಸಿವೆ ಅಥವಾ ಉಪ್ಪಿನ ನೀರು ಕೊಡಬೇಕು. ವಾಂತಿ

ಯಾದನಂತರ ಚಹಾ, ಕಾಫಿಗಳಂಥ ಉತ್ತೇಜಕಗಳನ್ನು ಕೊಡಬೇಕು. ಕುಡಿಯಲು ಬಾರದಿದ್ದರೆ ಎನಿಮಾದಿಂದ ಕೊಡಬೇಕು. ಕೈಕಾಲುಗಳನ್ನು ಕಾಸಬೇಕು. ಉಸಿರಾಡಿಸುವದು ನಿಂತರೆ ಕೃತ್ರಿಮ ಶ್ವಾಸೋಚ್ಛ್ವಾಸ ಮಾಡಿಸಬೇಕು. ಎದೆಬಾಧೆ ಕಡಿಮೆಯಾಗಬೇಕೆಂದು ಎರಡು ಮಾಸಿ ಟ್ಯಾನಿಕ್ ಆಸಿಡ್ ನೀರಿನಲ್ಲಿ ಕಲಿಸಿ ಕುಡಿಸಬೇಕು. ಮಾದಳಕಾಯಿಯ ಕಷಾಯವನ್ನು ಕೊಡಬೇಕು. ಟಂಕಣಕ್ಷಾರ ಹಾಕಿದ ನೀರು ಕುಡಿಯಲು ಕೊಡಬೇಕು.

ವಿಷಮುಷ್ಟಿ ಅಥವಾ ಕುಚಲಾ

ಕುಚಲದ ಬೀಜದ ಪುಡಿ ೨ ಮಾಸಿ ಅಥವಾ ಕುಚಲದ ಅರ್ಕ ೨ ಗುಂಜಿ, ಹೊಟ್ಟೆಯೊಳಗೆ ಹೋದರೆ ಮೃತ್ಯು ಸಂಭವಿಸುತ್ತದೆ. ೧೦ ನಿಮಿಷದಿಂದ ಎರಡು ತಾಸುಗಳಲ್ಲಿ ಮರಣ ಸಂಭವಿಸಬಹುದು.

ಲಕ್ಷಣಗಳು:— ನಡುಗು ಹುಟ್ಟುತ್ತದೆ. ಬಿಟ್ಟು ಬಿಟ್ಟು, ಕೈಕಾಲು, ಮೈ ನೆಟಿಸುವದು. ಅಶಕ್ತತೆ ಎನಿಸುವದು. ಶರೀರವು ಕಪ್ಪು ನೀಲೀ ಬಣ್ಣದ್ದು ಆಗುತ್ತದೆ. ರಕ್ತಪಾತ ಬಹಳ ಆಗುತ್ತದೆ. ಹೊಟ್ಟೆಯಲ್ಲಿ ದಾಹದ ಪರಿಣಾಮವಾಗಿ, ಸಂಕಟವಾಗುತ್ತದೆ. ವಾತಸಂಸ್ಥೆಯ ಮೇಲೆ ವಿಶೇಷ ಪರಿಣಾಮವಾಗುತ್ತದೆ.

ಉಪಚಾರ:— ೧. ಸಾಸಿವೆ ಅಥವಾ ಉಪ್ಪಿನ ನೀರಿನಿಂದ ವಾಂತಿ ಮಾಡಿಸಬೇಕು.

೨. ಕೈಕಾಲು ನೆಟಿಸುವದು ಕಡಿಮೆಯಾಗಬೇಕೆಂದು ೧-೨ ಮಾಸಿ ಪೋಟ್ಯಾಶಬ್ರೋಮಾಯಿಡ ಕೊಡಬೇಕು. ಅಥವಾ ಲ್ಯೂಮಿನಾಲ ಗುಳಿಗೆಯನ್ನು ಕೊಡಬೇಕು. ಇಲ್ಲವಾದರೆ ೧-೨ ಗುಂಜಿ ಗಾಂಜಿ ಕೊಡಬೇಕು.

೩. ಹಾಲು, ಮಜ್ಜಿಗೆ ಅಥವಾ ತತ್ತಿಯೊಳಗಿನ ಬಿಳೀ ಭಾಗವನ್ನು ಕೊಡಬೇಕು.

೪. ಇಂಟ್ರಾವೆನಸ್ ಸಲಾಯಿನ ಕೊಡಿಸಬೇಕು.

೫. ಅವಶ್ಯವೆನಿಸಿದಲ್ಲಿ ಕೃತ್ರಿಮ ಶ್ವಾಸೋಚ್ಛ್ವಾಸ ಮಾಡಿಸಬೇಕು.

೬. ಕೈಕಾಲುಗಳು ತಣ್ಣಗಾದರೆ ಕಾಸಬೇಕು.

೭. ಹೊಟ್ಟೆಯಲ್ಲಿ ನೋವು ಬಹಳ ಎನಿಸಿದರೆ, ಹೊಟ್ಟೆಯನ್ನು ಕಾಸಬೇಕು.

೮. ಈ ವಿಷ ತೆಗೆದುಕೊಂಡ ರೋಗಿಯನ್ನು ಶಾಂತ ಮತ್ತು ಕತ್ತಲೆ ಕೋಣೆಯಲ್ಲಿ ಮಲಗಿಸಬೇಕು. ತೊಂದರೆ ಕೊಟ್ಟು ಅವನನ್ನು ಎಬ್ಬಿಸಬಾರದು.

ಸುಂಬಳಖಾರ

೧. ೨-೩ ಗುಂಜಿ ಸುಂಬಳಖಾರ ಹೊಟ್ಟೆಯೊಳಗೆ ಹೋದರೆ ೨೪ ತಾಸುಗಳಲ್ಲಿ ಮೃತ್ಯು ಬರುವ ಸಂಭವವಿದೆ.

ಮುಖ್ಯ ಲಕ್ಷಣಗಳು :— ವಾಂತಿ, ಜುಲಾಬು ಆಗುವವು. ಹೊಟ್ಟೆಯೊಳಗೆ ಅತಿಶಯ ದಾಹವಾಗುತ್ತ ಬೆವರು ಬಿಡುತ್ತದೆ. ಧ್ವನಿಯು ಕುಗ್ಗಿದಂತಾಗುವದು. ಶಕ್ತಿಪಾತವಾಗುವದು.

ಉಪಚಾರ :— ೧. ವಾಂತಿಯಾಗುತ್ತಿದ್ದಿಲ್ಲವೆಂದರೆ, ವಾಮಕ ಔಷಧ ಕೊಟ್ಟು ವಾಂತಿ ಮಾಡಿಸಬೇಕು.

೨. ಬೆಚ್ಚಗಿನ ನೀರು ಮೇಲಿಂದ ಮೇಲೆ ಕುಡಿಯಲಿಕ್ಕೆ ಕೊಡಬೇಕು.

೩. ವಾಂತಿಯಾದ ಬಳಿಕ ಉಳಿದ ವಿಷವನ್ನು ನಿಃಸತ್ವವಮಾಡುವದಕ್ಕಾಗಿ ಮ್ಯಾಗ್ನೇಶಿಯಮ್ ಕಾರ್ಬೋನೇಟ ೨೦ ಗ್ರೇನು ನೀರಿನಲ್ಲಿ ಕೊಡಬೇಕು. ಇದನ್ನು ೩-೪ ಸಲ ಬಿಟ್ಟು ಬಿಟ್ಟು ಕೊಡಬೇಕು. ಅಥವಾ ಕಬ್ಬಿನ ರಸವನ್ನು ಕುಡಿಯಲು ಕೊಡಬೇಕು.

೪. ಸುಣ್ಣದ ತಿಳಿನೀರು ೨೦ ಔಂಸು, ಒಳ್ಳೆಣ್ಣೆ ೧೦ ಔಂಸು ಕಲಿಸಿ ಸ್ವಲ್ಪ ಸ್ವಲ್ಪ ಕುಡಿಯಲು ಕೊಡಬೇಕು. ಬಾರ್ಲಿ ನೀರು ಕೊಡಬೇಕು.

೫. ಹಾಲು ಕೋಳಿತತ್ತಿ ಕೂಡಿಸಿ ಕೊಡಬೇಕು.

೬ ತಣ್ಣಗಿನ ನೀರು ಅಥವಾ ಬರ್ಫ ಕೊಡಬೇಕು.

೭. ಅಂತರ್ದಾಹಕ್ಕೆ ಮಾರ್ಫಿಯಾದ ಇಂಜಕ್ಷನ್ ಕೊಡಬೇಕು.

೮. ಶಕ್ಯವಾದರೆ ಗ್ಲೂಕೋಜದ ಇಂಟ್ರಾವ್ಹೇನಸ ಇಂಜಕ್ಷನ್ ಕೊಡುವದು.

೯. ಮುಕ್ತಾಭಸ್ಮ, ಚಂದ್ರಕಲಾ, ಸೂತಶೇಖರ, ಉಶೀರಾಸವಗಳಂಥ ಔಷಧಗಳನ್ನು ಕೊಡಬೇಕು.

೧೦. ಕೈಕಾಲುಗಳು ತಣ್ಣಗಾದರೆ ಕಾಸಬೇಕು.

೧೧. ಅವಶ್ಯವೆನಿಸಿದಲ್ಲಿ ಕೃತ್ರಿಮ ಶ್ವಾಸೋಚ್ಛ್ವಾಸ ಮಾಡಿಸಬೇಕು.

೧೨. ಬಾಳೆದಿಂಡಿನ ರಸವನ್ನು ತುಪ್ಪಹಾಕಿ ಕುಡಿಸಬೇಕು.

೧೩. ಶಕ್ತಿಪಾತವಾಗಿದ್ದರೆ ಬ್ರಾಂಡಿ ಕೊಡಬೇಕು.

೮ ರಸಕರ್ಪೂರ

ಇದರಲ್ಲಿ ಪಾರಜದ ಅಂಶವು ಮುಖ್ಯವಾಗಿರುತ್ತದೆ. ಇದನ್ನು ಔಷಧದಲ್ಲಿ ಉಪಯೋಗಿಸುವ ಪ್ರಮಾಣ ಅರ್ಧದಿಂದ ೩ ಗುಂಜಿ. ಇದಕ್ಕೂ ಹೆಚ್ಚು ಪ್ರಮಾಣದಿಂದ ಹೊಟ್ಟೆಯೊಳಗೆ ಹೋದಲ್ಲಿ ಪ್ರಾಣಕ್ಕೆ ಅಪಾಯವನ್ನುಂಟು ಮಾಡುತ್ತದೆ. ೧ ಗಂಟೆಯಿಂದ ೪ ದಿವಸಗಳಲ್ಲಿ ಮರಣಬಂದ ಉದಾಹರಣೆಗಳಿರುವವು.

ಸಾಮಾನ್ಯ ಲಕ್ಷಣಗಳು:-- ಬಾಯಿಯಲ್ಲಿ ಒಂದು ತರದ ವಾಸನೆ, ಹೊಟ್ಟೆಯಲ್ಲಿ ನೋವು, ಮಳಮಳಿಸುವದು, ಧ್ವನಿ ಕುಗ್ಗುವದು, ವಾಂತಿ ಮತ್ತು ಜುಲಾಬು ಆಗುವದು, ಬೆವರುಬಿಡುವದು, ವಿಸ್ಮೃತಿ, ಒರಟೆಬರುವದು.

ಉಪಚಾರ :— ತತ್ತಿಯೊಳಗಿನ ಬಿಳೀಭಾಗವು ಇದಕ್ಕೆ ಉತ್ತಮ ಔಷಧವಾಗಿದೆ. ೮–೧೦ ತತ್ತಿಯೊಳಗಿನ ಬಿಳೀ ರಸವನ್ನು ೨೫ ಔಂಸು ನೀರಿನಲ್ಲಿ ಚನ್ನಾಗಿ ಕಲಿಸಿ ಮೇಲಿಂದಮೇಲೆ ಕೊಡುತ್ತ ಹೋಗಬೇಕು. ಕೋಳೀ ತತ್ತಿ ತೀವ್ರ ಸಿಗದೇ ಇದ್ದಲ್ಲಿ, ನೀರೊಳಗೆ ಅರಳಿಟ್ಟು ಕಲಿಸಿ ಅಥವಾ ಅರಾರೋಟ ಕಲಿಸಿ ಆ ನೀರು ಪುನಃ ಪುನಃ ಕುಡಿಯಲು ಕೊಡಬೇಕು.

೧. ಮೊದಲು ಕೋಳೀ ತತ್ತಿ ಹಾಲುಕೊಟ್ಟು ತುಸು ವೇಳೆ ಬಿಡಬೇಕು. ನಂತರ ಉಪ್ಪಿನ ನೀರು ಕುಡಿಸಿ ವಾಂತಿ ಮಾಡಿಸಬೇಕು. ಆ ಮೇಲೆ ಪುನಃ ಕೋಳೀ ತತ್ತಿ ಹಾಲು ಕೊಡಬೇಕು.

೨. ಹಾಲು, ಮಜ್ಜಿಗೆ, ಬೆಣ್ಣೆಗಳನ್ನು ಕೊಡಬೇಕು.

೩. ಕಾಫಿ—ಬ್ರಾಂಡಿ ಕೊಡಬೇಕು.

೪. ಮೂತ್ರ ಆಗದೆ ಇದ್ದರೆ ಬಾರ್ಲಿ ನೀರು ಕೊಡಬೇಕು.

೫. ಅಂತರ್ದಾಹಕ್ಕೆ ಮಾರ್ಫಿಆದ ಇಂಜಕ್ಶನ್ ಕೊಡಬೇಕು.

೬. ಹೇಮಗರ್ಭ, ಸೂತಶೇಖರಗಳಂಥ ಉತ್ತೇಜಕ ಔಷಧಗಳನ್ನು ಸೂಕ್ಷ್ಮ ಪ್ರಮಾಣದಿಂದ ಕೊಡಬೇಕು.

೭. ಕೈಕಾಲುಗಳು ತಣ್ಣಗಾದಲ್ಲಿ ಕಾಸಬೇಕು.

೮. ಅವಶ್ಯವೆನಿಸಿದಲ್ಲಿ ಕೃತ್ರಿಮ ಶ್ವಾಸೋಚ್ಛ್ವಾಸ ಕ್ರಮ ಕೈಕೊಳ್ಳಬೇಕು.

೯. ಹೊಟ್ಟೆ ಮೇಲೆ ಕಂಬಳಿ ಹೊಚ್ಚಬೇಕು.

೯ ತುತ್ತ

೨-೩ ತೊಲೆ ತುತ್ತಿಯು ಹೊಟ್ಟೆಯೊಳಗೆ ಹೋದರೆ ಪ್ರಾಣಘಾತಕವಾಗುವದು. ಚಿಕ್ಕಮಕ್ಕಳು ಇದನ್ನು ತೆಗೆದುಕೊಂಡಿದ್ದರೆ ೪ ತಾಸಿನಲ್ಲಿ ಸಾಯುವ ಸಂಭವವಿರುತ್ತದೆ. ಪ್ರೌಢ ಮನುಷ್ಯರಿಗೆ ೨೪ ತಾಸುಗಳಲ್ಲಿ ಮೃತ್ಯುಬರುವ ಸಂಭವವಿದೆ.

ಲಕ್ಷಣಗಳು :— ವಾಂತಿ, ಜುಲಾಬು, ಬಾಯಿಯಲ್ಲಿ ಜೊಲ್ಲುಬರುವದು, ಗಂಟಲು ಒಣಗುವದು, ಹೊಟ್ಟೆ ನೋಯುವದು, ಹೊಟ್ಟೆ ಮುರಿಯುವದು, ಸೆಟಬೇನೆ, ಕೈಕಾಲುಗಳಲ್ಲಿ ನಿತ್ರಾಣ, ವಿಸ್ಮೃತಿ.

ಉಪಚಾರ :— ೧. ಮೊದಲು ಕೋಳಿ ತತ್ತಿ ಹಾಲು ಕೊಟ್ಟು, ತುಸು ವೇಳೆಯನಂತರ ಉಪ್ಪಿನ ನೀರಿನಿಂದ ವಾಂತಿ ಮಾಡಿಸಬೇಕು.

೨. ಹಾಲು, ಮಜ್ಜಿಗೆ, ಬಾರ್ಲಿ ನೀರು ಕುಡಿಯಲು ಕೊಡಬೇಕು. ಬೆಣ್ಣೆಯನ್ನು ತಿನ್ನಲು ಕೊಡಬೇಕು, ಸಕ್ಕರೆ ಕೊಡುವದು.

೩. ಬಿಸಿಬಿಸಿ ಕಾಫಿ ಕೊಡಬೇಕು.

೪. ಅಂತರ್ದಾಹಕ್ಕೆ ಮಾರ್ಫಿಆದ ಇಂಜಕ್ಶನ್ ಕೊಡುವದು.

೫. ಕೈಕಾಲುಗಳು ತಣ್ಣಗಾದರೆ ಕಾಸಬೇಕು.

೬. ಹೊಟ್ಟೆನೋವಿಗೆ ಹೊಟ್ಟೆಯನ್ನು ಕಾಸಬೇಕು.

೭. ಇದ್ದಿಲ ಪುಡಿ ಸೋಸಿ ನೀರಿನಲ್ಲಿ ಕೊಡುವದು.

ಉಪಚಾರವನ್ನು ಪ್ರಾರಂಭಿಸುವ ಮೊದಲು ಪೊಟ್ಯಾಶ ಫೇರಿ ಸಾಯನಾಯಿಡ ಎಂಬ ಔಷಧ ಸಿಕ್ಕರೆ ಅದನ್ನು ೧ ಡ್ರಾಮು ತೆಗೆದುಕೊಂಡು

೧೦—೧೨ ದಿವಸ, ಸ್ವಲ್ಪ ಹಾಕಿ ಸೋಸಿ ಕುಡಿಸಬೇಕು. ಇದರಿಂದ ಉತ್ತಮ ಗುಣ ಬರುತ್ತದೆ

೧೮ ಟಿಂಚರ ಅಯೋಡಿನ್

ಶುದ್ಧ ಅಯೋಡಿನ ಅಥವಾ ಪ್ರಾಯಃ ಹೊಟ್ಟೆಯಲ್ಲಿ ಹೋದರೆ ಅಪಾಯ ಮಾಡುತ್ತದೆ.

ಲಕ್ಷಣಗಳು. [illegible]

[illegible]

೧. [illegible]

೨. [illegible] ಸ್ವತಂತ್ರವಾಗಿ [illegible]

೩. ತಣ್ಣನೆ [illegible] ಹಾಕಿ ಮೇಲಿಂದ ಮೇಲೆ ಕುಡಿಯಲಿಕ್ಕೆ ಕೊಡುವದು

೪. ಬಿಸಿ ಶಾಖ ಕೊಡುವದು

೫. ಅಂತರಾಗದಲ್ಲಿ ಮಾರ್ಫಿಯ ಇಂಜೆಕ್ಷನ್ ಕೊಡುವದು.

೬. ಇಂಟ್ರಾವೇನಸ್ ಸಲಾಯಿನ್ ಕೊಡುವದು.

೭. ಕೈಕಾಲು ತಣ್ಣಗಾದಲ್ಲಿ ಕಾಸುವದು.

೧೯ ಜಾಯಿಕಾಯಿ

ಜಾಯಿಕಾಯಿಕ್ಕೆ ಜಾಯಿಫಳವೆಂದೆನ್ನುವರು. ಇದು ಬಿಸಿಯುಳ್ಳ ಪದಾರ್ಥ. ಇದರ ಎಣ್ಣೆ ಮತ್ತು ಬೀಜಗಳನ್ನು ಔಷಧದಲ್ಲಿ ಉಪಯೋಗಿಸುವರು. ೧೫-೨೦ ಹನಿ ಎಣ್ಣೆ ಹೊಟ್ಟೆಯಲ್ಲಿ ಹೋದರೆ, ಜೀವಕ್ಕೆ ಅಪಾಯವಾಗುವ ಸಂಭವವಿರುತ್ತದೆ. ಇದನ್ನು ತೆಗೆದುಕೊಂಡ ೪-೫ ತಾಸುಗಳಲ್ಲಿ ವ್ಯಕ್ತಿ ಬಿಧುವದು.

ಲಕ್ಷಣಗಳು:— ಹೊಟ್ಟೆ ಮತ್ತು ಕರುಳುಗಳಲ್ಲಿ ದಾಹ ಉತ್ಪನ್ನವಾಗುತ್ತದೆ. ಜುಲಾಬ ಆಗುತ್ತದೆ.

ಉಪಚಾರ:— ೧. ಸೌಮ್ಯವಾಮಕ ಔಷಧಗಳನ್ನು ಕೊಡಬೇಕು. ಕೇವಲ ಬೆಚ್ಚಗಿನ ನೀರು ಕೊಡುವದರಿಂದ ವಾಂತಿಯಾದರೆ ಬಹಳ ನೆಟ್ಟಗೆ. ಇಲ್ಲವಾದರೆ ಉಪ್ಪಿನ ನೀರು ಕೊಡಬೇಕು.

೨. ಹಾಲು ಕೋಳೀತತ್ತಿ ಕೊಡಬೇಕು.

೩. ಬಿಸಿಬಿಸಿ ಕಾಫಿ ಕೊಡಬೇಕು.

೪. ಕೈಕಾಲು ತಣ್ಣಗಾದಲ್ಲಿ ಕಾಸಬೇಕು.

೫. ಹೊಟ್ಟೆ ನೋಯುತ್ತಿದ್ದರೆ ಕಾಸಬೇಕು.

೬. ಉತ್ತೇಜಕವೆಂದು ದ್ರಾಕ್ಷಾಸವ ಅಥವಾ ಬ್ರಾಂದಿ ಕೊಡಬೇಕು.

೧೨ ಧತ್ತೂರ

ಮದಗುಣಿಕೆಯ ಎಲ್ಲ ಅಂಗಗಳು ವಿಷಯುಕ್ತವಿರುತ್ತವೆ. ಆದರೂ ಬೀಜ ಮತ್ತು ಕಾಯಿಗಳಲ್ಲಿ ವಿಷವು ಹೆಚ್ಚಿರುತ್ತದೆ. ಹೆಚ್ಚು ಪ್ರಮಾಣದಿಂದ ತೆಗೆದುಕೊಂಡಲ್ಲಿ ಜೀವಕ್ಕೆ ಅಪಾಯವಾಗುವ ಸಂಭವವಿದೆ. ೧೨ ರಿಂದ ೨೪ ತಾಸುಗಳಲ್ಲಿ ಮೃತ್ಯು ಬರಬಹುದು.

ಲಕ್ಷಣಗಳು:— ಹೊಟ್ಟೆಯಲ್ಲಿ ಸಂಕಟ, ನಿದ್ರೆ, ಭ್ರಮ, ಗಂಟಲು, ಬಾಯಿ, ಒಣಗುವದು. ಮುಖವು ಕೆಂಪಗಾಗುವದು ಶರೀರದಲ್ಲಿ ಉಷ್ಣತೆ ಹೆಚ್ಚುವದು, ಕೈ ನಡುಗುವವು. ಮುಖ್ಯವಾಗಿ ಕಣ್ಣುಗೊಂಬೆಗಳು ವಿಸ್ತೃತವಾಗುವವು. ಶ್ವಾಸೋಚ್ಛ್ವಾಸ ಮಂದವಾಗುವದು.

ಉಪಚಾರ:—(೧) ಉಪ್ಪಿನ ನೀರಿನಿಂದ ವಾಂತಿ ಮಾಡಿಸುವದು.

೨. ಅಳಲೇಕಾಯಿ ಚೂರ್ಣ ಅಥವಾ ಕಷಾಯ ಕೊಡುವದು.

೩. ಬಿಸಿ ಬಿಸಿ ಕಾಫಿ ಅಥವಾ ಬ್ರಾಂದಿ ಕೊಡಬೇಕು.

೪. ಕೈ ಕಾಲು ತಣ್ಣಗಾದರೆ ಕಾಸುವದು.

೫. ಮೂತ್ರ ತಡೆದು ನಿಂತರೆ, ಮೂತ್ರ ತೆಗೆಯುವ ರಬ್ಬರ ನಳಿಕೆಯಿಂದ ಮೂತ್ರ ತೆಗೆಯುವದು.

೬. ತಲೆ ಮತ್ತು ಮೋರೆಗೆ ಒಮ್ಮೆ ಬಿಸಿನೀರು ಮತ್ತೊಮ್ಮೆ ತಣ್ಣೀರು ಅದಲು ಬದಲು ಮಾಡಿ ಉಗ್ಗುತ್ತಿರಬೇಕು.

೧೩ ಕಾರ್ಬಾಲಿಕ್ ಅಸಿಡ್

ಒಂದು ಚಮಚೆ ಅಸಿಡ್ ತೆಗೆದುಕೊಂಡಲ್ಲಿ ೨ ತಾಸುಗಳಿಂದ ೩ ದಿವಸಗಳಲ್ಲಿ ಮರಣ ಸಂಭವಿಸಬಹುದು. ಕಾರ್ಬಾಲಿಕ್ ಅಸಿಡ್ ತೆಗೆದುಕೊಂಡದ್ದು ತಿಳಿದರೆ ಕೆಳಗಿನಂತೆ ಉಪಚರಿಸಬೇಕು.

೧. ಮಾಗಸಲ್ಫ ಅಥವಾ ಸೋಡಿಯಮ್ ಸಲ್ಫೇಟನ್ನು ಅರ್ಧ ಔಂಸು ತೆಗೆದುಕೊಂಡು, ೮ ಔಂಸು ನೀರಿನಲ್ಲಿ ಕೂಡಿಸಿ ಕುಡಿಯಲಿಕ್ಕೆ ಕೊಡಬೇಕು. ಅಥವಾ ಸುಣ್ಣದ ತಿಳಿನೀರಿನಲ್ಲಿ ಸಕ್ಕರೆ ಹಾಕಿ ೧ ಔಂಸು ತೆಗೆದುಕೊಂಡು ೨ ಔಂಸು ನೀರು ಕೂಡಿಸಿ ಕುಡಿಯಲಿಕ್ಕೆ ಕೊಡಬೇಕು.

೨. ಕೋಳೀತತ್ತಿ ಹಾಲು ಕುಡಿಯಲಿಕ್ಕೆ ಕೊಡಬೇಕು.

೩. ಒಳ್ಳೆಣ್ಣೆಯನ್ನು ಕುಡಿಯಲು ಕೊಡಬೇಕು. ೧-೨ ಔಂಸು. ಅಥವಾ ೧ ಔಂಸು ಔಡಲ ಎಣ್ಣೆಯನ್ನು ಕೊಡಬೇಕು.

೪. ಬಿಸಿಬಿಸಿ ಕಾಫಿ ಕೊಡುವದು.

೫. ಕೈ ಕಾಲು ತಣ್ಣಗಾದಲ್ಲಿ ಕಾಸುವದು.

೧೪ ಸಲ್ಫ್ಯೂರಿಕ್ ಅಸಿಡ್ ನೈಟ್ರಿಕ್ ಅಸಿಡ್ ಹೈಡ್ರೋಕ್ಲೋರಿಕ್ ಅಸಿಡ್

ಇವುಗಳಲ್ಲಿ ಯಾವುದನ್ನೇ ತೆಗೆದುಕೊಂಡಿರಲಿ, ಅವರಿಗೆ ವಾಂತಿಯಾಗಲು ಔಷಧ ಕೊಡಬಾರದು.

೧. ೨ ಔಂಸು ನೀರಿನಲ್ಲಿ ಮಾಗ್ನೇಸಿಯಮ್ ಕಾರ್ಬೋನೇಟ ೩೦ ಗ್ರೇನು ಹಾಕಿ ಮೇಲಿಂದ ಮೇಲೆ ಕುಡಿಯಲಿಕ್ಕೆ ಕೊಡುವದು.

೨. ಸುಣ್ಣದ ತಿಳಿನೀರು ೧-೨ ಔಂಸು ಕೊಡುವದು.

೩. ಹಾಲು ಕೋಳೀತತ್ತಿ, ಬಾರ್ಲಿ ನೀರು ಕೊಡಬೇಕು.

೪. ಅಂತರ್ಭಾಗಕ್ಕೆ ಮಾರ್ಫೀಯಾದ ಇಂಜಕ್ಷನ್ ಕೊಡುವದು.

೫. ಸಲಾಯಿನ ಇಂಟ್ರವ್ಹೇನಸ್ ಕೊಡುವದು.

೬. ಕೈಕಾಲು ತಣ್ಣಗಾದರೆ ಕಾಸಬೇಕು.

೭. ಸೂತಕೇಮಿರ ಮೇಮುಗರ್ಭಗಳನ್ನು ಸಮಯವರಿತು ಕೊಡಬೇಕು. ಸಲ್ಫುರಿಕ್ ಅಸಿಡ್ ಅರ್ಧದಿಂದ ಒಂದು ಚಮಚೆ, ನೈಟ್ರಿಕ್ ಅಸಿಡ್ ೨ ಚಮಚೆ, ಹೈಡ್ರೋಕ್ಲೋರಿಕ್ ಅಸಿಡ್ ೧ ರಿಂದ ೪ ಚಮಚೆ ತೆಗೆದುಕೊಂಡಲ್ಲಿ ಮರಣ ಸಂಭವಿಸುವದು.

೧೫ ಮದ್ಯ

ಮದ್ಯ ಕುಡಿದದ್ದು ಅವರ ಬಾಯಿಯ ವಾಸನೆಯಿಂದ ತಿಳಿಮಕೊಳ್ಳಬೇಕು. ಕೂಡಲೇ ತಿಳಿದರೆ ನೀರಿನಲ್ಲಿ ಉಪ್ಪು ಹಾಕಿ, ಅಥವಾ ಸಾಸಿವೆಪುಡಿ ಹಾಕಿ ಕುಡಿಸಿ ವಾಂತಿ ಮಾಡಿಸಬೇಕು. ತಲೆಯ ಮೇಲೆ ತಣ್ಣೀರು ಸುರುಪಬೇಕು. ಕೈಕಾಲುಗಳನ್ನು ಕಾಸಬೇಕು. ಬಳ್ಳೊಳ್ಳಿರಸದ ಅಂಜನವನ್ನು ಹಚ್ಚಬೇಕು. ಬಡೇಸೋಪು ಹಾಕಿ ಕುದಿಸಿದ ನೀರು ಕುಡಿಸಬೇಕು.

ನಾಲಿಗೆಗೆ ಸುಣ್ಣ ಬಹಳ ಹತ್ತಿದ್ದಕ್ಕೆ:— ನಾಲಿಗೆಯು ಕೆಂಪು ಆದರೆ—ಬದಾಮ ಅಥವಾ ಕೊಬ್ರಿ ತಿನ್ನಲಿಕ್ಕೆ ಕೊಡಬೇಕು. ಜೇನುತುಪ್ಪವನ್ನು ತಿನ್ನಬೇಕು.

ಕೇರುಹತ್ತಿದ್ದಕ್ಕೆ— ಕೊಬ್ರಿ ಎಣ್ಣೆ ಎಳ್ಳೆಣ್ಣೆ ಅಥವಾ ಬೆಣ್ಣೆಯನ್ನು ಹಚ್ಚಬೇಕು. ಇಲ್ಲವೆ ಕೊತಂಬರಿ ರಸವನ್ನು ಹಚ್ಚಬೇಕು.

೧೬ ಕಾಜಿನಪುಡಿ ತೆಗೆದುಕೊಂಡಿದ್ದರೆ

ಕಾಜು ಕುಟ್ಟಿ ಪುಡಿ ಮಾಡಿ ತಿಂದದ್ದು ತಿಳಿದುಬಂದಲ್ಲಿ ಕೆಳಗಿನಂತೆ ಉಪಚರಿಸಬೇಕು.

೧. ಅಂಥವರಿಗೆ ಜುಲಾಬು ಆಗಲಿಕ್ಕೆ ಎಂದೂ ಕೊಡಬಾರದು.

೨. ಬ್ರೆಡ್ಡು ಬೆಣ್ಣೆ, ಅಥವಾ ಹಾಲೋಳಿಗೆ ಮಾಡಿದ ರೊಟ್ಟಿ ಬೆಣ್ಣೆ ಕೊಡಬೇಕು. ಈ ಪ್ರಕಾರ ೭-೮ ದಿವಸ ಮಾಡಬೇಕು. ನೀರು ಬಹಳ ಕಡಿಮೆ ಪ್ರಮಾಣದಿಂದ ಕುಡಿಯಲು ಕೊಡಬೇಕು.

೧೭. ಚೇಳು ಕಡಿದರೆ

೧. ಕಡಿದ ಸ್ಥಳದ ಮೇಲ್ಭಾಗದಲ್ಲಿ ಬಿಗಿಯಾಗಿ ಕಟ್ಟು ಕಟ್ಟಿ, ಬ್ಲೇಡಿ-ನಿಂದ ತುಸು ಕೊಯ್ದು, ಪೊಟ್ಯಾಸ ಪರಮ್ಯಾಂಗನೇಟದ ಕಣಗಳನ್ನು ಇಟ್ಟು ತಿಕ್ಕುವದು.

೨. ನವಸಾಗರದ ಹರಳು ಅಥವಾ ತಿನ್ನುವ ಸೋಡಾ ಹಾಕಿದ ನೀರಿನ ಪಟ್ಟಿಯನ್ನು ಕಡಿದ ಸ್ಥಳದ ಮೇಲೆ ಇಡುವದು.

೩. ಉಪ್ಪುಗಡ್ಡೆಯನ್ನು ಹಚ್ಚಿ ಅದನ್ನು ತಿಕ್ಕುವದು. ಅಥವಾ ಕರ್ಪೂರ ಹಚ್ಚಿ ತಿಕ್ಕಬೇಕು.

೪. ಉತ್ತರಾಣಿಯ ಬೇರು ತೇಯ್ದು ಲೇಪನಮಾಡುವದು. ಹೊಟ್ಟೆ-ಯಲ್ಲಿಯೂ ಕೊಡುವದು.

೫. ಬಿಸಿಬಿಸಿ ಕಾಫಿ, ಚಹಾ, ಹಾಲು ಕೊಡುವದು.

೧೮ ಹಾವು ಕಚ್ಚುವದು

ಹಾವುಗಳಲ್ಲಿ ಅನೇಕ ಜಾತಿಗಳಿರುವವು. ಅವುಗಳಲ್ಲಿ ಕೆಲವು ಮಾತ್ರ ವಿಷಯುಕ್ತವಿರುತ್ತವೆ. ವಿಷಾರಿ ಹಾವು ಕಚ್ಚಿದರೆ ಎರಡು ಹಲ್ಲುಗಳು ಕಡಿದ ಸ್ಥಳದಲ್ಲಿ ಮೂಡಿದ್ದು ಕಾಣುತ್ತವೆ. ಅಂದರೆ ಎರಡು ಕಡೆಗೆ ಕಚ್ಚುಗಳಿರುತ್ತವೆ. ಕಡಿದ ಸ್ಥಳದ ಸುತ್ತಮುತ್ತ ತುಸು ಬಾವು ಇದ್ದು, ಆ ಭಾಗವು ತುಸು ನೀಲಿ ಬಣ್ಣದ್ದಾಗಿ ಕಾಣುವದು. ಕಡಿದ ಸ್ಥಳದಲ್ಲಿ ಮತ್ತು ಸರ್ವ ಶರೀರದಲ್ಲಿ ದಾಹ, ನಾಲಿಗೆಯು ನಿಃಶಕ್ತವಾಗುವದು. ಜೊಲ್ಲು ಸೋರುವದು. ವಾಂತಿ, ಗಂಟಲುನೋವು ಅತಿಶಯಕ್ಕೆ ಹೆಚ್ಚುತ್ತ ಹೋಗುವದು. ಶಕ್ತಿಪಾತ, ಶ್ವಾಸೋಚ್ಛ್ವಾಸವು ನಿಲ್ಲುವ ಪ್ರಸಂಗ. ಈ ಲಕ್ಷಣಗಳಾಗುವವು.

ಉಪಚಾರ.— ಡಾಕ್ಟರರನ್ನು ಕೂಡಲೆ ಕರೆಯಿಸಬೇಕು. ಅವರು ಬರುವ ತನಕ ಮಾಡುವ ಉಪಚಾರಗಳು.

೧. ಹಾವು ಕಚ್ಚಿದ ಸ್ಥಳದ ಮೇಲ್ಭಾಗದಲ್ಲಿ ಗಟ್ಟಿ ಹುರಿಯಿಂದ ಅಥವಾ ಧೋತರದ ಅಂಚಿನಿಂದ ಬಿಗಿಯಾಗಿ ಕಟ್ಟಬೇಕು. ಇದರಿಂದ ವಿಷವು ರಕ್ತಾ-ಶಯದ ಕಡೆಗೆ ಹೋಗಲು ಅಸ್ಪದ ದೊರೆಯುವದಿಲ್ಲ.

೨. ಬಂಧನವನ್ನು ಕಟ್ಟಿದ ನಂತರ ಕಟ್ಟಿದ ಸ್ಥಳದಲ್ಲಿ ಹದನಾದ ಚಾಕು-ವಿನಿಂದ ಅಥವಾ ರೇಝರ ಬ್ಲೇಡದಿಂದ ಈ ಆಕೃತಿಯಂತೆ ಕೊಯ್ದು ಅಥವಾ ತ್ವಚೆಯನ್ನು ಸೀಳಿ, ಆ ಭಾಗದಿಂದ ರಕ್ತಸ್ರಾವವಾಗುವಂತೆ ತಿಕ್ಕಿ ಸುತ್ತು ಮುತ್ತು ಕೈಯಿಂದ ಒತ್ತಬೇಕು. ಪೋಟ್ಯಾಶ್ ಪರಮಾಂಗನೇಟದ ಕಣಗಳನ್ನು ಕೊಯ್ದ ಭಾಗದ ಮೇಲೆ ಇಟ್ಟು ತಿಕ್ಕಬೇಕು. ಇದರಿಂದ ವಿಷದ ಪರಿಣಾಮವು ಕಡಿಮೆಯಾಗುತ್ತದೆ.

೩. ಸಣ್ಣ ಬಿಡಚಿ ಕಾಸಿ ಕಡಿದ ಭಾಗವನ್ನು ಸುಡಬೇಕು.

೪. ಹಾವು ಕಡಿದ ಮನುಷ್ಯನಿಗೆ ಸ್ಮೃತಿ ಇದ್ದರೆ, ಅವನಿಗೆ ಸ್ಪಿರಿಟ್ ಅಮೋನಿಯಾ ಅರೋಮಾಟಿಕ್ ೩೦ ಹನಿ ನೀರಿನಲ್ಲಿ ಅಥವಾ ಬ್ರಾಂಡಿಯನ್ನು ಕೊಡಬೇಕು.

೫. ನೂರು ಹನಿ ನೀರಿನಲ್ಲಿ ಅರ್ಧ ಗ್ರೇನು ಪೋಟ್ಯಾಶಪರಮಾಂಗನೇಟ ಹಾಕಿ, ಇದರಿಂದ ಕಡಿದ ಸ್ಥಳದ ಅಜೂಬಾಜೂಕ್ಕೆ ಹತ್ತುಹತ್ತು ಹನಿಗಳನ್ನು ಇಂಜಕ್ಷನ್ ಮಾಡಬೇಕು.

೬. ಗುದದ್ವಾರದಿಂದ ಸಾದಾ ನೀರಿನ ಬಸ್ತಿ ಕೊಟ್ಟು ಅಲ್ಲಿ ಸ್ವಲ್ಪ ನೀರು ಉಳಿಯುವಂತೆ ಮಾಡಬೇಕು.

೭. ಅಡ್ರಿನಲಿನ್ ಇಂಜಕ್ಷನ್ ಕೊಡಬೇಕು

೮. ಸಮೀಪದ ಸ್ಥಳದಲ್ಲಿ ಹಾಸ್ಪಿಟಲ್ ಇದ್ದರೆ ಅಂಟಿವೆನೀನ ಇಂಜ-ಕ್ಷನ್ ಕೊಡಿಸಲು ಕಳಿಸಬೇಕು.

೯. ಶ್ವಾಸೋಚ್ಛ್ವಾಸ ನಿಂತಿದ್ದರೆ ಕೃತ್ರಿಮರೀತಿಯಿಂದ ಪ್ರಾರಂಭಿಸಲು ಪ್ರಯತ್ನಿಸಬೇಕು.

೧೦. ಲೆಗರ್ಝಿನ ಮತ್ತು ತಿರಿಯಾಕ್, ಎಂಬ ಔಷಧಗಳು ಕೆಮಿಸ್ಟರ ಅಂಗಡಿಯಲ್ಲಿ ಸಿಗುತ್ತವೆ. ಇವೆರಡೂ ಹಾವಿನ ಔಷಧಕ್ಕೆ ಅತ್ಯಂತ ಗುಣ-ಕಾರಿ ಎಂದು ಪ್ರಸಿದ್ಧವಿರುವವು.

೧೧. ಮಾಂತ್ರಿಕರಿಂದ ಮಂತ್ರ ಪ್ರಯೋಗ ಮಾಡಿಸುವದು.

೧೯ ಹುಚ್ಚುನಾಯಿ ಕಡಿದರೆ

ಹುಚ್ಚುನಾಯಿ ರೋಗಕ್ಕೆ ಇಂಗ್ಲೀಷದಲ್ಲಿ ರೇಬೀಜ ಎಂಬ ಹೆಸರು ಇದೆ. ಈ ಬೇನೆ ನಾಯಿಗೆ ಅಂಟಿಕೊಳ್ಳುವ ಮೊದಲು ಹತ್ತು ದಿವಸ ಅದರ ಜೊಲ್ಲು

ದೂಷಿತವಾಗಿರುತ್ತವೆ. ಯಾವುದಾದರೊಂದು ನಾಯಿ ಕಾರಣವಿಲ್ಲದೆ ಕಚ್ಚಿದರೆ ಆ ನಾಯಿಯನ್ನು ಆದಷ್ಟು ಪ್ರಯತ್ನಮಾಡಿ ಹಿಡಿದು ಹದಿನಾಲ್ಕು ದಿವಸಗಳವರೆಗೆ ಕಟ್ಟಿ ಹಾಕಬೇಕು. ಈ ಅವಧಿಯಲ್ಲಿ ಆ ನಾಯಿಗೆ ಏನೂ ಆಗದೆ ಹಾಗೆಯೇ ಉಳಿದರೆ ಹುಚ್ಚುನಾಯಿ ಅಲ್ಲವೆಂದು ತಿಳಿದು ನಿರ್ಭಯದಿಂದ ಇರಬಹುದು. ಇಲ್ಲ ಒಂದು ವೇಳೆ ಅದು ಸತ್ತರೆ, ಹುಚ್ಚುನಾಯಿ ಎಂದು ತಿಳಿದು ಕೂಡಲೇ ಉಪಚಾರ ಪ್ರಾರಂಭಿಸಬೇಕು. ಇಲ್ಲವಾದರೆ ಅಪಾಯ ನಿಶ್ಚಿತ. ಕೇವಲ ಮಂತ್ರದ ದಾರಗಳ ಮೇಲೆ ಪೂರ್ಣ ವಿಶ್ವಾಸವಿಡದೆ ಹಾಸ್ಪಿಟಲ್‌ಗಳಿಗೆ ಹೋಗಿ ಯೋಗ್ಯ ಉಪಾಯಗಳನ್ನು ಮಾಡಿಸಿಕೊಳ್ಳಲು ಮರೆಯಬಾರದು.

೧. ಕಡಿದ ಸ್ಥಳದ ಮೇಲ್ಭಾಗದಲ್ಲಿ ಬಿಗಿಯಾದ ಕಟ್ಟು ಕಟ್ಟಬೇಕು.

೨. ಕಡಿದ ಸ್ಥಳವನ್ನು ಬಿಸಿ ನೀರಿನಿಂದ ತೊಳೆದು ಆ ಸ್ಥಳವನ್ನು ಸಿಲ್ವರ ನಾಯಟ್ರೇಟ ಅಥವಾ ಕಾರ್ಬಾಲಿಕ ಆಸಿಡ್‌ದಿಂದ ಸುಡಬೇಕು. ಲಿಂಬೇ ಹಣ್ಣು ಹೆಚ್ಚಿ ಅದರಿಂದ ಚನ್ನಾಗಿ ತಿಕ್ಕಬೇಕು. ಅನಂತರ ಹಾಸ್ಪಿಟಲ್‌ಕ್ಕೆ ಹೋಗಿ ಉಪಚಾರ ಮಾಡಿಸಬೇಕು.

೨೦ ಇಲಿ ವಿಷ

ಕಡಿದ ಸ್ಥಳದಲ್ಲಿ ಉತ್ತರಾಣಿಯ ರಸವನ್ನು ಹಚ್ಚಬೇಕು, ಮತ್ತು ಹೊಟ್ಟೆಯೊಳಗೂ ಕೊಡಬೇಕು. ಸಾಲ್ವರ್ಸನ ಇಂಜಕ್ಷನ್ ಕೊಡಿಸಬೇಕು. ಅಥವಾ ಸೋಡಿಯಮ ಕೇಕೋಡಾಯಲೇಟ ಇಂಜಕ್ಷನ ಕೊಡುವದು.

೨೧ ಕರಿಜೇರಗಿ ಹುಳ ಜೇನುನೊಣ ಕಡಿದರೆ

ನವಸಾಗರ ಹಾಕಿದ ನೀರಿನಿಂದ ತೊಳೆಯಬೇಕು. ನಂತರ ಗೋಪಿಚಂದನ ಸುಣ್ಣೀಕ್ಯಾವಿ ತೆಯ್ದು ಹಚ್ಚಬೇಕು.

೨೨ ಎಲ್ಲ ತರದ ವಿಷಕ್ಕೆ

ಗರುಡಪಾತಾಳ ಬೇರು, ಅಂಟಾಳಕಾಯಿ ತೆಯ್ದು ಕುಡಿಸಬೇಕು.

ಗಾಬರಿಯಾಗಿ ಕೈಕಾಲು ಕಳೆದುಕೊಳ್ಳಬಾರದು. ಧೈರ್ಯದಿಂದ ಉಪಚಾರ ಮುಂದುವರಿಸಬೇಕು.

ಡಾ. ಹಣಮಂತರಾವ ಸವಣೂರ, L. M. & S.

ಇವರು ರಚಿಸಿದ ಇಂಗ್ಲೀಷ ಗ್ರಂಥ

ಆಯುರ್ವೇದಿಕ್ ಮಟೇರಿಆ ಮೆಡಿಕಾ

ಬೆಲೆ: ಎಂಟು ರೂಪಾಯಿ

ಸಿಗುವ ಸ್ಥಳ:

ಡಾ. ಜತಾರ ಆ್ಯಂಡ ಸನ್ಸ

ಮಾರುತಿಗಲ್ಲಿ . . . . . ಬೆಳಗಾಂವಿ

ಈ ಗ್ರಂಥದಲ್ಲಿ ಆಯುರ್ವೇದೀಯ ದ್ರವ್ಯಗುಣ, ಪದಾರ್ಥ ವಿಜ್ಞಾನ ಶರೀರ ರಚನೆ, ತ್ರಿದೋಷ ವಿಚಾರ, ಪಚನ ವ್ಯಾಪಾರ, ರೋಗಪರೀಕ್ಷೆ ಪದ್ಧತಿ. ರೋಗ ನಿದಾನ ಹಾಗು ಚಿಕಿತ್ಸೆ ಮೊದಲಾದ ಉಪಯುಕ್ತ ವಿಷಯಗಳ ಬಗ್ಗೆ ಗ್ರಂಥಕರ್ತರು ಒಳ್ಳೇ ಶೋಧಕ ಬುದ್ಧಿಯಿಂದ ಶಾಸ್ತ್ರಯುಕ್ತ ವಿವೇಚನೆ ಮಾಡಿರುವರು. ಆಯುರ್ವೇದಕ್ಕೆ ಆಧಾರಭೂತವಾದ ಮೂಲತತ್ವಗಳ ಸುಂದರವಾದ ಈ ವಿವೇಚನೆಯಿಂದ

ವೈದ್ಯರೂ, ಡಾಕ್ಟರರೂ ಖಂಡಿತವಾಗಿ ತಮ್ಮ ಜ್ಞಾನಭಾಂಡಾರವನ್ನು ಹೆಚ್ಚಿಸಿಕೊಳ್ಳಬಹುದು.

◆◆◆

ವೈದ್ಯ ಮಧ್ವಾಚಾರ್ಯ ಬುರ್ಲಿಯವ

— ಉಪಯುಕ್ತ ಪುಸ್ತಕಗಳು —

ಸುಧಾರಿಸಿ ಬೆಳೆಸಿದ 'ಹಳ್ಳಿಯ ವೈದ್ಯ' (೩ನೇ ಆವೃತ್ತಿ)

ವಿದ್ಯಾರತ್ನ ಶ್ರೀಮಾನ್ ಆರ್. ಎಸ್. ಪಂಚಮುಖಿ, M. A. ಡಾಯರೆಕ್ಟರ
ಕನ್ನಡ ಸಂಶೋಧನ ಸಂಸ್ಥೆ ಧಾರವಾಡ ಇವರ ವಿದ್ವತ್ಪೂರ್ಣ
ಮುನ್ನುಡಿಯಿಂದ ಕೂಡಿದುದು.

ಸಿಗುವ ಸ್ಥಳ :

ಜಿ. ಎಚ್. ಚನ್ನಪ್ಪ ಬುಕ್ ಸೇಲರ್, ಬಾಗಲಕೋಟೆ



ಸುಲಭ ಔಷಧಿ ಸಂಗ್ರಹ

ಸಿಗುವ ಸ್ಥಳ :

ಯುನಾಯಿಟೆಡ್ ಏಜನ್ಸೀಜ, ಹುಬ್ಬಳ್ಳಿ



ಆಯುರ್ವೇದಿಯ ಪ್ರಥಮ ಚಿಕಿತ್ಸೆ

ಸಿಗುವ ಸ್ಥಳ :

ಆಯುರ್ವೇದ ಸೇವಾಕುಟಿ, ಬಾಗಲಕೋಟೆ



ಪಲಿಟೂರ ವೈದ್ಯ (ತೆಲಗು)

ಅಚ್ಚಿನಲ್ಲಿದೆ

ವೈದ್ಯ ಬುರ್ಲಿಯವರ ಪ್ರಕಟವಾಗಲಿರುವ ಪುಸ್ತಕಗ

- ಸ್ತ್ರೀರೋಗ ನಿದಾನ ಮತ್ತು ಚಿಕಿತ್ಸೆ
- ವನಸ್ಪತಿಗಳ ಸಂಸ್ಕೃತ ಕನ್ನಡ ನಿಘಂಟು
- ವೈದ್ಯ ಶತಶ್ಲೋಕ (ಕನ್ನಡ ಅನುವಾದ ಸಹಿತ)

◆◆◆